ಸಂಪುಟ: 05 ಸಂಚಿಕೆ: 333 ಪುಟಗಳು: 08 ಭಾನುವಾರ 15 ಫೆಬ್ರವರಿ 2026

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833 ₹5

**ಮುಂಜಾನೆ ಮಾತು**

ಕಷ್ಟವೂ ಬಡತನವೂ
ಬೋಧಿಸುವಂತೆ,
ಬೇರೆ ಯಾವುದೂ
ಬೋಧಿಸಲಾರದು..

# ಉದಯ ವಾಹಿನಿ

ಸರ್ವ ಸಮಾನತೆಯ
ಕನ್ನಡ ದಿನಪತ್ರಿಕೆ

## ವಿನ್ಯಾಸಗಾರರು ಬೇಕಾಗಿದ್ದಾರೆ

ಪೇಜ್ ಮೇಕರ್, ಇನ್ ಡಿಸೈನರ್, ಕನ್ನಡ ಟೈಪ್ ಮಾಡಬಲ್ಲವರು. ಬೆಂಗಳೂರಿನಲ್ಲಿ ವಾಸವಿರುವ



ಬೆಂಗಳೂರು ಕಚೇರಿಯಲ್ಲಿ ಕೆಲಸ ಮಾಡಲು ಇಚ್ಚಿಸುವ (4 ಮಂದಿ) ಪತ್ರಿಕೋದ್ಯಮದಲ್ಲಿ ತೀವ್ರ ಆಸಕ್ತಿ, ಕನ್ನಡ ಭಾಷೆಯ ಮೇಲೆ ಹಿಡಿತ, ಸಾಮಾನ್ಯ ಜ್ಞಾನ, ಓದುವ ಹವ್ಯಾಸ ಹಾಗೂ ಉತ್ಸಾಹ ಕಾತುರವಿರುವ ಆಸಕ್ತರಿಗೆ ನಿರ್ದಿಷ್ಟ ಪದವಿಯ ಅಗತ್ಯವಿಲ್ಲ. ವಯೋಮಿತಿ ಗರಿಷ್ಠ 25 ವರ್ಷ.

ಆಸಕ್ತರು ಕೂಡಲೇ ಈ ಕೆಳಗಿನ ವಿಳಾಸಕ್ಕೆ ತಮ್ಮ ಪೂರ್ಣ ವಿವರಗಳುಳ್ಳ ಅರ್ಜಿ ಸಲ್ಲಿಸಿ ಅಥವಾ ಮುಖತಃ ಭೇಟಿ ನೀಡಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
9448225696

ಉದಯ ವಾಹಿನಿ

#: 1230 'JAYAMAHAL 13th cross, 2nd phase, Girinagar, Bangalore-560085. (Near to bangalore one park, opposite mandya medical)
udayavahininews@gmail.com

# ಸ್ವಯಂ ನಿವೃತ್ತಿ ಪಡೆದು ಸ್ವಾಮೀಜಿಯಾದ ಕೆಎಎಸ್ ಅಧಿಕಾರಿಗೂ ಬಡ್ತಿ ನೀಡಿದ ರಾಜ್ಯ ಸರ್ಕಾರ!

## ಅಧಿಕಾರಿ ವರ್ಗಾವಣೆ ಕುರಿತು ಸಿಎಂ ನಕಲಿ ಪತ್ರ ವೈರಲ್ ಬೆನ್ನಲ್ಲೆ ಅಧಿಕಾರಿ ಬಡ್ತಿ ಎಡವಟ್ಟಿನ ಆರೋಪ


• ಉದಯವಾಹಿನಿ, ಬೆಂಗಳೂರು

ಸ್ವಯಂ ನಿವೃತ್ತಿ ಪಡೆದು ಸ್ವಾಮೀಜಿಯಾದ ಕೆಎಎಸ್ ಅಧಿಕಾರಿಗೂ ಬಡ್ತಿ ನೀಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಈ ಬಗ್ಗೆ ವಿರೋಧ ಪಕ್ಷದ ನಾಯಕ ಆರ್ ಅಶೋಕ್ ದಾಖಲೆ ಬಹಿರಂಗ ಪಡೆಸಿದ್ದಾರೆ. ಅಧಿಕಾರಿ ವರ್ಗಾವಣೆ ಕುರಿತು ಸಿಎಂ ನಕಲಿ ಪತ್ರ ವೈರಲ್ ಬೆನ್ನಲ್ಲೆ ಅಧಿಕಾರಿ ಬಡ್ತಿ ಎಡವಟ್ಟಿನ ಆರೋಪ ಕೇಳಿಬಂದಿದೆ.

20 ಕ್ಕೂ ಅಧಿಕ ಕೆಎಎಸ್ ಅಧಿಕಾರಿಗಳಿಗೆ ಬಡ್ತಿ ನೀಡಿ ರಾಜ್ಯ ಸರ್ಕಾರವು ಆದೇಶ ಹೊರಡಿಸಿದೆ. ಇದರಲ್ಲಿ ಸ್ವಯಂ ನಿವೃತ್ತಿ ಪಡೆದ ಎಚ್‌ಎಲ್ ನಾಗರಾಜ ಅವರ ಹೆಸರು ಇದೆ. ನಿವೃತ್ತಿ ಪಡೆದ ಅಧಿಕಾರಿಗೆ ಯಾಕೆ ಬಡ್ತಿ ನೀಡಿದೆ ಎಂದು ಬಿಜೆಪಿ ನಾಯಕರು ಪ್ರಶ್ನೆ ಮಾಡಿದ್ದು, ಇದರೊಂದು ಆಡಳಿತ ವೈಫಲ್ಯ ಎಂದು ಕಿಡಿಕಾರಿದೆ.

ಸಿಎಂ ಸಿದ್ದರಾಮಯ್ಯನವರೇ ನಿಮ್ಮ ಕಾಂಗ್ರೆಸ್ ಸರ್ಕಾರದ ಅದಕ್ಷತೆ, ಅಸಮರ್ಥತೆ ಈಗ ಯಾವ ಮಟ್ಟಕ್ಕೆ ತಲುಪಿದೆ ಗೊತ್ತಾ ಸೇವೆಯಿಂದ ಸ್ವಯಂನಿವೃತ್ತರಾಗಿ ಕಾವಿ ಧರಿಸಿ ಪೀಠಾಧಿಪತಿ ಆಗಿರುವವರಿಗೂ ''ಬಡ್ತಿ ಭಾಗ್ಯ'' ನೀಡುವ ಮಟ್ಟಕ್ಕೆ! ಒಬ್ಬ ಅಧಿಕಾರಿ



ಸೇವೆಯಿಂದ ನಿವೃತ್ತರಾಗಿ, ಸಂನ್ಯಾಸ ಸ್ವೀಕರಿಸಿ, ಆಧ್ಯಾತ್ಮಿಕ ಜೀವನ ನಡೆಸುತ್ತಿದ್ದರೂ, ನಿಮ್ಮ ಸರ್ಕಾರದ ದಾಖಲೆಗಳಲ್ಲಿ ಅವರು ಇನ್ನೂ ''ಸೇವೆಯಲ್ಲಿರುವ ಅಧಿಕಾರಿ''! ನಿಮ್ಮ ಘನಂದಾರಿ ಆಡಳಿತದಲ್ಲಿ ಮುಖ್ಯಮಂತ್ರಿಗಳು, ಸಚಿವರು, ಅಧಿಕಾರಿಗಳು ಸಹಿ ಮಾಡುವ ಮುನ್ನ ಫೈಲುಗಳನ್ನು ಓದುತ್ತಾರೋ ಕಣ್ಣು ಮುಚ್ಚಿಕೊಂಡು ಸಹಿ ಹಾಕುತ್ತಾರೋ ಎಂದು ಪ್ರಶ್ನೆ ಮಾಡಿದ್ದಾರೆ.

**ಸಾವಿರ ಎಡವಟ್ಟುಗಳ ಕಾಂಗ್ರೆಸ್**

**ರಾಜ್ಯ ಸರ್ಕಾರ ಇತ್ತೀಚೆಗೆ 20 ಕೆಎಎಸ್ ಅಧಿಕಾರಿಗಳಿಗೆ ಬಡ್ತಿ ನೀಡಿ ಅಧಿಕೃತ ಆದೇಶ ಹೊರಡಿಸಿದೆ. ಈ ಪಟ್ಟಿಯಲ್ಲಿ ಹಿರಿಯ ಶ್ರೇಣಿಯ ಅಧಿಕಾರಿಗಳಿಗೆ ಪದೋನ್ನತಿ ನೀಡಲಾಗಿದೆ. ಆದರೆ, ಅಚ್ಚರಿಯ ವಿಷಯವೆಂದರೆ ಈ ಪಟ್ಟಿಯಲ್ಲಿ ಈಗಾಗಲೇ ಸರ್ಕಾರಿ ಸೇವೆಯಿಂದ ಸ್ವಯಂ ನಿವೃತ್ತಿ ಪಡೆದಿರುವ ಹೆಚ್. ಎಲ್. ನಾಗರಾಜ (ಪ್ರಸ್ತುತ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ) ಅವರ ಹೆಸರೂ ಸೇರಿದೆ ಎಂದು ವಿರೋಧ ಪಕ್ಷದ ನಾಯಕರು ತಿಳಿಸಿದ್ದಾರೆ.**

**ಯಾವ ಅಧಿಕಾರಿ ಸೇವೆಯಲ್ಲಿದ್ದಾರೆ ನಿವೃತ್ತಿಯಾಗಿದ್ದಾರೆಂಬ ಮಾಹಿತಿ ಇಲ್ಲವೇ:** ನಿಮ್ಮ ಕಾಂಗ್ರೆಸ್ ಸರ್ಕಾರಕ್ಕೆ ಯಾವ ಅಧಿಕಾರಿಗಳು ಸೇವೆಯಲ್ಲಿ ಇದ್ದಾರೆ, ಯಾರು ನಿವೃತ್ತರಾಗಿದ್ದಾರೆ ಅನ್ನುವ ಕನಿಷ್ಠ ಮಾಹಿತಿಯೂ ಗೊತ್ತಿಲ್ಲದಿದ್ದರೆ, ರಾಜ್ಯದ ಜನತೆ ಆಡಳಿತ ಮತ್ತು ಅಭಿವೃದ್ಧಿ ವಿಚಾರದಲ್ಲಿ ನಿಮ್ಮ ಸರ್ಕಾರದ ಮೇಲೆ ಹೇಗೆ ವಿಶ್ವಾಸ ಇಡಬೇಕು ಸ್ವಾಮಿ ಇವತ್ತು ನಿವೃತ್ತರಾಗಿರುವ ಅಧಿಕಾರಿಯೊಬ್ಬರಿಗೆ ಬಡ್ತಿ ನೀಡಿದ್ದೀರಿ, ನಾಳೆ ನಿಧನ ಹೊಂದಿರುವ ಅಧಿಕಾರಿಗೆ ವರ್ಗಾವಣೆ ಆದೇಶ ಹೊರಡಿಸಿದರೂ ಆಶ್ಚರ್ಯವಿಲ್ಲ!

ಇದು ಕೇವಲ ಒಂದು ಆಕಸ್ಮಿಕ ಯಡವಟ್ಟು ಅಲ್ಲ. ಇದು ಆಡಳಿತ ವ್ಯವಸ್ಥೆಯ ಸಂಪೂರ್ಣ ಕುಸಿತದ ಸೂಚನೆ. ದಿನಕ್ಕೊಂದು ಎಡವಟ್ಟು, ಕ್ಷಣಕ್ಕೊಂದು ಮುಖಭಂಗ.

ಇನ್ನೆಷ್ಟು ದಿನ ಸ್ವಾಮಿ ಈ ಎಡವಟ್ಟು ಸರ್ಕಾರಕ್ಕೆ ಎಡವಟ್ಟು ಮುಖ್ಯಮಂತ್ರಿ ಆಗಿ ತಮ್ಮ ಗೌರವ ಕಳೆದುಕೊಳ್ಳುತ್ತೀರಿ. ಸಾಕು ಮಾಡಿ ಈ ಭಂಡ ಬಾಳು. ರಾಜೀನಾಮೆ ಕೊಟ್ಟು ಕರ್ನಾಟಕದ ಗೌರವ ಉಳಿಸಿ, ತಮ್ಮ ಇರೋಬರೋ ಅಲ್ಪ ಸ್ವಲ್ಪ ಗೌರವವನ್ನಾದರೂ ಉಳಿಸಿಕೊಳ್ಳಿ ಎಂದು ವಾಗ್ದಾಳಿ ನಡೆಸಿದ್ದಾರೆ.

## ಕಾಂಗ್ರೇಸ್ ಗೆಲ್ಲುವ ಸ್ಥಾನಗಳ ಬಗ್ಗೆ ಡಿಸಿಎಂ ಡಿಕೆಶಿ ಭವಿಷ್ಯ

• ಉದಯವಾಹಿನಿ, ಬೆಂಗಳೂರು

ಮುಂದಿನ ವಿಧಾನಸಭೆಯ ಚುನಾವಣೆಯಲ್ಲಿ (2028) ಕಾಂಗ್ರೆಸ್ ಗೆಲ್ಲುವ ಸ್ಥಾನಗಳ ಬಗ್ಗೆ ಡಿಸಿಎಂ ಡಿಕೆ ಶಿವಕುಮಾರ್ ಭವಿಷ್ಯ ನುಡಿದಿದ್ದಾರೆ. ಇನ್ನೂ ಕಳೆದ ಬಾರಿಯ ಚುನಾವಣೆಯಲ್ಲಿ ಡಿಕೆ ಶಿವಕುಮಾರ್ ಹೇಳಿದಷ್ಟೇ ಸ್ಥಾನವನ್ನು ಕಾಂಗ್ರೆಸ್ ಪಡೆದುಕೊಂಡಿತ್ತು.

ಈ ಬಾರಿ (2023) ಚುನಾವಣೆಯಲ್ಲಿ ನಮಗೆ 136 ಸೀಟುಗಳು ಬಂದಿದ್ದವು, ಮುಂದಿನ ಚುನಾವಣೆಯಲ್ಲಿ ನಮಗೆ 141 ಸೀಟುಗಳು ಬರಲಿವೆ. ನನ್ನ ಈ ಮಾತನ್ನು ಬರೆದಿಟ್ಟುಕೊಳ್ಳಿ. ನನಗೆ ನಮ್ಮ ಶಾಸಕರಿಗೆ ಆತ್ಮವಿಶ್ವಾಸವಿದೆ ಎಂದಿದ್ದಾರೆ. 3 ಕ್ಷೇತ್ರಗಳ ಉಪ ಚುನಾವಣೆಗಳಲ್ಲಿ ಎರಡು ಕಡೆ ಮಾಜಿ ಮುಖ್ಯಮಂತ್ರಿಗಳ ಪುತ್ರರು ಸ್ಪರ್ಧೆ ಮಾಡಿದ್ದರು. ಆ ಕ್ಷೇತ್ರಗಳು ನಮ್ಮ ಬಳಿ ಇರಲಿಲ್ಲ. ಆ ಕ್ಷೇತ್ರಗಳನ್ನು ಕಾಂಗ್ರೆಸ್‌ಗೆ ನೀಡಿ ನಮ್ಮ ಸಂಖ್ಯಾಬಲವನ್ನು 139ಕ್ಕೆ ಏರಿಕೆ ಮಾಡಿದ್ದೀರಿ. ನಿಮಗೆಲ್ಲರಿಗೂ ಧನ್ಯವಾದ. ನಿಮ್ಮ ಈ ಋಣ ತೀರಿಸಲು ಈ ಕಾರ್ಯಕ್ರಮವನ್ನು ಇಲ್ಲಿ ಆಯೋಜಿಸಿದ್ದೇವೆ'' ಎಂದು ತಿಳಿಸಿದರು.

''ಕಾಂಗ್ರೆಸ್ ಸರ್ಕಾರವು ಚುನಾವಣೆಗೂ ಮುನ್ನ ಘೋಷಣೆ ಮಾಡಿದ್ದ ಪಂಚ ಗ್ಯಾರಂಟಿಗಳ ಜತೆಗೆ ಆರನೇ ಗ್ಯಾರಂಟಿಯಾಗಿ ಭೂಮಿ ಗ್ಯಾರಂಟಿ ನೀಡುತ್ತಿದೆ. ಕೇಂದ್ರ ಸರ್ಕಾರ ರಾಜ್ಯದ ಪ್ರಮುಖ ನೀರಾವರಿ ಯೋಜನೆಗಳಾದ ಕೃಷ್ಣಾ ಮೇಲ್ದಂಡೆ, ಮೇಕೆದಾಟು, ಮಹದಾಯಿ, ಎತ್ತಿನಹೊಳೆಗೆ ಅನುಮತಿ ಕೊಟ್ಟರೆ 7ನೇ ಗ್ಯಾರಂಟಿಯಾಗಿ ನೀರಿನ ಗ್ಯಾರಂಟಿ ನೀಡಲಾಗುವುದು.

## ಗುರಿ ತಲುಪದ ತೆರಿಗೆಯಿಂದ ಸರಕಾರಕ್ಕೆ ಸಂಕಷ್ಟ

• ಉದಯವಾಹಿನಿ, ಬೆಂಗಳೂರು

ಪ್ರಸಕ್ತ 2025-26ನೇ ಆರ್ಥಿಕ ವರ್ಷಕ್ಕೆ ದಾಖಲೆಯ 4.09 ಲಕ್ಷ ಕೋಟಿ ರೂ. ಮೊತ್ತದ ಬಜೆಟ್ ಮಂಡನೆಯಾಗಿದ್ದರೂ ಸರಕಾರದ ಸ್ವಂತ ತೆರಿಗೆ ಮೂಲಗಳಿಂದ ವಾರ್ಷಿಕ ಗುರಿಯಷ್ಟು ಆದಾಯ ಸಂಗ್ರಹವಾಗುವುದು ಕಷ್ಟಸಾಧ್ಯವೆನಿಸಿದೆ. ಗುರಿ ತಲುಪಲು ಮಾರ್ಚ್ ಅಂತ್ಯದೊಳಗೆ 48,306 ಕೋಟಿ ರೂ. ಸಂಗ್ರಹವಾಗಬೇಕಿದ್ದು, ಅಬಕಾರಿ ಇಲಾಖೆ ಹೊರತುಪಡಿಸಿ ಉಳಿದ ಮೂರು ಮೂಲಗಳಿಂದ ವಾರ್ಷಿಕ ಗುರಿ ಸಾಧನೆ ಅನುಮಾನವೆನಿಸಿದೆ. ವಾಣಿಜ್ಯ ತೆರಿಗೆ, ಮುದ್ರಾಂಕ ಮತ್ತು ನೋಂದಣಿ, ಮೋಟಾರು ವಾಹನ ತೆರಿಗೆಯಿಂದ ಸುಮಾರು 15,000 ಕೋಟಿ ರೂ.ನಷ್ಟು ಆದಾಯ ಕೈತಪ್ಪುವ ಲಕ್ಷಣ ಕಾಣುತ್ತಿದೆ. ಇದು ಸರಕಾರದ ವೆಚ್ಚ, ಬಜೆಟ್ ಗಾತ್ರದ ಮೇಲೆ ಪರಿಣಾಮ ಬೀರಲಿದೆ.

ಪ್ರಸಕ್ತ ಸಾಲಿನಲ್ಲಿ ಬಂಡವಾಳ ವೆಚ್ಚಕ್ಕೆ 83,200 ಕೋಟಿ ರೂ. ವಿನಿಯೋಗಿಸುವುದಾಗಿ ಸರಕಾರ ಹೇಳುತ್ತಿದ್ದರೂ ತೆರಿಗೆ ಆದಾಯ ತಗ್ಗಿದರೆ ಅಭಿವೃದ್ಧಿ ಯೋಜನೆಗಳಿಗೆ ಬಳಕೆಯಾಗುವ ಅನುದಾನ ಕಡಿತವಾಗಲಿದೆ. ಅಬಕಾರಿ ಇಲಾಖೆಯಿಂದ ಮಾತ್ರ ಪ್ರಸಕ್ತ ಸಾಲಿನ ವಾರ್ಷಿಕ ಗುರಿಯಷ್ಟು ಆದಾಯ ಸಂಗ್ರಹ ನಿರೀಕ್ಷೆ ಇದೆ. 40,000 ಕೋಟಿ ರೂ. ವಾರ್ಷಿಕ ಗುರಿಯಡಿ ಜನವರಿ ಅಂತ್ಯಕ್ಕೆ 33,371ಕೋಟಿ ರೂ. ಸಂಗ್ರಹವಾಗಿದೆ. ಕಳೆದ 2024-25ನೇ ಸಾಲಿನಲ್ಲಿ ಜನವರಿ ಅಂತ್ಯಕ್ಕೆ 29,460 ಕೋಟಿ ರೂ. ಸಂಗ್ರಹವಾಗಿತ್ತು. ಅಂದರೆ ಹಿಂದಿನ ಸಾಲಿಗೆ ಹೋಲಿಸಿದರೆ ಶೇ.13.27ರಷ್ಟು ಬೆಳವಣಿಗೆ ಸಾಧಿಸಿದೆ. ಮಾಸಿಕ ಸರಾಸರಿ 3,000 ಕೋಟಿ ರೂ. ಆದಾಯ ಸಂಗ್ರಹದಿಂದಾಗಿ ಮಾರ್ಚ್ ಅಂತ್ಯದ ವೇಳೆಗೆ ಗುರಿ ಮೀರಿ ಸಾಧನೆಯಾಗುವ ವಿಶ್ವಾಸವನ್ನು ಅಬಕಾರಿ ಇಲಾಖೆ ಅಧಿಕಾರಿಗಳು ವ್ಯಕ್ತಪಡಿಸಿದ್ದಾರೆ.

# ಸಾವಿರ ಸಮಸ್ಯೆಗಳ ಸರ್ಕಾರ ಕಮಲ ಸಮರ

• ಉದಯವಾಹಿನಿ, ಬೆಂಗಳೂರು

ರಾಜ್ಯ ಸರ್ಕಾರದ ಸಾವಿರ ದಿನಗಳ ಕಾರ್ಯಕ್ರಮದ ವಿರುದ್ಧ ಪ್ರತಿಪಕ್ಷ ಬಿಜೆಪಿ ನಾಯಕರು ವಾಗ್ದಾಳಿ ನಡೆಸಿದ್ದಾರೆ. ಇದು ಸಾವಿರ ದಿನಗಳ ಸರ್ಕಾರ ಅಲ್ಲ, ಸಾವಿರಾರು ಸಮಸ್ಯೆಗಳ ಸರ್ಕಾರ ಎಂದು ಟೀಕಿಸಿದ್ದಾರೆ. ಈ ಸಂಬಂಧ ಟೀಕಿಸಿರುವ ಪ್ರತಿಪಕ್ಷ ನಾಯಕ ಆರ್. ಅಶೋಕ್, ಕಾಂಗ್ರೆಸ್ ಸರ್ಕಾರ ಸಾವಿರದ ದಿನಗಳಿಗಾಗಿ ಸಂಭ್ರಮಾಚರಣೆ ಮಾಡುತ್ತಿದೆ. ಆದರೆ ಕನ್ನಡಿಗರ ಪಾಲಿಗೆ, ಇದು ಸಾವಿರ ದಿನಗಳ ಸರ್ಕಾರ ಅಲ್ಲ, ಸಾವಿರಾರು ಸಮಸ್ಯೆಗಳ ಸರ್ಕಾರ. ಸಾವಿರಾರು ವೈಫಲ್ಯಗಳ ಸರ್ಕಾರ, ಸಾವಿರಾರು ಕೋಟಿ ಭ್ರಷ್ಟಾಚಾರದ ಸರ್ಕಾರ.

**ನುಂಗಪ್ಪಗಳ ಸರ್ಕಾರದಿಂದ ಕನ್ನಡಿಗರಿಗೆ ಸಾವಿರಾರು ಸಮಸ್ಯೆ**





**1** ಕಾಂಗ್ರೇಸ್ ಸರ್ಕಾರಕ್ಕೆ ಸಾವಿರ ದಿನಗಳು ಪೂರೈಸಿದ ಸಂಭ್ರಮ, ಹಾವೇರಿಯಲ್ಲಿ ಸಮಾವೇಶ

**2** ದೇಶದಲ್ಲಿ ಬಡವ ಬಲ್ಲಿದರಿಗೆ ಶಕ್ತಿ ತುಂಬುವ ಕಾರ್ಯಕ್ರಮ ಮುಂದುವರೆಸುತ್ತೇವೆ ಎಂದ ಸಿಎಂ

**3** ಈ ವೇಳೆ ಬಿಜೆಪಿ ವಿರುದ್ದ ಸಿಎಂ ಸಿದ್ದರಾಮಯ್ಯ ಕಿಡಿ

ಕರ್ನಾಟಕಕ್ಕೆ, ಕನ್ನಡಿಗರಿಗೆ ಇದು ಸಾವಿನ ಸೂತಕದ ಕರಾಳ ದಿನಗಳು ಎಂದು ಟೀಕಿಸಿದ್ದಾರೆ. ಸರ್ಕಾರಿ ಅಧಿಕಾರಿಗಳ, ನೌಕರರ ಸಾವು, ಆರ್‌ಸಿಬಿ ಅಭಿಮಾನಿಗಳ ಸಾವು, ಗುತ್ತಿಗೆದಾರರ ಸಾವು, ಅನ್ನದಾತ ರೈತರ ಸಾವು, ಸರ್ಕಾರಿ ಆಸ್ಪತ್ರೆಗಳಲ್ಲಿ ಬಾಣಂತಿಯರ ಸಾವು, ಭ್ರೂಣದಲ್ಲಿ ಹೆಣ್ಣು ಕಂದಮ್ಮಗಳ ಸಾವು, ಅತ್ಯಾಚಾರಕ್ಕೊಳಗಾಗಿ ಬಾಲಕಿಯರ ಸಾವು, ಸಾವಿರಾರು ಸಮಸ್ಯೆಗಳ ಸರ್ಕಾರ ಎಂದು ಕಿಡಿಕಾರಿದ್ದಾರೆ.

**ಜನರಿಗೆ ಕಾಯಿಸುವುದೇ ಸಿದ್ದರಾಮಯ್ಯರ ಕೈಲಾಸ ನೀತಿ:** ಬಿಜೆಪಿ ಕಚೇರಿಯಲ್ಲಿ ಶಾಸಕ ಅಶ್ವಥ್ ನಾರಾಯಣ ಜೊತೆ ಜಂಟಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಮೋದಿ ಸರ್ಕಾರದ್ದು ಕಾಯಕವೇ ಕೈಲಾಸ ನೀತಿ, ಸಿದ್ದರಾಮಯ್ಯ ಅವರದ್ದು ಜನರಿಗೆ ಕಾಯಿಸುವುದೇ ಕೈಲಾಸ ನೀತಿ. ಸಿದ್ದರಾಮಯ್ಯ ಸರ್ಕಾರ ಸಾವಿರ ದಿನಗಳನ್ನು ಪೂರೈಸಿ ಹಾವೇರಿಯಲ್ಲಿ ಸಮಾವೇಶ ಹಮ್ಮಿಕೊಂಡಿದೆ. ಮೋದಿಯವರ ನೇತೃತ್ವದಲ್ಲಿ ಕಾಯಕವೇ ಕೈಲಾಸ ಅಂತ ದೇಶವನ್ನು ಸರಿದಾರಿಗೆ ತೆಗೆದುಕೊಂಡು ಹೋಗುವ ಕೆಲಸ ಮಾಡಲಾಗುತ್ತಿದೆ. ಮೋದಿ ಸರ್ಕಾರದ್ದು ಕಾಯಕವೇ ಕೈಲಾಸ ನೀತಿ, ಸಿದ್ದರಾಮಯ್ಯ ಅವರದ್ದು ಜನರಿಗೆ ಕಾಯಿಸುವುದೇ ಕೈಲಾಸ ನೀತಿ. ನಮ್ಮ ರಾಜ್ಯದಲ್ಲಿ ಒಬ್ಬ ಅನುಭವಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಯೋಜನೆಗಳು ರಾಜ್ಯದ ಜನರಿಗೆ ಕಾಯುವುದೇ ಕೈಲಾಸ ಅನ್ನುವ ರೀತಿ ಸತಾಯಿಸ್ತಿದ್ದಾರೆ ಎಂದು ಟೀಕಿಸಿದರು.

ರಾಜ್ಯವನ್ನು ಸಿದ್ದರಾಮಯ್ಯ ಕುಡುಕರ ರಾಜ್ಯ ಮಾಡುತ್ತಿದ್ದಾರೆ. ಅಬಕಾರಿ ಇಲಾಖೆಯಲ್ಲಿ ಮಹಾತ್ಮ ಗಾಂಧಿಗೆ ಅಪಮಾನ ಮಾಡಲಾಗುತ್ತಿದೆ. ಲೂಟಿ ಹೊಡೆಯಲಾಗಿದೆ. ನೂರು ಸುಳ್ಳು ಹೇಳಿ ಮದುವೆ ಮಾಡು ಎನ್ನುವಂತೆ ಸಾವಿರ ಸುಳ್ಳು ಹೇಳಿ ನಾಡಿನ ಜನರಿಗೆ ಅನ್ಯಾಯ ಎಸಗಿದ್ದಾರೆ ಸಿದ್ದರಾಮಯ್ಯ. ಅಹಿಂದ ಹೆಸರಲ್ಲಿ ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ, ಒಕ್ಕಲಿಗ ಸಮುದಾಯಗಳಿಗೆ ಅನ್ಯಾಯ. 170 ಕೋಟಿಯಲ್ಲಿ ಜಾತಿ ಗಣತಿ ಮಾಡಿಸಿದ್ರು. ರಾಹುಲ್ ಗಾಂಧಿ ಹೇಳಿದ್ರು ಅಂತ ಅದನ್ನು ತಿಪ್ಪೆಗೆ ಎಸೆದರು. ಎರಡನೇ ಬಾರಿಗೆ ಈಗ 450 ಕೋಟಿ ವೆಚ್ಚ ಮಾಡಿ ಕೆಆರ್


ನುಡಿದಂತೆ ನಡೆದುಕೊಂಡಿದ್ದೇವೆ ಅಂತಾರೆ. ಖಾಲಿ ಹುದ್ದೆಗಳ ಭರ್ತಿ ಮಾಡುವ ಮಾತು ಈಡೇರಿಸಿಲ್ಲ. ನೇಮಕಾತಿ ಪ್ರಕ್ರಿಯೆ ಕೂಡಾ ಶುರು ಮಾಡದೇ ಯುವ ಜನಕ್ಕೆ ಮೋಸ, ಒಳಮೀಸಲಾತಿ ನೆಪ ಇಟ್ಕೊಂಡು ನೇಮಕಾತಿ ಮಾಡ್ತಿಲ್ಲ. 2006ರ ನಂತರದ ಸರ್ಕಾರಿ ನೌಕರರಿಗೆ ಒಪಿಎಸ್ ಜಾರಿ ಮಾಡಿಲ್ಲ. ಅಂಗನವಾಡಿ ಕಾರ್ಯಕರ್ತೆಯರ ಗೌರವ ಧನ, ಆಶಾ ಕಾರ್ಯಕರ್ತೆಯರ ಗೌರವ ಧನ, ಬಿಸಿಯೂಟ ಕಾರ್ಯಕರ್ತೆಯರ ಗೌರವ ಧನ ಹೆಚ್ಚಿಸುವ ಭರವಸೆ ಇನ್ನೂ ಈಡೇರಿಸಿಲ್ಲ. ಮೈಸೂರು, ಹುಬ್ಬಳ್ಳಿ ಟೆಕ್ ಪಾರ್ಕ್ ನಿರ್ಮಾಣ ಭರವಸೆ ಈಡೇರಿಸಿಲ್ಲ ಎಂದು ಆರೋಪಿಸಿದರು.

**ನುಡಿದಂತೆ ನಡೆದಿದ್ದೇವೆ ಅಂತಾರೆ ಆದರೆ**

## ರಾಜ್ಯ ಸರ್ಕಾರದ ಸಾವಿರ ದಿನಗಳ ಕಾರ್ಯಕ್ರಮ ಬಿಜೆಪಿ ನಾಯಕರಿಂದ ಟೀಕಾ ಪೋಸ್ಟರ್

**ಸರ್ಕಾರದ ವಿರುದ್ಧ ಪೋಸ್ಟರ್ ಬಿಡುಗಡೆ**

ಇತ್ತ ರಾಜ್ಯ ಸರ್ಕಾರದ ಸಾವಿರ ದಿನಗಳ ಕಾರ್ಯಕ್ರಮ ವಿರೋಧಿಸಿ ಪೋಸ್ಟರ್ ಬಿಡುಗಡೆ ಮಾಡಲಾಯಿತು. ಬಿ.ವೈ. ವಿಜಯೇಂದ್ರ ಸರ್ಕಾರದ ವಿರುದ್ಧ ಪೋಸ್ಟರ್ ಬಿಡುಗಡೆ ಮಾಡಿದರು. ಸಾವಿರ ದಿನ ಸಾವಿರ ಸಮಸ್ಯೆ ಎಂಬ ಅಡಿ ಬರಹ ಇರುವ ಪೋಸ್ಟರುಗಳನ್ನು ಬಿಡುಗಡೆ ಮಾಡಿದರು. ಅಭಿವೃದ್ಧಿ ಶೂನ್ಯ, ಭ್ರಷ್ಟಾಚಾರ ಅನನ್ಯ ಎಂಬ ಅಡಿ ಬರಹದೊಂದಿಗೆ ಸರ್ಕಾರದ ವಿರುದ್ಧ ಕೇಳಿ ಬಂದಿರುವ ಭ್ರಷ್ಟಾಚಾರಗಳ ಪಟ್ಟಿಯ ಪೋಸ್ಟರ್ ಬಿಡುಗಡೆ ಮಾಡಲಾಗಿದೆ.



**ಅಧಿಕಾರ ಹಂಚಿಕೆ ಬಗ್ಗೆ ಹೈಕಮಾಂಡ್ ಉತ್ತರ**

ಹೊರಟಿದ್ದಾರೆ ಎಂದು ದೂರಿದ್ದಾರೆ.

**ಎಸ್-ಎಸ್‌ಟಿ ಒಬಿಡಿ ಮತಬ್ಯಾಂಕ್ ಅಷ್ಟೇ- ವಿಜಯೇಂದ್ರ:** ಎಸ್‌ಸಿ-ಎಸ್‌ಟಿ, ಒಬಿಸಿ ವರ್ಗಗಳನ್ನು ಮತ ಬ್ಯಾಂಕ್ ಮಾಡಿಕೊಂಡಿದ್ದಾರೆ. ಈ ವರ್ಗಗಳಿಗೆ ಬದುಕು ಕಟ್ಟಿಕೊಟ್ಟಿಲ್ಲ ಸಿದ್ದರಾಮಯ್ಯ. ಅಂದಿನ ಬಿಜೆಪಿ ಸರ್ಕಾರದ ಮೇಲೆ ಶೇ.40ರಷ್ಟು ಕಮೀಷನ್ ಆರೋಪ ಮಾಡಿದ್ರು. ರಾಮರಾಜ್ಯ ಮಾಡ್ತೀವಿ ಅಂತ ಅಧಿಕಾರಕ್ಕೆ ಬಂದ್ರು. ಅಧಿಕಾರಕ್ಕೆ ಬಂದ ಮೇಲೆ ಜನರ ಕಿವಿಗೆ ಹೂ ಮುಡಿಸಿದ್ದಾರೆ.

ವಾಲ್ಮೀಕಿ ನಿಗಮ ಹಗರಣ, ಅಬಕಾರಿ, ಸ್ಮಾರ್ಟ್ ಮೀಟರ್ ಹಗರಣ, ಗೃಹಲಕ್ಷ್ಮಿ ಹಗರಣ, ಮುಡಾ ಹಗರಣಗಳನ್ನು ಮಾಡಿದ್ದಾರೆ.

ಗೃಹಲಕ್ಷ್ಮಿ ಯೋಜನೆಯ 5ಸಾವಿರ ಕೋಟಿ ಎಲ್ಲಿಗೆ ಹೋಗಿದೆ ಅಂತ ಸಿಎಂ ಇನ್ನೂ ಉತ್ತರ ಕೊಟ್ಟಿಲ್ಲ. ಭ್ರಷ್ಟಾಚಾರದಲ್ಲಿ ಸರ್ಕಾರ ಮುಳುಗಿದೆ ಎಂದು ಆರೋಪಿಸಿದರು. ಕಾಂಗ್ರೆಸ್ ಹೈಕಮಾಂಡ್‌ಗೆ ರಾಜ್ಯವನ್ನು ಸರ್ಕಾರ ಅಡ ಇಟ್ಟಿದೆ. ಹೈಕಮಾಂಡ್ ಖುಷಿ ಪಡಿಸಿ ಕುರ್ಚಿ ಭದ್ರ ಮಾಡಿಕೊಳ್ಳಲಾಗುತ್ತಿದೆ. ಜನ ಈ ಸರ್ಕಾರದಿಂದ ಬೇಸತ್ತಿದ್ದಾರೆ. ಗ್ಯಾರಂಟಿಗಳಿಂದ ಜನರ ಸಬಲೀಕರಣ ಆಗಿದೆ ಅಂತ ಬಡಾಯಿ ಕೊಚ್ಚಿಕೊಳ್ತಾರೆ. ಇವರ ಪಂಚ ಗ್ಯಾರಂಟಿಗಳು ಪಂಚರ್ ಆಗಿ ವರ್ಷಗಳೇ ಕಳೆದಿವೆ. ರಸ್ತೆ ಗುಂಡಿಗಳನ್ನು ಮುಚ್ಚಲೂ ಈ ಅಯೋಗ್ಯ ಕಾಂಗ್ರೆಸ್ ಸರ್ಕಾರದಿಂದ ಆಗಿಲ್ಲ. ಇವರ ಸಾಧನೆ ಅಂದ್ರೆ, ಭ್ರಷ್ಟಾಚಾರಕ್ಕೆ ಸಾಂಸ್ಥಿಕ ರೂಪ ಕೊಟ್ಟಿರೋದು. ಸರ್ಕಾರ ಕಳೆದ ಎರಡೂಮುಕ್ಕಾಲು ವರ್ಷದಲ್ಲಿ ಓಲೈಕೆ ಮೂಲಕ ಹಿಂದೂಗಳಿಗೆ ಅನ್ಯಾಯ ಮಾಡ್ತಿದೆ.

**ರೈಲ್ವೆ ಯೋಜನೆಗೆ ಹಣ ಕೊಟ್ಟಿಲ್ಲ**

**ಕೇಂದ್ರ ಸರ್ಕಾರ ರಾಜ್ಯಕ್ಕೆ ಅನುದಾನ ನೀಡುತ್ತಿಲ್ಲ ಎಂದು ದೂರುತ್ತಿರುವ ರಾಜ್ಯ ಸರ್ಕಾರ ರೈಲ್ವೆ ಯೋಜನೆಗಳಿಗೆ ತನ್ನ ಪಾಲಿನ ಹಣ ಕೊಟ್ಟಿಲ್ಲ ಎಂಬ ದಾಖಲೆಯನ್ನು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಬಿಡುಗಡೆ ಮಾಡಿದ್ದಾರೆ. ಬಿಜೆಪಿ ಕಚೇರಿಯಲ್ಲಿಂದು ಮಹಾರಾಷ್ಟ್ರದ ನಾಂದೇಡ್‌ನಿಂದ ಬೀದರ್‌ಗೆ ಸಂಪರ್ಕ ಕಲ್ಪಿಸುವ 156 ಕಿ.ಮೀ. ರೈಲ್ವೆ ಯೋಜನೆಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. ಮಹಾರಾಷ್ಟ್ರ ತನ್ನ ಪಾಲನ್ನು ಘೋಷಣೆ ಮಾಡಿದೆ ಆದರೆ ರಾಜ್ಯ ಸರ್ಕಾರ ಇದುವರೆಗೂ ಯೋಜನೆಗೆ ಹಣ ಕೊಟ್ಟಿಲ್ಲ. ಹಾಗಾಗಿ ಈ ಯೋಜನೆ ಜಾರಿಯಾಗಿಲ್ಲ. ರಾಜ್ಯಸಭಾ ಸದಸ್ಯ ಅಶೋಕ್ ಚೌಹ್ವಾಣ್ ತಮಗೆ ಬರೆದಿರುವ ಪತ್ರ ಬಿಡುಗಡೆ ಮಾಡಿದರು.**

# ಶೀಘ್ರದಲ್ಲೇ ಪಡಿತರ ವಿತರಕರ ಸಮಸ್ಯೆಗಳ ಚಿಂತನ ಮಂಥನ: ಅಧ್ಯಕ್ಷ ಕೃಷ್ಣಪ್ಪ

## ▸ಕರ್ನಾಟಕ ಅತಿ ಹೆಚ್ಚು ಅಂದರೆ 4.34 ಕೋಟಿ ಪಡಿತರ ಚೀಟಿದಾರರಿಗೆ 20,000ಕ್ಕೂ ಹೆಚ್ಚು ನ್ಯಾಯಬೆಲೆ ಅಂಗಡಿ ಮಾಲೀಕರು



ರಾಷ್ಟ್ರೀಯ ಕಾರ್ಯಾಧ್ಯಕ್ಷ ಕೃಷ್ಣಪ್ಪ

• ಉದಯವಾಹಿನಿ ಬೆಂಗಳೂರು

ರಾಷ್ಟ್ರದ್ಯಂತ ಕೇಂದ್ರ ಸರ್ಕಾರದ ಆಹಾರ ಭದ್ರತಾ ಯೋಜನೆ ಅಡಿಯಲ್ಲಿ ಹಾಗೂ ಕರ್ನಾಟಕ ಸರ್ಕಾರವು ಸಹ ಜಂಟಿಯಾಗಿ ಜಾರಿಗೆ ತಂದಿರುವ ಅನ್ನಭಾಗ್ಯ ಯೋಜನೆ ಅಡಿಯಲ್ಲಿ ಇಡೀ ದೇಶವೇ ಕರ್ನಾಟಕ ಅತಿ ಹೆಚ್ಚು ಅಂದರೆ 4.34 ಕೋಟಿ ಪಡಿತರ ಚೀಟಿದಾರರಿಗೆ 20,000ಕ್ಕೂ ಹೆಚ್ಚು ನ್ಯಾಯಬೆಲೆ ಅಂಗಡಿ ಮಾಲೀಕರು ಪ್ರತಿ ತಿಂಗಳು ಸರ್ಕಾರ ಬಿಡುಗಡೆ ಮಾಡುವ ಆಹಾರ ಧಾನ್ಯಗಳನ್ನು ರಾಜ್ಯದ ಬಿಪಿಎಲ್ ಕಾಡುದಾರರಿಗೆ ರಾಷ್ಟ್ರದಲ್ಲಿ ಅತಿ ಹೆಚ್ಚು ಬಿಪಿಎಲ್ ಕಾರ್ಡ್ ಹೊಂದಿರುವ ಕರ್ನಾಟಕದಲ್ಲಿ ಸಮರ್ಪಕವಾಗಿ ವಿತರಣೆ ಮಾಡುತ್ತ ಬರುತ್ತಿರುವ ರಾಜ್ಯ ಸರ್ಕಾರಿ ನ್ಯಾಯಬೆಲೆ ಅಂಗಡಿ ಮಾಲೀಕರಿಗೆ ಕೂಡಲೇ ಕಮಿಷನ್ ಹೆಚ್ಚಳ ಮಾಡಬೇಕು ಮತ್ತು ಕೇಂದ್ರ ಸರ್ಕಾರದ

**ಕಮಿಷನ್ ಹೆಚ್ಚಳಕ್ಕೆ ಕೃಷ್ಣಪ್ಪ ಆಗ್ರಹ**



ಬಾಕಿ ಇರುವ ಕಮಿಷನ್ ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ರಾಜ್ಯ ಪಡಿತರ ವಿತರಕರ ಸಂಘದ ಅಧ್ಯಕ್ಷ ಹಾಗೂ ರಾಷ್ಟ್ರೀಯ ಕಾರ್ಯ ಅಧ್ಯಕ್ಷ ಕೃಷ್ಣಪ್ಪ ಹೇಳಿದರು

ಬೆಂಗಳೂರಿನಲ್ಲಿ ಉದಯವಾಹಿನಿಯೊಂದಿಗೆ ಮಾತನಾಡಿದ ಅವರು ಕೇಂದ್ರ ಸರ್ಕಾರದ ಆಹಾರ ಸಚಿವರಾದ ಪ್ರಹ್ಲಾದ್ ಜೋಶಿ ಅವರನ್ನು ಭೇಟಿ ಮಾಡಿ ಮನವಿ ಮಾಡಿದ್ದು ಶೀಘ್ರದಲ್ಲಿ ಕಮಿಷನ್ ಬಿಡುಗಡೆಗೆ ಕ್ರಮ ಕೈಗೊಳ್ಳಲಾಗುವುದು ಭರವಸೆ ನೀಡಿದ್ದಾರೆ ಎಂದು ಕೃಷ್ಣಪ್ಪ ಹೇಳಿದರು

**ರಾಷ್ಟ್ರಮಟ್ಟದಲ್ಲಿ ಪಡಿತರ ವಿತರಕರ ಸಮಸ್ಯೆಗಳ ಬಗ್ಗೆ ಚಿಂತನ ಮಂಥನ ಕಾರ್ಯಕ್ರಮ**

**ಬರುವ ಕೆಲವೇ ದಿನಗಳಲ್ಲಿ ನವದೆಹಲಿಯಲ್ಲಿ ರಾಷ್ಟ್ರಾದ್ಯಂತ ಪಡಿತರ ವಿತರಕರನ್ನು ಒಂದೆಡೆ ಸೇರಿಸಿ ಕೇಂದ್ರದ ಆಹಾರ ಸಚಿವರು ಹಾಗೂ ಕೇಂದ್ರ ಸರ್ಕಾರದ ಆಹಾರ ಇಲಾಖೆಯ ಉನ್ನತ ಅಧಿಕಾರಿಗಳು ಒಂದೆಡೆ ಸೇರಿಸಿ ಪಡಿತರ ವಿತರಕರ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಿ ಸಮಸ್ಯೆಗಳ ಬಗೆಹರಿಸುವುದಕ್ಕಾಗಿ ರಾಷ್ಟ್ರೀಯ ಪಡಿತರ ವಿತರಕರ ಸಂಘ ಇದರ ನೇತೃತ್ವದಲ್ಲಿ ಆಯೋಜಿಸಲಾಗುವುದೆಂದು ರಾಷ್ಟ್ರೀಯ ಪಡಿತರ ವಿತರಕರ ಸಂಘದ ಕಾರ್ಯಾಧ್ಯಕ್ಷ ಹಾಗೂ ರಾಜ್ಯ ಪಡಿತರ ವಿತರಕರ ಸಂಘದ ರಾಜ್ಯಾಧ್ಯಕ್ಷ ಕೃಷ್ಣಪ್ಪ ತಿಳಿಸಿದರು**

# ರಾಜ್ಯದ ಪ್ರಮುಖ ಹೆದ್ದಾರಿ ಎನ್‌ಎಚ್ 52 ಚತುಷ್ಪಥವಾಗಿ ಅಭಿವೃದ್ಧಿ

## ● ವಾಹನಗಳ ಸಂಚಾರ ಗಣನೀಯ ಹೆಚ್ಚಳ ● ಕೆಲಸ ಆರಂಭಿಸಿದ ಕೇಂದ್ರ ಸರ್ಕಾರ; 4 ಜಿಲ್ಲೆಗೆ ಅನುಕೂಲ

• ಉದಯವಾಹಿನಿ, ಬೆಂಗಳೂರು

ಕರ್ನಾಟಕದಲ್ಲಿ ಹಾದು ಹೋಗುವು ಪ್ರಮುಖ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಒಂದಾದ ಹುಬ್ಬಳ್ಳಿ - ವಿಜಯಪುರ ಹೆದ್ದಾರಿಯನ್ನು 4 ಪಥಕ್ಕೆ ವಿಸ್ತರಿಸುವ ಕೆಲಸಕ್ಕೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ಚಾಲನೆ ನೀಡಿದೆ. ಇದರಿಂದ ನಾಲ್ಕು ಜಿಲ್ಲೆಗಳ ಹಲವು ನಗರ, ಪಟ್ಟಣಗಳಿಗೆ ಅನುಕೂಲವಾಗಲಿದೆ.

ಈ ಯೋಜನೆಯಲ್ಲಿ ನವಲಗುಂದ ಮತ್ತು ನರಗುಂದ ಬೈಪಾಸ್‌ಗಳ ನಿರ್ಮಾಣವೂ ಸೇರಿದೆ. ಈ ಬಗ್ಗೆ ವಿವರವಾದ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲು ಟೆಂಡರ್ ಕರೆಯಲಾಗಿದೆ. ಇದರಿಂದಾಗಿ ಪ್ರಸ್ತುತ 2 ಪಥದ ಎನ್‌ಎಚ್ 52 ಹೆದ್ದಾರಿಯು ಚತುಷ್ಪಥ ಪಥಗಳಾಗಿ ವಾಹನ ಸಂಚಾರ ಸುಗಮವಾಗಿ, ಪ್ರಯಾಣಿಕರ ಸಮಯ ಉಳಿಯಲಿದೆ .

**ಪ್ರಯಾಣಿಕರ ಸಮಯ ಉಳಿತಾಯ**



**ನಾಲ್ಕು ಜಿಲ್ಲೆಗಳ ಮೂಲಕ ಹಾದುಹೋಗಲಿದೆ**

ಈ 199 ಕಿಲೋಮೀಟರ್ ಉದ್ದದ ರಾಷ್ಟ್ರೀಯ ಹೆದ್ದಾರಿಯು ಧಾರವಾಡ, ಗದಗ, ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳ ಮೂಲಕ ಹಾದುಹೋಗುತ್ತದೆ. ನವಲಗುಂದ, ನರಗುಂದ, ಕೊಣ್ಣೂರು, ಕುಲಗೇರಿ, ಕೆರೂರು, ಗಡದಕೇರಿ, ಬೀಳಗಿ ಮತ್ತು ಕೊಲ್ಹಾರ ಕೊರ್ತಿಯಂತಹ ಪಟ್ಟಣಗಳನ್ನು ಇದು ಸಂಪರ್ಕಿಸುತ್ತದೆ.

ಉತ್ತರ ಕರ್ನಾಟಕವನ್ನು ದಕ್ಷಿಣ ಮಹಾರಾಷ್ಟ್ರಕ್ಕೆ ಜೋಡಿಸುವ ಪ್ರಮುಖ ಮಾರ್ಗ ಇದಾಗಿದೆ. ಇದು 2,317 ಕಿಲೋಮೀಟರ್ ಉದ್ದದ ಎನ್‌ಎಚ್ 52 ಉತ್ತರ-ದಕ್ಷಿಣ ಕಾರಿಡಾರ್‌ನ ಒಂದು ಭಾಗ ಇದಾಗಿದೆ.

ಕೋವಿಡ್ - 19 ನಂತರ ಈ ಹೆದ್ದಾರಿಯಲ್ಲಿ ವಾಹನಗಳ ಸಂಚಾರ ಗಣನೀಯವಾಗಿ ಹೆಚ್ಚಾಗಿದೆ. ಇದರಿಂದಾಗಿ ಮೂಲಸೌಕರ್ಯ ಸುಧಾರಿಸುವ ಅಗತ್ಯ ಎದುರಾಗಿದೆ. ನವಲಗುಂದ ಮತ್ತು ನರಗುಂದ ಪಟ್ಟಣಗಳ ಕೇಂದ್ರ ಭಾಗದಲ್ಲಿ ಕಿರಿದಾದ ರಸ್ತೆಗಳು ಸಂಚಾರಕ್ಕೆ ಅಡ್ಡಿಯಾಗುತ್ತಿವೆ. ದೊಡ್ಡ ಕಾರ್ಯಕ್ರಮಗಳು ಮತ್ತು ಪ್ರತಿಭಟನೆಗಳು ಏನಾದರೂ ನಡೆದರೇ ಗಂಟೆಗಟ್ಟಲೆ ಟ್ರಾಫಿಕ್ ಜಾಮ್‌ಗೆ ಕಾರಣವಾಗುತ್ತಿವೆ. ಅಲ್ಲದೆ, ಈ 2 ಪಥದ ಹೆದ್ದಾರಿಯಲ್ಲಿ ಅನೇಕ ಅಪಘಾತಗಳು ಸಂಭವಿಸಿ ಜೀವಹಾನಿಯೂ ಆಗಿದೆ. ಹೀಗಾಗಿ, 4 ಪಥಕ್ಕೆ ವಿಸ್ತರಿಸುವ ಬೇಡಿಕೆ ಹೆಚ್ಚಾಗಿತ್ತು.

**ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅನುಮೋದನೆ**

**ನವಲಗುಂದ ಮತ್ತು ನರಗುಂದ ಎರಡಕ್ಕೂ ಬೈಪಾಸ್‌ಗಳನ್ನು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ಅನುಮೋದಿಸಿದ್ದಾರೆ. ಆದರೆ ನವಲಗುಂದ ಬೈಪಾಸ್‌ನ ಜೋಡಣೆಯಲ್ಲಿ ಕೆಲವು ಬದಲಾವಣೆಗಳನ್ನು ಕೋರಲಾಗಿತ್ತು. ನವಲಗುಂದ ಪಟ್ಟಣದ ಬಲಭಾಗದಲ್ಲಿ ಬೈಪಾಸ್ ನಿರ್ಮಿಸುವಂತೆ ನಾವು ಒತ್ತಾಯಿಸಿದ್ದೇವೆ. ಇದರಿಂದ ಬೆಣ್ಣೆಹಳ್ಳದ ಪ್ರವಾಹ ಸಂದರ್ಭದಲ್ಲಿ ಪಟ್ಟಣದಲ್ಲಿ ನೀರು ನುಗ್ಗುವ ಪರಿಸ್ಥಿತಿ ತಪ್ಪುತ್ತದೆ. ಅಣ್ಣಿಗೇರಿ ರಸ್ತೆಗೆ ಸರಿಯಾಗಿ ಸಂಪರ್ಕ ಕಲ್ಪಿಸುತ್ತದೆ. ಆದ್ದರಿಂದ, ಇದನ್ನು ಡಿಪಿಆರ್ ತಯಾರಿಕೆಯಲ್ಲಿ ಸೇರಿಸಲಾಗಿದೆ ಎಂದು ಮಾಜಿ ಸಚಿವ ಶಂಕರ್ ಪಾಟೀಲ್ ಮುನೇನಕೊಪ್ಪ ಅವರು ಮಾಧ್ಯಮಗಳಿಗೆ ತಿಳಿಸಿದ್ದಾರೆ.**

**ಈ ದಿನದ ದರ** ಪೆಟ್ರೋಲ್: 102.92 ₹/L | ಡೀಸೆಲ್ : 90.03 ₹/L | ಬಂಗಾರ: ₹15,775/Gram24ct ₹14,460/Gram22ct | ಬೆಳ್ಳಿ: ₹275.00/Gram

# ಪೊಲೀಸರಿಗೂ ತಟ್ಟಿದ ಸಿಐಡಿ ತನಿಖೆ ಸಂಕಷ್ಟ

• ಉದಯವಾಹಿನಿ, ಬೆಂಗಳೂರು

ರೌಡಿ ಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವ ಕೊಲೆ ಪ್ರಕರಣದಲ್ಲಿ ಬಿಜೆಪಿ ಶಾಸಕ ಭೈರತಿ ಬಸವರಾಜು ಬಂಧನವಾಗಿರುವ ಬೆನ್ನಲ್ಲೇ ಎರಡನೇ ಹಂತದಲ್ಲಿ ಕೆಲ ಪೊಲೀಸರಿಗೂ ಸಿಐಡಿ ತನಿಖಾ ಸಂಕಷ್ಟ ಶುರುವಾಗಿದೆ. ಬಿಕ್ಲುಶಿವ ಹತ್ಯೆ ಪ್ರಕರಣದಲ್ಲಿ ಸ್ಥಳೀಯ ಪೊಲೀಸರ ವೈಫಲ್ಯ, ಕೈವಾಡವಿದೆ. ಇದನ್ನು ಖಚಿತಪಡಿಸಿಕೊಳ್ಳಲು ಈಗಾಗಲೇ ಬಂಧಿಸಲ್ಪಟ್ಟಿರುವ ಭೈರತಿ ಬಸವರಾಜು ಅವರನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಬೇಕಿದೆ ಎಂದು ಸಿಐಡಿ ಅಧಿಕಾರಿಗಳು ಕೆಲ ದಿನಗಳ ಹಿಂದೆ ಹೈಕೋರ್ಟ್‌ಗೆ ತಿಳಿಸಿದ್ದರು.

ಈಗ ಆರೋಪಿ ಭೈರತಿ ಬಸವರಾಜು ಸಿಐಡಿ ವಶದಲ್ಲಿದ್ದು, ಬಿಕ್ಲು ಶಿವ ಹತ್ಯೆ ಕೇಸ್‌ನಲ್ಲಿ ಪೊಲೀಸರ ಪಾತ್ರ ಏನು ಎಂಬುದನ್ನು ಬಾಯ್ಬಿಡಿಸಲು ಸಿದ್ಧತೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.



ಭೈರತಿ ಬಸವರಾಜು ವಿಚಾರಣೆ ಬಳಿಕ ಬಿಕ್ಲುಶಿವ ಹತ್ಯೆ ಕೇಸ್‌ಗೆ ಸಂಬಂಧಿಸಿದಂತೆ ಭಾರತಿನಗರದ ಕೆಲವು ಪೊಲೀಸರನ್ನು ವಿಚಾರಣೆ ನಡೆಸಲು ತನಿಖಾಧಿಕಾರಿಗಳು ತೀರ್ಮಾನಿಸಿದ್ದಾರೆ.

**ತನಿಖಾ ಕ್ರಮದ ಬಗ್ಗೆ ಅನುಮಾನ:** ಪ್ರಮುಖವಾಗಿ ಭೈರತಿ ಬಸವರಾಜು ಆಪ್ತ ರೌಡಿ ಜಗದೀಶ್ ಅಲಿಯಾಸ್ ಜಗ್ಗನ್ನ ಹತ್ಯೆಗೆ ಸಂಚು ರೂಪಿಸಿದ್ದಾನೆ, ಎಂದು ಬಿಕ್ಲು ಶಿವ ನೀಡಿದ್ದ ದೂರನ್ನು ಗಂಭೀರವಾಗಿ ತನಿಖೆ ನಡೆಸದೆ ಎನ್‌ಸಿಆರ್‌ನಲ್ಲಿ ಮುಕ್ತಾಯಗೊಳಿಸಿದ್ದ ಕ್ರಮದ ತನಿಖೆ ನಡೆಯಲಿದೆ. ಬಿಕ್ಲುಶಿವ ಹತ್ಯೆ ಬಳಿಕ ನಡೆದ ತನಿಖಾ ಕ್ರಮದ ಬಗ್ಗೆಯೂ ಕೆಲವು ಅನುಮಾನಗಳಿವೆ.

ಬೆಳಗಾವಿ ಅಧಿವೇಶನದ ಬಳಿಕ ನಾಪತ್ತೆಯಾಗಿದ್ದ ಪ್ರಕರಣದ ಐದನೇ ಆರೋಪಿ ಭೈರತಿ ಬಸವರಾಜು ಅವರ ವಿರುದ್ಧ ಸಿಐಡಿ ಲುಕೌಟ್ ನೋಟಿ ಜಾರಿಗೊಳಿಸದ ಬಳಿಕ ಬಂಧಿಸಿತ್ತು. ಇದೀಗ ಅವರನ್ನು ಶನಿವಾರ ನ್ಯಾಯಾಧೀಶರ ಮುಂದೆ ಹಾಜರುಪಡಿಸಿ ಕಸ್ಟಡಿಗೆ ನೀಡುವಂತೆ ಕೋರಲಾಗುವುದು. ಬಳಿಕ ಬಿಕ್ಲು ಶಿವ ಹತ್ಯೆ ಕೊಲೆಯ ಕುರಿತು ವಿಚಾರಣೆ ನಡೆಸಲಾಗುವುದು. ಜತೆಗೆ, ಈಗ ದೊರಕಿರುವ ದಾಖಲೆಗಳನ್ನು ಮುಂದಿಟ್ಟು ಬಿಕ್ಲು ಶಿವನ ಹತ್ಯೆಗೆ ಪರೋಕ್ಷವಾಗಿ ಕಾರಣವಾಗಿರುವ ಕೆಲವು ಪೊಲೀಸ್ ಅಧಿಕಾರಿಗಳ ಪಾತ್ರದ ಬಗ್ಗೆಯೂ ಮಾಹಿತಿ ಪಡೆಯಬೇಕಿದೆ ಎಂದು ಮೂಲಗಳು ತಿಳಿಸಿವೆ.

**ಸ್ಥಳೀಯ ಪೊಲೀಸರ ವೈಫಲ್ಯ**

**ರೌಡಿಶೀಟ್ ಕ್ಲೋಸ್ ಮಾಡಿದ್ದ ಖಾಕಿ:** ಬಿಕ್ಲುಶಿವನ ಕೊಲೆಯ ಪ್ರಮುಖ ಆರೋಪಿಯಾಗಿರುವ ಜಗದೀಶ್ ಅಲಿಯಾಸ್ ಜಗ್ಗನ ವಿರುದ್ಧ ನಗರದ ವಿವಿಧ ಪೊಲೀಸ್ ಠಾಣೆಗಳಲ್ಲಿ 16 ಕ್ರಿಮಿನಲ್ ಪ್ರಕರಣಗಳು ದಾಖಲಾಗಿದ್ದವು. ಈ ಪೈಕಿ 15 ಕೇಸ್‌ಗಳು ಮುಕ್ತಾಯಗೊಂಡಿದ್ದು, ರಾಮಮೂರ್ತಿನಗರ ಠಾಣೆಯಲ್ಲಿ ಒಂದು ಪ್ರಕರಣ ಬಾಕಿ ಇತ್ತು. ಹೀಗಿದ್ದರೂ, 2023ರಲ್ಲಿ ಜಗ್ಗನ ಹೆಸರನ್ನು ರೌಡಿಪಟ್ಟಿಯಿಂದ ತೆಗೆಯಲಾಗಿತ್ತು. ಪೊಲೀಸರ ಈ ಕ್ರಮವು ಹಲವು ಅನುಮಾನಗಳಿಗೆ ಕಾರಣವಾಗಿದೆ ಎಂದು ಮೂಲಗಳು ಹೇಳಿವೆ. 2025ರ ಜುಲೈ 15ರಂದು ರಾತ್ರಿ ಮನೆ ಮುಂದೆ ನಿಂತಿದ್ದ ಹಲಸೂರಿನ ರೌಡಿ ಶೀಟರ್ ಬಿಕ್ಲ ಶಿವ ಅಲಿಯಾಸ್ ಶಿವಪ್ರಕಾಶ್ ಅವರನ್ನು ದುಷ್ಕರ್ಮಿಗಳ ತಂಡವೊಂದು ಅವರ ತಾಯಿಯ ಎದುರೇ ಕೊಚ್ಚಿ ಕೊಲೆ ಮಾಡಿತ್ತು. ಇದರಲ್ಲಿ ಶಾಸಕ ಭೈರತಿ ಬಸವರಾಜು ಅವರ ಕುಮ್ಮಕ್ಕು ಇದೆ ಎಂದು ಬಿಕ್ಲು ಶಿವ ಅವರ ತಾಯಿ ಆರೋಪ ಮಾಡಿದ್ದರು.

## ಕಾಫಿ ಬಿಲ್ ಕೇಳಿದ ಕ್ಯಾಂಟೀನ್‌ಸಿಬ್ಬಂದಿ ಮೇಲೆ ಪೊಲೀಸರ ಹಲ್ಲೆ: ಆರೋಪ

• ಉದಯವಾಹಿನಿ, ದೇವನಹಳ್ಳಿ

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಆವರಣದಲ್ಲಿರುವ ಆಲ್ಫಾ ಕ್ಯಾಂಟೀನ್‌ನಲ್ಲಿ ಕಾಫಿ ಸೇವಿಸಿದ ಪೊಲೀಸರನ್ನು ಬಿಲ್ ಕೇಳಿದ ಸಿಬ್ಬಂದಿ ಮೇಲೆ ಮೂವರು ಪೊಲೀಸ್ ಕಾನ್‌ಸ್ಟೆಬಲ್‌ಗಳು ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ. ಈಚೆಗೆ ರಾತ್ರಿ ಬೀಟ್‌ನಲ್ಲಿ ಇದ್ದ ಗಂಗರಾಜು, ಬಾಳಪ್ಪ ಹಾಗೂ ಕುಮಾರ್ ಅವರು ಕ್ಯಾಂಟೀನ್‌ನಲ್ಲಿ ಕಾಫಿ ಕುಡಿದಿದ್ದರು. ನಂತರ ಸಿಬ್ಬಂದಿ ಬಿಲ್ ಕೇಳಿದ್ದಾರೆ. ಈ ವೇಳೆ 'ನಾವು ಪೊಲೀಸರು. ನಮಗೆ ಬಿಲ್‌ಏಕೆ?' ಎಂದು ದರ್ಪದಿಂದ ವರ್ತಿಸಿದ್ದಾರೆ' ಎಂಬ ಆರೋಪ ಕೇಳಿಬಂದಿದೆ.ವಾಗ್ವಾದ ತೀವ್ರಗೊಂಡು ಪೊಲೀಸರು, ಕ್ಯಾಂಟೀನ್ ಸಿಬ್ಬಂದಿಯನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ನಡೆಸಿದ್ದಾರೆ ಎನ್ನಲಾಗಿದೆ. ಘಟನೆ ದೃಶ್ಯಗಳು ಕ್ಯಾಂಟೀನ್ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದೆ.

## ರಾಗಿ ಖರೀದಿ ಆರಂಭ

• ಉದಯವಾಹಿನಿ, ದೊಡ್ಡಬಳ್ಳಾಪುರ

ಕರ್ನಾಟಕ ಆಹಾರ, ನಾಗರಿಕ ಸರಬರಾಜು ನಿಗಮ ನಿಯಮಿತದಿಂದ ತಾಲ್ಲೂಕಿನಲ್ಲಿ ಬೆಂಬಲ ಬೆಲೆಗೆ ರಾಗಿ ಖರೀದಿ ಪ್ರಕ್ರಿಯೆ ಆರಂಭಗೊಂಡಿದ್ದು, ಈ ಬಾರಿ ನೋಂದಣಿ ಮುಗಿದಿದೆ. ಈಗಾಗಲೇ ನೋಂದಣಿ ಮಾಡಿಕೊಂಡಿರುವ ರೈತರು ಟ್ರ್ಯಾಕ್ಟರ್, ಇತರೆ ಗೂಡ್ಸ್ ವಾಹನಗಳಲ್ಲಿ ರಾಗಿ ತಂದಿದ್ದಾರೆ. ರಾಗಿ ಖರೀದಿ ಕೇಂದ್ರದಲ್ಲಿ ರಾಗಿ ಹೊತ್ತ ಟ್ರ್ಯಾಕ್ಟರ್ ಗಳು ಸಾಲುಗಟ್ಟಿ ನಿಂತಿರುವ ದೃಶ್ಯ ಕಂಡುಬಂದಿದೆ. ನಗರದ ಎಪಿಎಂಸಿ ಆವರಣದ ರೈತ ಸಂಪರ್ಕ ಕೇಂದ್ರದಲ್ಲಿ ಶಾಸಕ ಧೀರಜ್ ಮುನಿರಾಜು ರಾಗಿ ಖರೀದಿ ಪ್ರಕ್ರಿಯೆಗೆ ಚಾಲನೆ ನೀಡಿ ಮಾತನಾಡಿ, ರಾಗಿ ಖರೀದಿಯಲ್ಲಿ ಹಿಂದಿನ ವರ್ಷಗಳಂತೆ ಗೊಂದಲಗಳಾಗದಂತೆ ವ್ಯವಸ್ಥಿತವಾಗಿ ಖರೀದಿ ಪ್ರಕ್ರಿಯೆ ನಡೆಸಬೇಕಿದೆ. ಮಧ್ಯವರ್ತಿಗಳು ಗುಣಮಟ್ಟವಿಲ್ಲದ ರಾಗಿಯನ್ನು ತಂದು ಹಾಕುವ ಸಂಭವಗಳಿವೆ. ಆದರೆ ರೈತರು ಗುಣಮಟ್ಟದ ರಾಗಿಯನ್ನೇ ತರುತ್ತಾರೆ. ರೈತರ ರಾಗಿಯನ್ನು ತಿರಸ್ಕರಿಸದೇ ಖರೀದಿಸಬೇಕು ಎಂದರು. ರೈತರು ಸಹ ಗುಣಮಟ್ಟದ ರಾಗಿ ತರಬೇಕಿದೆ. ಖರೀದಿ ವೇಳೆ, ಒಂದು ದಿನಕ್ಕೆ ಎಷ್ಟು ಖರೀದಿ ಮಾಡಬಹುದೆಂಬ ಅಂಶಗಳ ಮೇಲೆ ರೈತರಿಗೆ ದೂರವಾಣಿ ಮಾಡಿ ಕರೆಸಿಕೊಳ್ಳಬೇಕಿದೆ. ಗ್ರಾಮ ಪಂಚಾಯಿತಿವಾರು ಕರೆದರೆ ರೈತರಿಗೆ ಸಾಗಾಣಿಕೆ ವೆಚ್ಚ ಕಡಿಮೆಯಾಗುತ್ತದೆ ಎಂದು ಸಲಹೆ ನೀಡಿದರು.

## ಇಂದು ಮಾಂಸ ಮಾರಾಟ ನಿಷೇಧ: ಸೂಪರ್ ಮಾರ್ಕೆಟ್‌ಲೂ ಸಿಗುವುದಿಲ್ಲ

• ಉದಯವಾಹಿನಿ, ಬೆಂಗಳೂರು

ಇಂದು ಮಹಾ ಶಿವರಾತ್ರಿ ಹಬ್ಬದ ಪ್ರಯುಕ್ತ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿ ಪ್ರಾಣಿ ವಧೆ ಹಾಗೂ ಮಾಂಸ ಮಾರಾಟವನ್ನು ಸಂಪೂರ್ಣ ನಿಷೇಧಿಸಲಾಗಿದೆ. ಈ ಕುರಿತು ಜಿಬಿಎ ಪಶುಪಾಲನೆ ವಿಭಾಗದ ಉಪ ನಿರ್ದೇಶಕರು ಆದೇಶ ಹೊರಡಿಸಿದ್ದಾರೆ. ಭಾನುವಾರ ಮಹಾ ಶಿವರಾತ್ರಿ ಆಚರಿಸಲ್ಪಡುವುದರಿಂದ ಆ ದಿನವಿಡಿ ಜಿಬಿಎ ವ್ಯಾಪ್ತಿಯ ಎಲ್ಲಿಯೂ ಪ್ರಾಣಿ ವಧೆ, ಮಾಂಸ ಮಾರಾಟ ಮಾಡಲು ಯಾವುದೇ ಅವಕಾಶ ಇರುವುದಿಲ್ಲ. ಅಲ್ಲದೇ ಸೂಪರ್ ಮಾರ್ಕೆಟ್, ಇನ್ನಿತರ ಮಳಿಗೆಗಳಲ್ಲಿಯೂ ಮಾಂಸ ಮಾರಾಟಕ್ಕೆ ಆಸ್ಪದ ಇಲ್ಲ ಎಂದು ಆದೇಶದಲ್ಲಿ ತಿಳಿಸಿದ್ದಾರೆ. ಒಂದು ವೇಳೆ ಆದೇಶ ಉಲ್ಲಂಘಿಸಿ ಮಾಂಸ ಮಾರಾಟ, ಪ್ರಾಣಿ ವಧೆ ಮಾಡಿದರೆ ನಿಯಮಾನುಸಾರ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದು ಎಚ್ಚರಿಸಿದ್ದಾರೆ. ಈ ಕುರಿತು ಎಕ್ಸ್‌ನಲ್ಲಿ ಜಿಬಿಎ ಪೋಸ್ಟ್ ಮಾಡಿದೆ.

## ಜಯನಗರ ಕ್ಷೇತ್ರ: ಚುನಾವಣಾ ತಕರಾರು ಅರ್ಜಿ; ಮಾ.2ರಿಂದ ನಿತ್ಯ ವಿಚಾರಣೆ

• ಉದಯವಾಹಿನಿ, ಬೆಂಗಳೂರು

ರಾಜ್ಯ ವಿಧಾನಸಭೆಗೆ 2023ರಲ್ಲಿ ನಡೆದಿದ್ದ ಸಾರ್ವತ್ರಿಕ ಚುನಾವಣೆಯಲ್ಲಿ ಬೆಂಗಳೂರಿನ ಜಯನಗರ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿ ಕೆ.ಸಿ.ರಾಮಮೂರ್ತಿ ಆಯ್ಕೆಯಾಗಿರುವುದನ್ನು ಅಸಿಂಧುಗೊಳಿಸಬೇಕು ಎಂದು ಕೋರಿ ಕಾಂಗ್ರೆಸ್‌ನ ಪರಾಜಿತ ಅಭ್ಯರ್ಥಿ ಸೌಮ್ಯಾ ರೆಡ್ಡಿ ಸಲ್ಲಿಸಿರುವ ಚುನಾವಣಾ ತಕರಾರು ಅರ್ಜಿಯನ್ನು ಹೈಕೋರ್ಟ್ ಮಾರ್ಚ್ 2ರಿಂದ ಕಲಾಪದ ಎಲ್ಲಾ ದಿನಗಳಲ್ಲಿ ನಿತ್ಯ ವಿಚಾರಣೆ ನಡೆಸಲಿದೆ. ಸಿ.ಕೆ.ರಾಮಮೂರ್ತಿ ಅವರನ್ನು ವಿಜೇತ ಅಭ್ಯರ್ಥಿಯಾಗಿ ಘೋಷಿಸಿ ಚುನಾವಣಾ ಆಯೋಗ ಪ್ರಕಟಿಸಿರುವ ಫಲಿತಾಂಶವನ್ನು ರದ್ದುಪಡಿಸಬೇಕು, 827 ಅಂಚೆ ಮತಗಳನ್ನು ಮರು ಎಣಿಕೆ ಮಾಡಲು ಚುನಾವಣಾ ಆಯೋಗಕ್ಕೆ ನಿರ್ದೇಶಿಸಬೇಕು ಎಂದು ಕೋರಿ ಸೌಮ್ಯಾ ರೆಡ್ಡಿ ಸಲ್ಲಿಸಿರುವ ಚುನಾವಣಾ ತಕರಾರು ಅರ್ಜಿಯನ್ನು ನ್ಯಾಯಮೂರ್ತಿ ಎಸ್.ರಾಚಯ್ಯ ಅವರಿದ್ದ ಏಕಸದಸ್ಯ ನ್ಯಾಯಪೀಠ ಮುಂದುವರಿಸಿತು. ವಿಚಾರಣೆ ವೇಳೆ ವಿಚಾರಣೆ ವೇಳೆ ಸಿ.ಕೆ.ರಾಮಮೂರ್ತಿ ಪರ ವಕೀಲರು ಕೆಲವು ಕಡತಗಳನ್ನು ಸಲ್ಲಿಸಲು ಮತ್ತಷ್ಟು ಕಾಲಾವಕಾಶ ಕೋರಿದರು.

# ಮೂರ್ನಾಲ್ಕು ತಿಂಗಳಲ್ಲಿ ಜಾತಿಗಣತಿ ವರದಿ ಸಲ್ಲಿಕೆ

### ನಾಯಕತ್ವದ ಬದಲಾವಣೆಯ ಬಗ್ಗೆ ಹೈಕಮಾಂಡ್ ಯಾವುದೇ ಹೇಳಿಕೆ ನೀಡಿಲ್ಲ ಎಂದ ಮೇಲೆ ಅದರ ಬಗ್ಗೆ ಚರ್ಚೆ ಮಾಡುವ ಅಗತ್ಯವೇ ಇಲ್ಲ

• ಉದಯವಾಹಿನಿ, ಬೆಂಗಳೂರು

ನಾಯಕತ್ವದ ಬದಲಾವಣೆಯ ಬಗ್ಗೆ ಹೈಕಮಾಂಡ್ ಈವರೆಗೂ ಯಾವುದೇ ಹೇಳಿಕೆ ನೀಡಿಲ್ಲ ಎಂದ ಮೇಲೆ ಅದರ ಬಗ್ಗೆ ಚರ್ಚೆ ಮಾಡುವ ಅಗತ್ಯವೇ ಇಲ್ಲ. ರಾಜ್ಯದ ನಾಯಕರು ನೀಡುವ ಹೇಳಿಕೆಗಳಿಗೆಲ್ಲಾ ಉತ್ತರ ನೀಡುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವದ್ದಂತಿಗಳನ್ನು ತಳ್ಳಿ ಹಾಕಿದ್ದಾರೆ. ಹಾವೇರಿಯಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿರುವ ಅವರು, ನಾಯಕತ್ವ ವಿಚಾರಕ್ಕೆ ಸಂಬಂಧಪಟ್ಟಂತೆ ಪದೇ ಪದೇ ಪ್ರಶ್ನೆ ಕೇಳಬೇಡಿ ಅದಕ್ಕೆ ನಾನು ಉತ್ತರ ನೀಡುವುದಿಲ್ಲ ಎಂದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಶ್ರಮಕ್ಕೆ ತಕ್ಕ ಫಲ ಸಿಗುತದೆ ಎಂದು ಹೇಳಿರುವುದಕ್ಕೆ ಹಾಗೂ ಐದು ವರ್ಷ ಕಾಲ ತಮ ತಂದೆಯವರೆ ಮುಖ್ಯಮಂತ್ರಿಯಾಗಿ ಮುಂದುವರೆಯುತ್ತಾರೆ ಎಂದು ಡಾ.ಯತೀಂದ್ರ ಸಿದ್ದರಾಮಯ್ಯ ಪುನರುಚ್ಚರಿಸಿರುವುದಕ್ಕೆ ಸಂಬಂಧಪಟ್ಟಂತೆ ಪದೇ ಪದೇ ಪ್ರಶ್ನೆಗಳು ಎದುರಾದಾಗ ಸಿದ್ದರಾಮಯ್ಯ ಸಿಡಿಮಿಡಿಯಾದರು. ಹೈಕಮಾಂಡ್ ಹೇಳಿದಂತೆ ನಡೆದುಕೊಳ್ಳುತ್ತೇನೆ ಎಂದು ನಾನು ಈಗಾಗಲೇ ಹೇಳಿದ್ದೇನೆ. ರಾಜ್ಯದ ಎಲ್ಲಾ ನಾಯಕರು ಹೈಕಮಾಂಡ್ ಹೇಳಿದಂತೆ ನಡೆದುಕೊಳ್ಳಬೇಕು ಎಂದರು. ಅಧಿಕಾರ ಹಂಚಿಕೆಗೆ ಸಂಬಂಧಪಟ್ಟಂತೆ ಯಾರು ಏನು ಹೇಳಿದ್ದಾರೆ ಎಂಬುದು ಮುಖ್ಯ ಅಲ್ಲ. ಹೈಕಮಾಂಡ್ ನಾಯಕರು ಏನಾದರೂ ಹೇಳಿದ್ದಾರೆಯೇ ? ಹೇಳಿಲ್ಲ ಎಂದಾದ ಮೇಲೆ ಅದನ್ನು ಬಿಟ್ಟು ಬಿಡಿ. ಸ್ಥಳೀಯ ನಾಯಕರು ನೀಡಿರುವ ಹೇಳಿಕೆಗಳಿಗೆಲ್ಲಾ ನಾನು ಉತ್ತರ ಕೊಡುವುದಿಲ್ಲ ಎಂದರು. ಅಧಿಕಾರ ಹಂಚಿಕೆ ಸಂಬಂಧಪಟ್ಟಂತೆ ಮಾತುಕತೆಗಾಗಿ ಹೈಕಮಾಂಡ್ ತಮಗೆ ಆಹ್ವಾನ ನೀಡಿದರೆ, ನಾನು ದೆಹಲಿಗೆ ಹೋಗುತ್ತೇನೆ. ಆದರೆ ಯಾವ ದಿನದಂದು ಕರೆಯುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ ಎಂದರು. ನಮ ಸರ್ಕಾರ 5 ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸಿದೆ. ನಮ್ಮ ಸರ್ಕಾರ ಕೊಟ್ಟ ಮಾತಿನಂತೆ ನಡೆದುಕೊಂಡಿದೆ. ಮುಂದಿನ ದಿನಗಳಲ್ಲೂ ಯೋಜನೆಗಳು ಮುಂದುವರಿಯಲಿವೆ. ಈ ಹಿಂದೆ ತಾವು ಮುಖ್ಯಮಂತ್ರಿ ಆಗಿದ್ದಾಗ ನೀಡಿದ್ದ ಬಹುತೇಕ ಭರವಸೆಗಳನ್ನು ಈಡೇರಿಸಿದ್ದೇವೆ. ಅನಂತರ ಅಧಿಕಾರಕ್ಕೆ ಬಂದ ಬಿಜೆಪಿಯವರು ತಮ್ಮ ಪ್ರಣಾಳಿಕೆಯಲ್ಲಿ 600 ಭರವಸೆಗಳನ್ನು ನೀಡಿ, ಅದರಲ್ಲಿ ಶೇ.10ರಷ್ಟನ್ನು ಈಡೇರಿಸಲಿಲ್ಲ. ಪ್ರಸಕ್ತ ಎರಡುವರೆ ವರ್ಷದಲ್ಲಿ 592 ಭರವಸೆಗಳ ಪೈಕಿ 292ಕ್ಕೂ ಹೆಚ್ಚು ಭರವಸೆಗಳನ್ನು ಈಡೇರಿಸಿದ್ದೇವೆ. ಬಿಜೆಪಿಯವರು ಹೊಟ್ಟೆ ಕಿಚ್ಚಿನಿಂದ ಭ್ರಷ್ಟಾಚಾರ ಸೇರಿದಂತೆ ಹಲವಾರು ವಿಚಾರಗಳಲ್ಲಿ ತಮ ವಿರುದ್ಧ ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದರು.



> **ರಾಜ್ಯ ಸರ್ಕಾರಕ್ಕೆ ನೂರು ದಿನ ತುಂಬಿರುವುದಕ್ಕೆ ಹಾವೇರಿಯಲ್ಲಿಂದು ಬೃಹತ್ ಸಮಾವೇಶ ನಡೆಸಲಾಗುತ್ತಿದೆ. ಇದನ್ನು ಬಿಜೆಪಿಯವರು ಟೀಕಿಸುವುದು ಅರ್ಥಹೀನ. ನಾಲ್ಕು ವರ್ಷ ಅವರು ಅಧಿಕಾರ ನಡೆಸಿದ್ದರು. ಆಗ ಏನನ್ನು ಸಾಧನೆ ಮಾಡಲಿಲ್ಲ.**
> **- ಸಿದ್ದರಾಮಯ್ಯ, ಮುಖ್ಯಮಂತ್ರಿ**

**ಮತ್ತೆ ಮುನ್ನೆಲೆಗೆ ಬಂದ ಜಾತಿಗಣತಿ ವರದಿ**

**ಸಾಮಾಜಿಕ ಶೈಕ್ಷಣಿಕ ಸಮೀಕ್ಷೆ ವರದಿಯನ್ನು ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಧ್ಯಕ್ಷರು ಮೂರು ನಾಲ್ಕು ತಿಂಗಳ ಒಳಗಾಗಿ ಸಲ್ಲಿಸಲಿದ್ದಾರೆ. ಆನಂತರ ಸರ್ಕಾರ ಅದರ ಬಗ್ಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳಲಿದೆ, ವರದಾ-ಬೆಡ್ತಿ ನದಿಗಳ ಜೋಡಣೆ ಸಂಬಂಧ ಪಟ್ಟಂತೆ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಈಗಾಗಲೇ ವಿಸ್ತೃತ ಯೋಜನಾ ವರದಿಯನ್ನು ಸಲ್ಲಿಸಿದೆ. ಯೋಜನೆ ಅನುಷ್ಠಾನಕ್ಕೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರ ನಿರ್ಧಾರ ತೆಗೆದುಕೊಳ್ಳಬೇಕು. ಆದರೆ ಅವರು ಯಾವ ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂಬ ವಿಶ್ವಾಸ ಕಡಿಮೆ ಇದೆ ಎಂದರು.**

## ಲಾಕರ್‌ನಲ್ಲಿಟ್ಟಿದ್ದ 4 ಕೋಟಿ ಚಿನ್ನ ಕದ್ದ ಬ್ಯಾಂಕ್ ಮ್ಯಾನೇಜರ್ ಸೆರೆ

• ಉದಯವಾಹಿನಿ, ಬೆಂಗಳೂರು

ಸಿನಿಮಾ ಶೈಲಿಯಂತೆ ಗ್ರಾಹಕರು ಲಾಕರ್‌ನಲ್ಲಿಟ್ಟಿದ್ದ ಬರೋಬ್ಬರಿ 4 ಕೋಟಿ ಮೌಲ್ಯದ ಚಿನ್ನವನ್ನು ತೆಗೆದುಕೊಂಡು ಫೈನಾನ್ಸ್‌ಗಳಲ್ಲಿ ಅಡವಿಟ್ಟು ಹಣ ಪಡೆದು ಆನ್‌ಲೈನ್ ಬೆಟ್ಟಿಂಗ್, ಕ್ಯಾಸಿನೋಗೆ ಬಳಸಿಕೊಂಡಿದ್ದ ಬ್ಯಾಂಕ್‌ವೊಂದರ ಸಹಾಯಕ ಮ್ಯಾನೇಜರ್‌ನನ್ನು ಗಿರಿನಗರ ಠಾಣೆ ಪೊಲೀಸರು ಬಂದಿಸಿದ್ದಾರೆ. ಗಿರಿನಗರದ ಇಂಡಿಯನ್ ಬ್ಯಾಂಕ್‌ನ ಸಹಾಯಕ ಮ್ಯಾನೇಜರ್ ಕಿರಣ್‌ಕುಮಾರ್(35)ಬಂಧಿತ ಆರೋಪಿ.

ಈತನಿಂದ 700 ಗ್ರಾಂ ಆಭರಣವನ್ನು ವಶಪಡಿಸಿಕೊಂಡಿದ್ದು, ಉಳಿದ ಆಭರಣಗಳನ್ನು ವಶಪಡಿಸಿಕೊಳ್ಳುವ ಕಾರ್ಯ ಮುಂದುವರೆದಿದೆ. ಜೂನ್‌ನಲ್ಲಿ ಕಿರಣ್‌ಕುಮಾರ್ ಈ ಬ್ಯಾಂಕ್‌ಗೆ ವರ್ಗಾವಣೆಯಾಗಿ ಬಂದಿದ್ದಾನೆ.

ಆನ್‌ಲೈನ್ ಬೆಟ್ಟಿಂಗ್, ಕ್ಯಾಸಿನೋಗೆ ದಂದೆಗೆ ಸಿಲುಕಿದ್ದ ಕಿರಣ್‌ಕುಮಾರ್ ತನ್ನ ಜೂಜಾಟಕ್ಕೆ ಬಳಸಿಕೊಂಡಿದ್ದು ಗ್ರಾಹಕರು ಬ್ಯಾಂಕ್‌ನ ಲಾಕರ್‌ನಲ್ಲಿಟ್ಟಿದ್ದ ಚಿನ್ನವನ್ನು. ಬ್ಯಾಂಕ್ ಮ್ಯಾನೇಜರ್‌ಗೆ ಹಾಗೂ ಇತರೆ ಸಿಬ್ಬಂದಿಗಳಿಗೆ ಗೊತ್ತಾಗದ ರೀತಿ ಕಳೆದ ಆರು ತಿಂಗಳಿಂದ ಗ್ರಾಹಕರು ಇಟ್ಟಿದ್ದ ಸೇಫ್ಟಿ ಲಾಕರ್‌ಗಳ ಕೀಗಳನ್ನು ತೆಗೆದುಕೊಂಡು ಗ್ರಾಹಕರ 2ಕೆಜಿ 780 ಗ್ರಾಂ ಬಂಗಾರವನ್ನು ಕಳ್ಳತನ ಮಾಡಿಕೊಂಡು ಹೋಗಿ ಆ ಆಭರಣಗಳನ್ನು ಮುತ್ತೂಟ್ ಫೈನಾನ್ಸ್, ಮಣಿಪುರ ಗೋಲ್ಡ್‌ಲೋನ್‌ನಲ್ಲಿ ಅಡವಿಟ್ಟು ಹಣ ಪಡೆದು ಆ ಹಣವನ್ನು ಜೂಜಿನ ಚಟಕ್ಕೆ ಬಳಸಿಕೊಂಡಿದ್ದಾನೆ.





☛ ಉದಯವಾಹಿನಿ ಚಿತ್ರ

ಗ್ರಾಹಕರೊಬ್ಬರು ತಾವು ಲಾಕರ್‌ನಲ್ಲಿಟ್ಟಿದ್ದ ಚಿನ್ನವನ್ನು ತೆಗೆದುಕೊಳ್ಳಲು ಬ್ಯಾಂಕಿಗೆ ಹೋದಾಗ ಲಾಕರ್‌ನಲ್ಲಿ ಆಭರಣ ಇರಲಿಲ್ಲ. ಇದರಿಂದ ಗಾಬರಿಯಾಗಿ ಅವರು ಬ್ಯಾಂಕ್ ಮ್ಯಾನೇಜರ್ ಅವರ ಗಮನಕ್ಕೆ ತಂದು ನಂತರ ಗಿರಿನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ಪೊಲೀಸರು ಬ್ಯಾಂಕ್‌ನ ಸಿಸಿ ಕ್ಯಾಮೆರಾಗಳನ್ನು ಪರಿಶೀಲಿಸಿದಾಗ ಸಹಾಯಕ ಮ್ಯಾನೇಜರ್ ಕಿರಣ್‌ಕುಮಾರ್ ತೆಗೆದುಕೊಂಡಿರುವುದು ಗೊತ್ತಾಗಿದೆ. ತಕ್ಷಣ ಪೊಲೀಸರು ಆತನನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿ 700 ಗ್ರಾಂ ಚಿನ್ನಾಭರಣ ವಶಕ್ಕೆ ಪಡೆದುಕೊಂಡಿದ್ದಾರೆ. ಉಳಿದ ಚಿನ್ನಾಭರಣಗಳನ್ನು ವಶಕ್ಕೆ ಪಡೆಯಲು ಪೊಲೀಸರು ತನಿಖೆ ಮುಂದುವರೆಸಿದ್ದಾರೆ. ಗ್ರಾಹಕರು ಬ್ಯಾಂಕ್ ಲಾಕರ್‌ಗಳಲ್ಲಿ ಇಡುವ ಆಭರಣಗಳನ್ನು ಆಗಾಗ್ಗೆ ಹೋಗಿ ಚೆಕ್ ಮಾಡಿಕೊಳ್ಳಬೇಕೆಂದು ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಬರಮಪ್ಪ ಅವರು ಗ್ರಾಹಕರಿಗೆ ಸಲಹೆ ನೀಡಿದ್ದಾರೆ.

## ಬೇಸಿಗೆ ಎದುರಿಸಲು ಈಗಲೇ ಸಿದ್ಧತೆ ಆರಂಭಿಸಿ

• ಉದಯವಾಹಿನಿ, ದೇವನಹಳ್ಳಿ

ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮುಂಬರುವ ಬೇಸಿಗೆಯಲ್ಲಿ ಕುಡಿಯುವ ನೀರಿನ ತೊಂದರೆ ಉಂಟಾಗದಂತೆ ಮುಂಚಿತವಾಗಿ ಸಿದ್ಧತೆ ಕೈಗೊಳ್ಳಬೇಕು ಎಂದು ಪೌರಾಡಳಿತ, ಹಜ್ ಸಚಿವ ರಹೀಂ ಖಾನ್ ಅಧಿಕಾರಿಗಳಿಗೆ ಸೂಚಿಸಿದರು ತಾಲ್ಲೂಕಿನ ಜಿಲ್ಲಾಡಳಿತ ಭವನದಲ್ಲಿ ನಡೆದ ನಗರ ಸ್ಥಳೀಯ ಸಂಸ್ಥೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿ, ಸರ್ಕಾರ ಬಿಡುಗಡೆ ಮಾಡಿರುವ ಅನುದಾನವನ್ನು ಆಯಾ ಆರ್ಥಿಕ ವರ್ಷದಲ್ಲೇ ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದು ತಿಳಿಸಿದರು.

ಅಮೃತ್, ನಗರೋತ್ಥಾನ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸುವಂತೆ ನಿರ್ದೇಶಿಸಿದರು. ನಗರೋತ್ಥಾನ ಯೋಜನೆ ಮೂಲತಃ ಮೂರು ವರ್ಷದ ಅವಧಿಗೆ ರೂಪಿತವಾಗಿದ್ದರೂ, ಬಾಕಿ ಉಳಿದಿರುವ ಕಾಮಗಾರಿಗಳ ಹಿನ್ನೆಲೆಯಲ್ಲಿ ಅವಧಿಯನ್ನು ನಾಲ್ಕು ವರ್ಷಗಳಿಗೆ ವಿಸ್ತರಿಸಲಾಗಿದೆ. ರಾಜ್ಯದಾದ್ಯಂತ ಸುಮಾರು 600 ಕಾಮಗಾರಿಗಳು ಇನ್ನೂ ಪೂರ್ಣಗೊಳ್ಳಬೇಕಿದ್ದು, ನಗರೋತ್ಥಾನ-5ಕ್ಕೆ 5,000 ಕೋಟಿ ಅನುದಾನ ನೀಡುವ ಕುರಿತು ಆರ್ಥಿಕ ಇಲಾಖೆಗೆ ವರದಿ ಸಲ್ಲಿಸಲಾಗಿದೆ.

ಅದಕ್ಕೂ ಮುನ್ನ ನಗರೋತ್ಥಾನ-4ರ ಕಾಮಗಾರಿಗಳನ್ನು ಶೀಘ್ರ ಮುಕ್ತಾಯಗೊಳಿಸುವುದು ಅಗತ್ಯ ಎಂದರು. ಬೇಸಿಗೆ ಹಿನ್ನೆಲೆಯಲ್ಲಿ ನಗರ ಮತ್ತು ಗ್ರಾಮೀಣ ಭಾಗಗಳಲ್ಲಿ ನೀರಿನ ಅಭಾವ ತಲೆದೋರದಂತೆ ಅಗತ್ಯ ಕ್ರಮ ಕೈಗೊಳ್ಳಬೇಕು. ಸಮಸ್ಯೆ ಕಾಣಿಸಬಹುದಾದ ಪ್ರದೇಶಗಳನ್ನು ಗುರುತಿಸಿ ಮುಂಚಿತ ಯೋಜನೆ ರೂಪಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

**ತೆರಿಗೆ ವಸೂಲಾತಿಗೆ ಒತ್ತು:** ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬಾಕಿ ಇರುವ ಅಸ್ತಿ, ನೀರು, ಅಂಗಡಿ ಮಳಿಗೆ ಬಾಡಿಗೆ, ವಾಣಿಜ್ಯ ಪರವಾನಗಿ ತೆರಿಗೆಗಳನ್ನು ಶೇ 100ರಷ್ಟು ವಸೂಲಾತಿ ಮಾಡುವಂತೆ ನಿರ್ದೇಶಿಸಿದರು. ದೀರ್ಘಕಾಲದಿಂದ ಒಂದೇ ಪ್ರಮಾಣದಲ್ಲಿ ತೆರಿಗೆ ಪಾವತಿಸುತ್ತಿರುವ ಕಟ್ಟಡಗಳನ್ನು ಸ್ಥಳ ಪರಿಶೀಲನೆ ಮಾಡಿ, ಮಹಡಿಗಳ ಸಂಖ್ಯೆ , ಬಾಡಿಗೆ ವಿವರಗಳನ್ನು ಪರಿಶೀಲಿಸಿ ವಾಸ್ತವ ಸ್ಥಿತಿ ದಾಖಲಿಸುವಂತೆ ತಿಳಿಸಿದರು. ಇದಕ್ಕೂ ಮುನ್ನ ಅವರು ದೇವನಹಳ್ಳಿ ಪಟ್ಟಣದ ಎಸ್‌ಎಫ್‌ಟಿಪಿ ಘಟಕ, ಸಿಹಿನೀರು ಕೆರೆಯ ನೀರು ಸಂಸ್ಕರಣಾ ಘಟಕಗಳಿಗೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡರು.





☛ ಉದಯವಾಹಿನಿ ಚಿತ್ರ

**ಇ-ಖಾತಾ ಶಿಬಿರಗಳ ಆಯೋಜನೆ**

**ಅನಧಿಕೃತ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ಒಳಪಡಿಸಲು ಮತ್ತು ಬಿ-ರಿಜಿಸ್ಟರ್‌ನಲ್ಲಿ ದಾಖಲಿಸಲು ಅವಕಾಶ ಕಲ್ಪಿಸಿರುವುದರಿಂದ ಸ್ಥಳೀಯ ಸಂಸ್ಥೆಗಳಿಗೆ ಆದಾಯ ಹೆಚ್ಚಳ ಸಾಧ್ಯವಾಗಲಿದೆ. ಸಾರ್ವಜನಿಕರಿಗೆ ಇ-ಖಾತಾ ದೊರೆಯುವುದರಿಂದ ಆಸ್ತಿ ವಹಿವಾಟು ಸುಗಮವಾಗಲಿದೆ. ಈ ನಿಟ್ಟಿನಲ್ಲಿ ವಿಶೇಷ ಅಭಿಯಾನ ಹಾಗೂ ಶಿಬಿರಗಳನ್ನು ಆಯೋಜಿಸಿ ನಿಗದಿತ ಅವಧಿಯಲ್ಲಿ ಇ-ಖಾತಾ ನೀಡುವಂತೆ ಕ್ರಮ ಕೈಗೊಳ್ಳಬೇಕೆಂದು ಸಚಿವ ರಹೀಂ ಖಾನ್ ಸೂಚಿಸಿದರು.**

## ನಾಯಕತ್ವದ ಬದಲಾವಣೆ : ಡಿಕೆಶಿಗೆ ಹೈಕಮೆಂಡ್ ತಾಳ್ಮೆಯ ಕಟ್ಟಪ್ಪಣೆ

• ಉದಯವಾಹಿನಿ, ಬೆಂಗಳೂರು

ಐದು ರಾಜ್ಯಗಳ ವಿಧಾನಸಭೆ ಚುನಾವಣೆ ಮುಗಿಯುವ ವರೆಗೂ ನಾಯಕತ್ವದ ಬದಲಾವಣೆ ಕುರಿತಂತೆ ಯಾವುದೇ ನಿರ್ಧಾರ ತೆಗೆದುಕೊಳ್ಳುವುದಿಲ್ಲ.ಅನಗತ್ಯವಾಗಿ ಈ ವಿಷಯವಾಗಿ ಗೊಂದಲಗಳನ್ನು ಸೃಷ್ಟಿಸಬಾರದು ಎಂದು ಹೈಕಮಾಂಡ್ ನಾಯಕರು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಗೆ ಕಟ್ಟಪ್ಪಣೆ ಮಾಡಿದ್ದಾರೆ.


ಡಿ.ಕೆ.ಶಿವಕುಮಾರ್ ಅವರು, ಫೆಬ್ರವರಿ 11ರಿಂದ ಮೂರು ದಿನಗಳ ಕಾಲ ದೆಹಲಿಯಲ್ಲೇ ಬೀಡು ಬಿಟ್ಟಿದ್ದರು. ಆ ಸಂದರ್ಭದಲ್ಲಿ ಪಕ್ಷದ ಪ್ರಮುಖ ನಾಯಕರನ್ನು ಭೇಟಿ ಮಾಡಿದ್ದಾರೆ ಎಂದು ಹೇಳಲಾಗಿದೆ. ಈ ವೇಳೆ ಪಕ್ಷದ ಪ್ರಮುಖ ನಾಯಕರನ್ನು ಭೇಟಿ ಮಾಡಿ ಚರ್ಚಿಸಿರುವ ಡಿ.ಕೆ.ಶಿವಕುಮಾರ್ ಹೈಕಮಾಂಡ್ ಮತ್ತು ಸಿದ್ದರಾಮಯ್ಯ ಅವರು 2023ರ ಮೇ ನಲ್ಲಿ ನನಗೆ ನೀಡಿದ್ದ ಭರವಸೆಯಂತೆ ನಡೆದುಕೊಳ್ಳಬೇಕು ಎಂದು ಪಟ್ಟು ಹಿಡಿದಿದ್ದರು ಎನ್ನಲಾಗಿದೆ. ಆದರೆ ಸದ್ಯಕ್ಕೆ ಈ ವಿಚಾರವಾಗಿ ಚರ್ಚೆ ಬೇಡ, ಮೇ ತಿಂಗಳ ನಂತರ ಈ ಬಗ್ಗೆ ಚರ್ಚೆ ಮಾಡೋಣ ಎಂದು ಪಕ್ಷದ ಪ್ರಮುಖ ನಾಯಕರು ಮತ್ತೊಮೆ ಭರವಸೆ ನೀಡಿದ್ದಾರೆ ಎನ್ನಲಾಗಿದೆ.

ದೆಹಲಿಯಲ್ಲಿ ರಾಹುಲ್ ಗಾಂಧಿ, ಸೋನಿಯಾ ಗಾಂಧಿ, ಪ್ರಿಯಾಂಕ ಗಾಂಧಿ ಸೇರಿದಂತೆ ಎಲ್ಲರನ್ನೂ ಭೇಟಿ ಮಾಡಿದ್ದೇನೆ. ಪ್ರಯತ್ನ ಫಲ ನೀಡಲಿದೆ. ಆ ವರೆಗೂ ತಾಳ್ಮೆ ಇರಬೇಕು ಎಂದು ಖುದ್ದು ಡಿ.ಕೆ.ಶಿವಕುಮಾರ್ ಹೇಳಿಕೊಂಡಿದ್ದಾರೆ. ಇನ್ನೂ ಮೂರ್ನಾಲ್ಕು ತಿಂಗಳು ನಾಯಕತ್ವ ಬದಲಾವಣೆಯ ತಂಟೆಗೆ ಹೋಗದಿರಲು ಹೈಕಮಾಂಡ್ ಕೆಲ ಪ್ರಮುಖ ಕಾರಣಗಳನ್ನು ನೀಡಿದೆ. ಸದ್ಯಕ್ಕೆ ಅಸ್ಸಾಂ, ಕೇರಳ, ಪಶ್ಚಿಮ ಬಂಗಾಳ ಸೇರಿದಂತೆ ಐದು ರಾಜ್ಯಗಳ ವಿಧಾನಸಭೆ ಚುನಾವಣೆ ನಡೆಯುತ್ತಿದೆ. ಎಲ್ಲಾ ನಾಯಕರು ಆ ಪ್ರಕ್ರಿಯೆಗಳ ಕಾರ್ಯದೊತ್ತಡದಲ್ಲಿ ತೊಡಗಿಸಿಕೊಂಡಿದ್ದಾರೆ.

ಸಿಎಂ ಸಿದ್ದರಾಮಯ್ಯ ಅವರನ್ನು ಬದಲಾವಣೆ ಮಾಡಬೇಕಾದರೆ, ಏಕಾಏಕಿ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಿಲ್ಲ. ಅವರನ್ನು ಕರೆದು ಚರ್ಚೆ ಮಾಡಿ ವಿಶ್ವಾಸಕ್ಕೆ ತೆಗೆದುಕೊಂಡು ನಂತರ ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕು. ಅದಕ್ಕಾಗಿ ತಾಳೆಯಿಂದ ಇರಿ ಎಂದು ತಿಳಿ ಹೇಳಿದ್ದಾರೆ ಎನ್ನಲಾಗಿದೆ.

ಸಿದ್ದರಾಮಯ್ಯ ಅವರು 17ನೇ ಬಜೆಟ್ ಮಂಡಿಸುವ ಮೂಲಕ ತಾವು ಹೊಸ ದಾಖಲೆ ಬರೆಯಲು ಅವಕಾಶ ಮಾಡಿಕೊಡಬೇಕು ಎಂದು ಸಿಎಂ ಸಿದ್ದರಾಮಯ್ಯ ಕೇಳಿಕೊಂಡಿದ್ದಾರೆ ಈಗಾಗಲೇ ದೇವರಾಜ ಅರಸು ಅವರಿಗಿಂತಲೂ ಹೆಚ್ಚಿನ ಕಾಲಾವಧಿಯ ಆಡಳಿತ ನಡೆಸುವ ಮೂಲಕ ಇತಿಹಾಸ ನಿರ್ಮಿಸಿದ್ದಾರೆ.

ಜೊತೆಗೆ ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳಿಂದ ಹಣಕಾಸಿನ ಪರಿಸ್ಥಿತಿ ಉತ್ತಮವಾಗಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಲ್ಲದೆ ಇದ್ದರೆ ಪರಿಸ್ಥಿತಿ ನಿರ್ವಹಣೆ ಮಾಡುವುದು ಕಷ್ಟ ಸಾಧ್ಯವಾಗಲಿದೆ. ಅದಕ್ಕಾಗಿ ಮುಂದಿನ ಐದು ತಿಂಗಳವರೆಗೂ ಮೌನವಾಗಿರಿ ಎಂದು ಹೈಕಮಾಂಡ್ ಸಲಹೆ ನೀಡಿದೆ ಎಂದು ತಿಳಿದು ಬಂದಿದೆ.



## ಆನ್‌ಲೈನ್ ಆರ್ಡರ್‌ನಲ್ಲಿ ರೇಜರ್ ಬ್ಲಡ್ ಬದಲು ಬಂತು ಹಳೆ ಬಟ್ಟೆ

• ಉದಯವಾಹಿನಿ, ಬೆಂಗಳೂರು

ಆನ್‌ಲೈನ್‌ನಲ್ಲಿ ಆರ್ಡರ್ ಮಾಡಿದ್ದು ರೇಜರ್ ಬ್ಲಡ್. ಆದರೆ, ಮನೆಗೆ ಬಂದಿದ್ದು ಹಳೆ ತುಂಡು ಬಟ್ಟೆ... ನಿವೃತ್ತ ನ್ಯಾಯಮೂರ್ತಿ, ಉಪ ಲೋಕಾಯುಕ್ತ ಕೆ.ಎನ್. ಫಣೀಂದ್ರ ಅವರು ಆನ್‌ಲೈನ್ ಶಾಪಿಂಗ್ ಮಾಡಿ ವಂಚನೆಗೆ ಒಳಗಾಗಿದ್ದಾರೆ. ಈ ಸಂಬಂಧ ಫಣೀಂದ್ರ ಅವರು ನೀಡಿದ ದೂರಿನ ಮೇರೆಗೆ ಕೇಂದ್ರ ಸೈಬರ್ ಅಪರಾಧ ಪೊಲೀಸ್ ಠಾಣೆಯಲ್ಲಿ ವಿಜಯ್ ಎಂಬುವವರ ವಿರುದ್ಧ ಪ್ರಕರಣ ದಾಖಲಾಗಿದೆ.

'ಆರೋಪಿಯ ವಿರುದ್ಧ ಮಾಹಿತಿ ತಂತ್ರಜ್ಞಾನ ಕಾಯ್ದೆ ಸೆಕ್ಷನ್ 66 'ಡಿ', ಭಾರತೀಯ ನ್ಯಾಯ ಸಂಹಿತೆ 318(4) ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ' ಎಂದು ಸೈಬರ್ ಠಾಣೆಯ ಪೊಲೀಸರು ಹೇಳಿದರು. 'ಫಣೀಂದ್ರ ಅವರು ಗುಡ್ ಮ್ಯಾಕ್ಸ್ ಕಂಪನಿಯ ವೆಬ್ ಸೈಟ್ ಮೂಲಕ ಫೆ.4 ರಂದು ರೇಜರ್ ಬ್ಲಡ್ ಆರ್ಡರ್ ಮಾಡಿದ್ದರು. ಶ್ಯಾಡೊಫ್ಯಾಕ್ಸ್ ಸರ್ಫೇಸ್ ಲಾಜಿಸ್ಟಿಕ್ ಸಂಸ್ಥೆಯ ವಿಜಯ್ ಅವರು ಫೆ.9ರಂದು ಕರೆ ಮಾಡಿ, 'ಆರ್ಡರ್ ಮಾಡಿರುವ ವಸ್ತು ಬಂದಿದೆ' ಎಂದು ಹೇಳಿ ವಿತರಣೆಗೆ ದೃಢೀಕರಣ ಕೇಳಿದ್ದರು. ಆ ಸಮಯದಲ್ಲಿ ದೂರುದಾರರು ಕಚೇರಿಯಲ್ಲಿದ್ದ ಕಾರಣ, ಮನೆಗೆ ಪಾರ್ಸೆಲ್ ತಲುಪಿಸುವಂತೆ ಹೇಳಿದ್ದರು. ವಿಜಯ್ ಅವರು ಫಣೀಂದ್ರ ಅವರ ಮನೆಯ ವಿಳಾಸಕ್ಕೆ ಪಾರ್ಸೆಲ್ ತಲುಪಿಸಿ, 699 ನಗದು ಪಡೆದು ತೆರಳಿದ್ದರು. ದೂರುದಾರರು ಮನೆಗೆ ಬಂದು ಪಾರ್ಸೆಲ್ ಕವರ್ ತೆರೆದು ಪರಿಶೀಲಿಸಿದಾಗ ರೇಜರ್ ಬ್ಲಡ್ ಬದಲು ಹಳೆ ಬಟ್ಟೆ ಬಂದಿರುವುದು ಗೊತ್ತಾಗಿತ್ತು' ಎಂದು ಪೊಲೀಸರು ಹೇಳಿದರು.

ಕಂಪನಿಯನ್ನೇ ಸಂಪರ್ಕಿಸಿ ಎಂದೂ ಸೂಚಿಸಿದ್ದರು. ಆರ್ಡರ್ ಮಾಡಿದ ವಸ್ತುವಿನ ಬದಲಿಗೆ ಬೇರೊಂದು ವಸ್ತು ನೀಡಿ ಮೋಸ ಮಾಡಿರುವ ಗುಡ್ ಮ್ಯಾಕ್ಸ್ ಕಂಪನಿ ಹಾಗೂ ಆ ವಸ್ತು ವಿತರಣೆ ಮಾಡಿರುವ ಶ್ಯಾಡೊಫ್ಯಾಕ್ಸ್ ಸರ್ಫೇಸ್ ಲಾಜಿಸ್ಟಿಕ್ ಸಂಸ್ಥೆಯ ವಿರುದ್ಧ ಕ್ರಮ ತೆಗೆದುಕೊಳ್ಳಿ' ಎಂದು ಫಣೀಂದ್ರ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

# ಪರಮೇಶ್ವರ ರಾಜ್ಯದ ಮುಂದಿನ ನಾಯಕ : ಹಿಟ್ನಾಳ್

### ರಾಜ್ಯದಲ್ಲಿ ನಾಯಕತ್ವ ಬದಲಾವಣೆಯಾಗಬೇಕು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್, ಅವರ ಬೆಂಬಲಿಗರು ನಿರಂತರ ಪ್ರಯತ್ನ

• ಉದಯವಾಹಿನಿ, ಬೆಂಗಳೂರು

ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರನ್ನು ಮುಂದೆ ನಾಡಿನ ಮುಖಂಡರಾಗಲಿರುವ ನಾಯಕರು ಎಂದು ಸಿಎಂ ಸಿದ್ದರಾಮಯ್ಯ ಅವರ ಆಪ್ತ ಶಾಸಕರೊಬ್ಬರು ಸಂಬೋಧಿಸುವ ಮೂಲಕ ಪ್ರಸಕ್ತ ರಾಜಕೀಯ ಬೆಳವಣಿಗೆಯಲ್ಲಿ ಕುತೂಹಲ ಕೆರಳಿಸಿದ್ದಾರೆ ಅದರಲ್ಲೂ ಸರ್ಕಾರಿ ಸಮಾವೇಶದ ವೇದಿಕೆಯಲ್ಲೇ ಈ ರೀತಿ ಹೇಳಿಕೆ ನೀಡಿರುವುದು ನಾನಾರೀತಿಯ ವ್ಯಾಖ್ಯಾನಗಳಿಗೆ ಕಾರಣವಾಗಿದೆ. ಪ್ರಸ್ತುತ ರಾಜಕೀಯ ಬೆಳವಣಿಗೆಗಳಲ್ಲಿ ಪ್ರತಿಯೊಂದು ಮಾತುಗಳು ಬೇರೆ ಬೇರೆ ರೀತಿಯ ಅರ್ಥ-ಅನರ್ಥಗಳಿಗೆ ಕಾರಣವಾಗುತ್ತಿವೆ. ಜನಪ್ರತಿನಿಧಿಗಳಾಗಿರುವವರು ಅಳೆದು ತೂಗಿ ಮಾತನಾಡಬೇಕಿದೆ. ಅದರಲ್ಲೂ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಅವರ ಬಣದಲ್ಲಿ ಗುರುತಿಸಿಕೊಂಡಿರುವ ಶಾಸಕರು, ಸಚಿವರು, ಪ್ರಭಾವಿ ನಾಯಕರ ಮಾತುಗಳು ವ್ಯಾಪಕ ಪರಿಣಾಮ ಬೀರುತ್ತವೆ. ರಾಜ್ಯ ಸರ್ಕಾರಕ್ಕೆ ಸಾವಿರ ದಿನಗಳು ತುಂಬಿದ ಸಂದರ್ಭದಲ್ಲಿ ಹಾವೇರಿಯಲ್ಲಿ ಶನಿವಾರ ರಾಜ್ಯ ಸರ್ಕಾರದ ವತಿಯಿಂದ ಭೂ ಸಮರ್ಪಣಾ ಗ್ಯಾರಂಟಿ ಸಮಾವೇಶ, ಜನಸೇವೆಯಲ್ಲಿ ಸಾರ್ಥಕ ಸಾವಿರ ದಿನ, ಒಂದು ಲಕ್ಷ ಕುಟುಂಬಗಳಿಗೆ ಹಕ್ಕು ಪತ್ರ ವಿತರಣಾ ಕಾರ್ಯಕ್ರಮ ನಡೆಯಿತು. ಬೆಳಗ್ಗೆ 10.30ಕ್ಕೆ ಆರಂಭವಾಗಬೇಕಿದ್ದ ಪ್ರಾರಂಭ ಕಾರ್ಯಕ್ರಮ 12 ಗಂಟೆಯಾದರೂ ಶುರುವಾಗಿರಲಿಲ್ಲ. ಆರಂಭದಲ್ಲಿ ಕಂದಾಯ ಸಚಿವ ಕೃಷ್ಣಭೈರೇಗೌಡ ಕಾರ್ಯಕ್ರಮಕ್ಕೆ ಎಲ್ಲರನ್ನು ಸ್ವಾಗತಿಸಿದರು. ಕೆಲವು ಸಾಂಸ್ಕೃತಿಕ ಕಾರ್ಯಕ್ರಮಗಳ ನಡುವೆ ಕೊಪ್ಪಳ ಕ್ಷೇತ್ರದ ಶಾಸಕ ರಾಘವೇಂದ್ರ ಹಿಟ್ನಾಳ್ ಮಾತನಾಡಿದರು.



**ಬಣಕ್ಕೆ ಮಾಸ್ಟರ್ ಸ್ಟ್ರೋಕ್**

ಈಹಂತದಲ್ಲಿ ಕಾರ್ಯಕ್ರಮಕ್ಕೆ ಸಿಎಂ ಸಿದ್ದರಾಮಯ್ಯ ಅವರಾಗಲಿ, ಡಿಸಿಎಂ ಡಿ.ಕೆ.ಶಿವಕುಮಾರ್ ಸೇರಿದಂತೆ ಪ್ರಮುಖ ಸಚಿವರು ಹಾಜರಿರಲಿಲ್ಲ. ಗೃಹ ಸಚಿವ ಪರಮೇಶ್ವರ್ ಎಲ್ಲರಿಗಿಂತ ಮೊದಲು ಬಂದಿದ್ದರು. ಔಪಚಾರಿಕವಾಗಿ ಸ್ವಾಗತ ಕೋರುವಾಗ ರಾಘವೇಂದ್ರ ಹಿಟ್ನಾಳ್ ಅವರು ಪರಮೇಶ್ವರ್‌ಅವರನ್ನು ಕುರಿತು ಹಿರಿಯ ಸಚಿವರು ಮಾರ್ಗದರ್ಶಕರು, ಮುಂದೆ ನಾಡಿನ ಮುಖಂಡರಾಗಲಿರುವ ಡಾ.ಜಿ.ಪರಮೇಶ್ವರ್ ಅವರಿಗೆ ಸ್ವಾಗತ ಎಂದು ಸಂಬೋಧಿಸಿದರು.

ರಾಜ್ಯದಲ್ಲಿ ನಾಯಕತ್ವ ಬದಲಾವಣೆಯಾಗಬೇಕು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಮತ್ತು ಅವರ ಬೆಂಬಲಿಗರು ನಿರಂತರ ಪ್ರಯತ್ನ ನಡೆಸುತ್ತಿದ್ದಾರೆ. ಇದಕ್ಕೆ ಪ್ರತಿಯಾಗಿ ಸಿಎಂ ಸಿದ್ದರಾಮಯ್ಯ ಅವರ ಬೆಂಬಲಿಗರು ನಾನಾ ರೀತಿಯ ತಂತ್ರಗಾರಿಕೆಗಳನ್ನು ರೂಪಿಸುತ್ತಿದ್ದಾರೆ. ಒಂದು ವೇಳೆ ಸಿದ್ದರಾಮಯ್ಯ ಅವರ ಬದಲಾವಣೆಯಾದರೆ ದಲಿತ ಸಮುದಾಯಕ್ಕೆ ಸೇರಿದ ನಾಯಕರನ್ನು ಮುಖ್ಯಮಂತ್ರಿಯನ್ನಾಗಿ ಮಾಡಬೇಕು ಎಂದು ಪರ್ಯಾಯ ತಂತ್ರಗಾರಿಕೆಯನ್ನು ಮುಂದಿಟ್ಟಿದೆ. ದಲಿತ ಸಮುದಾಯದ ನಾಯಕರಲ್ಲಿ ಪರಮೇಶ್ವರ್ ಮುಂಚೂಣಿಯಲ್ಲಿದ್ದಾರೆ.



**ಪ್ರತಿತಂತ್ರದ ಪ್ರಮುಖ ಬೇಡಿಕೆ**

**ಇದು ಡಿಕೆ ಶಿವಕುಮಾರ್ ಅವರ ಬಣಕ್ಕೆ ಮಾಸ್ಟರ್‌ಸ್ಟ್ರೋಕ್ ನೀಡಿದಂತಾಗಿದೆ. ರಾಘವೇಂದ್ರ ಹಿಟ್ನಾಳ್ ಅವರು ಸಿದ್ದರಾಮಯ್ಯ ಪರಮಾಪ್ತ ಬಣದಲ್ಲಿ ಗುರುತಿಸಿಕೊಂಡಿದ್ದಾರೆ. ಬಾಕಿ ಇರುವ ಅವಧಿಗೂ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿ ಮುಂದುವರೆಯಬೇಕು ಎಂಬುದು ಪ್ರತಿತಂತ್ರದ ಪ್ರಮುಖ ಬೇಡಿಕೆಯಾಗಿದೆ. ಖುದ್ದು ರಾಘವೇಂದ್ರ ಹಿಟ್ನಾಳ್ ಅವರೇ ಪರಮೇಶ್ವರ್ ಅವರನ್ನು ಮುಂದಿನ ನಾಯಕರಾಗುವವರು ಎಂದು ಹೇಳುವ ಮೂಲಕ ಹೊಸ ಆಯಾಮ ನೀಡಿದ್ದಾರೆ.**

**ಮರಳಿ ಅಧಿಕಾರ ಹಿಡಿಯುವಂತೆ ಮಾಡುವಲ್ಲಿ ಪ್ರಮುಖ**

**ಪರಮೇಶ್ವರ್, ಡಿ.ಕೆ.ಶಿವಕುಮಾರ್ ಒಂದು ಕಾಲದಲ್ಲಿ ಪರಮಾಪ್ತ ಸ್ನೇಹಿತರಾಗಿದ್ದರು. ಆದರೆ ಪರಮೇಶ್ವರ್ ಉಪಮುಖ್ಯಮಂತ್ರಿಯಾಗಲು ಡಿ.ಕೆ.ಶಿವಕುಮಾರ್ ಅಡ್ಡಿ ಪಡಿಸಿದ್ದಾರೆ ಎಂಬ ವದಂತಿಗಳಿವೆ. ಈ ಹಿನ್ನೆಲೆಯಲ್ಲಿ ಪರಮೇಶ್ವರ್ ಅವರು ಸಿದ್ದರಾಮಯ್ಯ ಗುಂಪಿಗೆ ನೆಗೆದಿದ್ದರು. ಪರಮೇಶ್ವರ್ ಕೂಡ ಎಂಟು ವರ್ಷಗಳ ಕಾಲ ಕೆಪಿಸಿಸಿ ಅಧ್ಯಕ್ಷರಾಗಿ ಕೆಲಸ ಮಾಡಿದ್ದರು. ಅವರ ನೇತೃತ್ವದಲ್ಲಿ 2013ರಲ್ಲಿ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಿತ್ತು. ಆದರೆ ಆ ಸಂದರ್ಭದಲ್ಲಿ ಪರಮೇಶ್ವರ್ ಕೊರಟಗೆರೆ ವಿಧಾನಸಭಾ ಕ್ಷೇತ್ರದಲ್ಲಿ ಸೋಲು ಕಂಡಿದ್ದರಿಂದ ಸಿಎಂ ಹುದ್ದೆಯ ಹೈಪೋಟಿಯಿಂದ ಹೊರಗುಳಿದಿದ್ದರು. ನಂತರದಲ್ಲಿ ಡಿ.ಕೆ.ಶಿವಕುಮಾರ್ ಪಕ್ಷದ ಅಧ್ಯಕ್ಷರಾದರು. ನಾನಾ ರೀತಿಯ ಸಂಘಟನಾತಕ ಚಟುವಟಿಕೆಗಳ ಮೂಲಕ ಕಾಂಗ್ರೆಸ್ ಅನ್ನು ಮರಳಿ ಅಧಿಕಾರ ಹಿಡಿಯುವಂತೆ ಮಾಡುವಲ್ಲಿ ಪ್ರಮುಖರಾಗಿದ್ದಾರೆ. ಅದೇ ಹಕ್ಕಿನ ಪ್ರತಿಪಾದನೆಯನ್ನು ಡಿಕೆ ಶಿವಕುಮಾರ್ ಮಾಡುತ್ತಿದ್ದಾರೆ. ಈ ನಡುವೆ ಸಿಎಂ ಸಿದ್ದರಾಮಯ್ಯ ಅವರು ಅಧಿಕಾರ ಬಿಟ್ಟುಕೊಡಲು ಸಿದ್ಧರಿಲ್ಲ ಎಂಬ ಸಂದೇಶ ರವಾನಿಸಿದ್ದಾರೆ. ಈ ಜಿದ್ದಾಜಿದ್ದಿನ ನಡುವೆ ಪರಮೇಶ್ವರ್ ಹೆಸರು ನುಸುಳಿ ಬರುತ್ತಿದೆ.**

# ತ್ರಿಣೇಶ್ವರಸ್ವಾಮಿ ದೇಗುಲದ ಅರ್ಚಕರ ಸುಪರ್ದಿಗೆ ಚಿನ್ನದ ಮುಖವಾಡ ಹಸ್ತಾಂತರ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಮೈಸೂರು

ಮಹಾ ಶಿವರಾತ್ರಿಯ ದಿನ ತ್ರಿಣೇಶ್ವರಸ್ವಾಮಿ ದೇಗುಲದಲ್ಲಿರುವ ಮೂಲ ಶಿವಲಿಂಗಕ್ಕೆ ಚಿನ್ನದ ಕೊಳಗ ಧಾರಣೆ ಮಾಡಿ ವಿಶೇಷ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಗುತ್ತದೆ. ಬರೋಬ್ಬರಿ ಹನ್ನೊಂದು ಕೆಜಿ ಶುದ್ಧ ಚಿನ್ನದಿಂದ ಮಾಡಿರುವ ಚಿನ್ನದ ಕೊಳಗವನ್ನು ಅಂದಿನ ಆಳರಸ ಜಯಚಾಮರಾಜ ಒಡೆಯರ್ ಅವರು ಕೊಡುಗೆಯಾಗಿ ನೀಡಿದ್ದರು. ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಜನಿಸಿದ ವೇಳೆ ಪುತ್ರ ಸಂತಾನ ಪ್ರಾಪ್ತಿಯಾದ ಕಾರಣ ತ್ರಿಣೇಶ್ವರಸ್ವಾಮಿಗೆ ಹರಕೆ ರೂಪದಲ್ಲಿ ನೀಡಿದ್ದ ಚಿನ್ನದ ಕೊಳಗ ಇದಾಗಿದ್ದು, ವರ್ಷ ಪೂರ್ತಿ ಸರ್ಕಾರದ ಸುಪರ್ದಿಯಲ್ಲಿರುತ್ತದೆ.


ಮಹಾಶಿವರಾತ್ರಿಯ ದಿನ ಮಾತ್ರ ತ್ರಿಣೇಶ್ವರಸ್ವಾಮಿಯ ಮೂಲ ಶಿವಲಿಂಗಕ್ಕೆ ಚಿನ್ನದ ಕೊಳಗ ಧರಿಸಲಾಗುತ್ತದೆ. ವರ್ಷಕ್ಕೆ ಒಮ್ಮೆ ಮಾತ್ರ ದೇವರಿಗೆ ಧಾರಣೆ ಮಾಡುವ ಚಿನ್ನದ ಕೊಳಗವನ್ನು ಕಣ್ತುಂಬಿಕೊಳ್ಳಲು ಸಾವಿರಾರು ಸಂಖ್ಯೆಯಲ್ಲಿ ಜನರು ಆಗಮಿಸುತ್ತಾರೆ. ಹಾಗಾಗಿ ಭದ್ರತಾ ಖಜಾನೆಯಲ್ಲಿ ಇರಿಸಿದ್ದ ಚಿನ್ನದ ಕೊಳಗವನ್ನು ತ್ರಿಣೇಶ್ವರಸ್ವಾಮಿ ದೇಗುಲದ ಪ್ರಧಾನ ಅರ್ಚಕರಿಗೆ ಮೈಸೂರು ಜಿಲ್ಲಾಡಳಿತದ ಹಿರಿಯ ಅಧಿಕಾರಿಗಳು ಹಸ್ತಾಂತರಿಸಿದರು.

**ಲೋಕ ಕಲ್ಯಾಣಕ್ಕಾಗಿ ಮಹಾಯಜ್ಞ:** ಮೈಸೂರಿನಲ್ಲಿ ಸಾಮೂಹಿಕ ಶ್ರೀ ಹನುಮಾನ್ ಚಾಲೀಸಾ ಪಾರಾಯಣ ಮಹಾಯಜ್ಞವನ್ನು ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಆಯೋಜಿಸಲಾಗಿತ್ತು. ಗಣಪತಿ ಸಚ್ಚಿದಾನಂದ ಆಶ್ರಮದಿಂದ ಈ ಕಾರ್ಯಕ್ರಮವನ್ನು ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ದಿವ್ಯ ಸಾನ್ನಿಧ್ಯದಲ್ಲಿ ಆಯೋಜಿಸಲಾಗಿತ್ತು. ಹನುಮಾನ್ ಚಾಲೀಸಾ ಪಠಣೆ ಮಾಡಲು ಸಾವಿರಾರು ಭಕ್ತರು ಜಮಾಯಿಸಿದ್ದರು.

## ಸರಳ ವಿವಾಹ – ಹೊಸ ಬದುಕಿಗೆ ಕಾಲಿರಿಸಿದ 100ಕ್ಕೂ ಹೆಚ್ಚು ಜೋಡಿ

# ನವ ವಧು ವರರು ಸಮಾಜಕ್ಕೆ ಮಾದರಿಯಾಗಿ ಬದುಕಿ

• ಉದಯವಾಹಿನಿ, ರಾಮನಗರ


ಉದಯವಾಹಿನಿ ಚಿತ್ರ

ನಗರದ ಯಾರಬ್ ನಗರದ ಸುಲ್ತಾನ್ ಪ್ಯಾಲೇಸ್‌ಮುಂಭಾಗ ಅಲ್ಪ ಸಂಖ್ಯಾತ ಕಲ್ಯಾಣ ಇಲಾಖೆ ವತಿಯಿಂದ ಆಯೋಜಿಸಿದ್ದ ಸಾಮೂಹಿಕ ಸರಳ ವಿವಾಹ ಕಾರ್ಯಕ್ರಮದಲ್ಲಿ ಮುಸ್ಲಿಂ ಸಮುದಾಯದ 100ಕ್ಕೂ ಹೆಚ್ಚು ಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿರಿಸಿದರು. ಜಿಲ್ಲೆಯ ರಾಮನಗರ, ಚನ್ನಪಟ್ಟಣ, ಮಾಗಡಿ, ಕನಕಪುರ ಹಾಗೂ ಹಾರೋಹಳ್ಳಿ ತಾಲ್ಲೂಕಿನ ಮುಸ್ಲಿಂ ವಧು–ವರರು ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ವಧು – ವರರ ಕುಟುಂಬದವರು, ಸಂಬಂಧಿಕರು ಮಾತ್ರವಲ್ಲದೆ ಸಾವಿರಾರು ಸಂಖ್ಯೆಯ ಜನರು ಸಾಮೂಹಿಕ ವಿವಾಹ ಕಾರ್ಯಕ್ಕೆ ಸಾಕ್ಷಿಯಾದರು.

**ದುಂದು ವೆಚ್ಚಕ್ಕೆ ಕಡಿವಾಣ**

ಶಾಸಕ ಇಕ್ಬಾಲ್ ಹುಸೇನ್ ಅವರ ನೇತೃದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮೌಲ್ವಿ ಮೌಲಾನ ಹಜರತ್ ಅಲಿ ಖಾನ್ ರವರು ಪವಿತ್ರ ಕುರಾನ್ ಪ್ರಕಾರ ವರ ಮತ್ತು ವಧುವಿನ ಕರ್ತವ್ಯಗಳನ್ನು ವಧು ಮತ್ತು ವರನ ಕುಟುಂಬಗಳಿಂದ ತಲಾ ಇಬ್ಬರು ಸಾಕ್ಷಿಗಳ ಸಮ್ಮುಖದಲ್ಲಿ ಪಠಿಸಿ ಅಧಿಕೃತ ವಿವಾಹಕ್ಕೆ ಸಹಿ ಪಡೆದರು.

ವಿಧಾನಸಭಾ ಅಧ್ಯಕ್ಷ ಯು.ಟಿ.ಖಾದರ್, ಪೌರಾಡಳಿತ ಸಚಿವ ರಹೀಂ ಖಾನ್ , ಕೆಪಿಸಿಸಿ ಉಪಾಧ್ಯಕ್ಷ ಸೈಯದ್ ಜಿಯಾವುಲ್ಲಾ ಸೇರಿದಂತೆ ಹಲವಾರು ಗಣ್ಯರು, ಧರ್ಮಗುರುಗಳು, ಹಿರಿಯರು ನವ ವಧು ಮತ್ತು ವರರಿಗೆ ಆಶೀರ್ವದಿಸಿದರು. ಈ ಮದುವೆ ಕಾರ್ಯದಲ್ಲಿ ಶಾಸಕ ಇಕ್ಬಾಲ್ ಹುಸೇನ್ ರವರು ಎಲ್ಲಾ ನವ ವಧುಗಳಿಗೆ ತಲಾ ನಾಲ್ಕು ಜೊತೆ ಸೀರೆ, ಕಾಲು ಚನ್, ವರರಿಗೆ ಜುಬ್ಬಾ, ಪೈಜಾಮ, ಜಾಕೆಟ್, ಟೋಪಿ, ವಾಚ್, ಮನೆಗೆ ಅಲ್ಮೇರಾ, ಮಂಚ ಹಾಗೂ ಹೊದಿಕೆಗಳು, ದಿನಬಳಕೆಯ ಪಾತ್ರೆಗಳನ್ನು ಉಡುಗೊರೆಯಾಗಿ ನೀಡಿದರು.

ಸರಳ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಮದುವೆ ಆದ ದಂಪತಿಗಳು ಅನ್ಯೋನ್ಯವಾಗಿ ಬಾಳುವ ಮೂಲಕ ಈ ಕಾರ್ಯಕ್ರಮದ ಉದ್ದೇಶವನ್ನು ಸಾರ್ಥಕ ಪಡಿಸಬೇಕು ಎಂದರು. ಪೌರಾಡಳಿತ ಸಚಿವ ರಹೀಂ ಖಾನ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ವಿವಾಹಗಳು ದುಬಾರಿಯಾಗುತ್ತಿರುವ ಸಂದರ್ಭದಲ್ಲಿ ಶಾಸಕ ಇಕ್ಬಾಲ್ ಹುಸೇನ್ ಅವರು, ಸರಳ ಸಾಮೂಹಿಕ ವಿವಾಹ ನೆರವೇರಿಸಿರುವುದು ಅಭಿನಂದನೀಯ ಎಂದು ಶ್ಲಾಘಿಸಿದರು. ಸಾಮೂಹಿಕ ವಿವಾಹಗಳು ದುಂದುವೆಚ್ಚಕ್ಕೆ ಕಡಿವಾಣ ಹಾಕುದುವುದಲ್ಲದೆ, ನೆಮ್ಮದಿ ಜೀವನಕ್ಕೆ ನಾಂದಿ ಹಾಡುತ್ತವೆ. ಆರ್ಥಿಕವಾಗಿ ದುರ್ಬಲರಾದವರು, ಗ್ರಾಮೀಣ ಪ್ರದೇಶಗಳ ಬಡ ಕುಟುಂಬಗಳಿಗೆ ಸಾಮೂಹಿಕ ವಿವಾಹಗಳು ನೆರವಾಗುತ್ತವೆ. ಇಂತಹ ಸರಳ ವಿವಾಹಗಳ ಅಗತ್ಯತೆ ಹೆಚ್ಚಿದೆ ಎಂದರು.

> ದುಂದು ವೆಚ್ಚ ಮಾಡಿ ವಿವಾಹವಾಗುವ ಬದಲು ಸಾಮೂಹಿಕ ವಿವಾಹವಾದರೆ ಜೀವನ ಆದರ್ಶಮಯವಾಗಿರುತ್ತದೆ. ವಧು-ವರರು ದಾಂಪತ್ಯ ಜೀವನವನ್ನು ಉತ್ತಮವಾಗಿ ನಡೆಸುವ ಮೂಲಕ ಸಮಾಜಕ್ಕೆ ಮಾದರಿಯಾಗಬೇಕು.
> –ಯು.ಟಿ.ಖಾದರ್, ವಿಧಾನಸಭೆ ಅಧ್ಯಕ್ಷ

ವರದಕ್ಷಿಣೆ ಸಮಾಜದಲ್ಲಿ ವ್ಯಾಪಕವಾಗಿ ಬೇರೂರಿರುವ ಪಿಡುಗು. ವಿದ್ಯಾವಂತರ ಸಂಖ್ಯೆ ಹೆಚ್ಚಾದಂತೆ ವರದಕ್ಷಿಣೆ ಬೆಲೆಯೂ ಹೆಚ್ಚಾಗುತ್ತಿದೆ. ವರದಕ್ಷಿಣೆ ಕಿರುಕುಳ ಸಹಿಸಲಾರದೆ ಆತ್ಮಹತ್ಯೆ ಮಾಡಿಕೊಳ್ಳುವವರ ಸಂಖ್ಯೆಯೂ ಹೆಚ್ಚಾಗಿವೆ. ಇಸ್ಲಾಂ ಧರ್ಮದಲ್ಲಿ ವರದಕ್ಷಿಣೆ ಪಡೆಯಬೇಕೆಂದು ಎಲ್ಲೂ ಹೇಳಿಲ್ಲ. ಇನ್ನಾದರು ಅಲ್ಲಾನನ್ನು ನಂಬುವವರು ವರದಕ್ಷಿಣೆ ಕೇಳುವುದನ್ನು ಬಿಡಬೇಕು ಎಂದು ಕಿವಿಮಾತು ಹೇಳಿದರು. ಕೆಪಿಸಿಸಿ ಉಪಾಧ್ಯಕ್ಷ ಸೈಯದ್ ಜಿಯಾವುಲ್ಲಾ ಸೇರಿದಂತೆ ಹಲವಾರು ಗಣ್ಯರು, ಧರ್ಮಗುರುಗಳು ಉಪಸ್ಥಿತರಿದ್ದರು.

## ಮಿನಿ ನ್ಯೂಸ್

### ಪ್ರೇಮಿಗಳ ದಿನಾಚರಣೆಗೆ ನಂದಿ ಬೆಟ್ಟ ಬಂದ್ ; ವಾಪಸ್ಸಾದ ಪ್ರೇಮಿಗಳು

• ಉದಯವಾಹಿನಿ, ಚಿಕ್ಕಬಳ್ಳಾಪುರ

ಪ್ರೇಮಿಗಳ ದಿನವನ್ನು ಬಡವರ ಊಟಿ ಎಂದೆ ಪ್ರಸಿದ್ಧಿಯಾದ ನಂದಿ ಗಿರಿಧಾಮದಲ್ಲಿ ಆಚರಣೆ ಮಾಡಲು ಸಜ್ಜಾಗಿದ್ದ ಪ್ರೇಮಿಗಳ ಆಸೆಗೆ ತಣ್ಣೀರೆರಚಿದಂತಾಗಿದೆ. ನಂದಿ ಗಿರಿಧಾಮಕ್ಕೆ ಪ್ರೇಮಿಗಳ ಪ್ರವೇಶಕ್ಕೆ ಇಲ್ಲಿನ ಜಿಲ್ಲಾಡಳಿತ ನಿಷೇಧಿಸಿ ಆದೇಶ ಹೊರಡಿಸಿದೆ.

ಈ ಬಾರಿ ವ್ಯಾಲಂಟೈನ್ ಡೇ ಆಚರಿಸಿಕೊಳ್ಳುವ ಪ್ರೇಮಿಗಳಿಗೆ ಒಂದು ಕಡೆ ನಿರಾಸೆ ಮೂಡಿದೆ ಹೀಗಾಗಿ ಶನಿವಾರ ನಂದಿಬೆಟ್ಟ ಪ್ರೇಮಿಗಳ ಮುಕ್ತ ನಂದಿಬೆಟ್ಟವಾಗಿತ್ತು. ಸಾಮಾನ್ಯವಾಗಿ ಪ್ರೇಮಿಗಳ ದಿನಾಚರಣೆಯಂದು ಪ್ರೇಮಿಗಳು ಪರಸ್ಪರ ಪ್ರೀತಿಯ ಉಡುಗೊರೆಗಳನ್ನು ನೀಡಿ ಖುಷಿ ಪಡುತ್ತಾರೆ. ಜನಸಂದಣಿ, ಟ್ರಾಫಿಕ್ ಜಾಮ್, ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ, ಶನಿವಾರ ಬೆಳಗ್ಗೆ 6ರಿಂದ ಸಂಜೆ 6ರವರೆಗೆ ಸಾರ್ವಜನಿಕರು ಮತ್ತು ಖಾಸಗಿ ವಾಹನಗಳ ಪ್ರವೇಶಕ್ಕೆ ಸಂಪೂರ್ಣ ಬ್ರೇಕ್ ಹಾಕಲಾಗಿತ್ತು. ನಂದಿಬೆಟ್ಟದ ಪ್ರವೇಶದ್ವಾರದಲ್ಲಿ ಬ್ಯಾರಿಕೇಡ್ ಹಾಕಿ ಬಂದ್ ಮಾಡಲಾಗಿದ್ದು, ವಿಷಯ ಗೊತ್ತಿಲ್ಲದೆ ಬಂದ ಜನರು ನಿರಾಸೆಯಿಂದ ಹಿಂದಿರುಗುತ್ತಿದ್ದ ದೃಶ್ಯಗಳು ಕಂಡುಬಂದವು. ಬಂದ ದಾರಿ ವ್ಯರ್ಥವಾಗಬಾರದೆಂದು ಜಿಲ್ಲೆಯ ಪ್ರವಾಸಿತಾಣಗಳಿಗೆ ಭೇಟಿ ನೀಡಿದ ದೃಶ್ಯಗಳು ಸರ್ವೆಸಾಮಾನ್ಯವಾಗಿತ್ತು.

### ವಿದ್ಯಾರ್ಥಿನಿಗೆ ಶಿಕ್ಷಕನ ಬ್ಯಾಡ್ ಟಚ್: ಮಕ್ಕಳ ಸಹಾಯವಾಣಿಗೆ ದೂರು

• ಉದಯವಾಹಿನಿ, ಶಿಡ್ಲಘಟ್ಟ

ನನ್ನ ಕೆಟ್ಟದಾಗಿ ಸ್ಪರ್ಶಿಸಿ (ಬ್ಯಾಡ್ ಟಚ್) ಅನುಚಿತವಾಗಿ ವರ್ತಿಸಿದ್ದಾರೆ ಎಂದು ಶಿಕ್ಷಕರೊಬ್ಬರ ವಿರುದ್ಧ ತಾಲ್ಲೂಕಿನ ಶಾಲೆಯೊಂದರ ವಿದ್ಯಾರ್ಥಿನಿ ಮಕ್ಕಳ ಸಹಾಯವಾಣಿಗೆ ದೂರು ನೀಡಿದ್ದಾರೆ. ತಾಲ್ಲೂಕಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿಯೊಬ್ಬಳು ಮಕ್ಕಳ ಸಹಾಯವಾಣಿಗೆ ಕರೆ ಮಾಡಿ ಶಿಕ್ಷಕರೊಬ್ಬರಿಂದ ಆಗುತ್ತಿರುವ ಕಿರುಕುಳದ ಬಗ್ಗೆ ಹೇಳಿಕೊಂಡಿದ್ದಾಳೆ. ಮಕ್ಕಳ ಸಹಾಯವಾಣಿ, ಮಕ್ಕಳ ರಕ್ಷಣಾ ಘಟಕದ ಅಧಿಕಾರಿ, ಸಿಬ್ಬಂದಿ ಶಾಲೆಗೆ ಭೇಟಿ ನೀಡಿ ಶಾಲೆಯ ದೂರು ಪೆಟ್ಟಿಗೆ ಪರಿಶೀಲಿಸಿದ್ದಾರೆ. 9 ವಿದ್ಯಾರ್ಥಿನಿಯರು ಶಿಕ್ಷಕನ ಬ್ಯಾಡ್ ಟಚ್ ವಿರುದ್ಧ ಪತ್ರ ಬರೆದು ಹಾಕಿದ್ದಾರೆ. ಅವೆಲ್ಲವನ್ನೂ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ ಎನ್ನಲಾಗಿದೆ. 9 ವಿದ್ಯಾರ್ಥಿನಿಯರು ಕೂಡ ಶಿಕ್ಷಕನ ವಿರುದ್ಧ ಬ್ಯಾಡ್ ಟಚ್ ಆರೋಪ ಮಾಡಿರುವುದಾಗಿ ತಿಳಿದು ಬಂದಿದೆ. ಆದರೆ ಪೋಷಕರು ದೂರು ನೀಡಲು ಹಿಂದೇಟು ಹಾಕಿದ್ದು, ಶಿಕ್ಷಕನನ್ನು ಶಾಲೆಗೆ ಕಳುಹಿಸಿದರೆ ಕೈಕಾಲು ಮುರಿದು ಹಾಕುತ್ತೇವೆ. ಮುಂದಿನ ಅನಾಹುತಗಳಿಗೆ ಅಧಿಕಾರಿಗಳೆ ಕಾರಣ ಎಂದು ಎಚ್ಚರಿಕೆ ನೀಡಿದ್ದಾರೆ.

ಶಾಲೆಗೆ ಮಕ್ಕಳ ಸಹಾಯವಾಣಿ, ಮಕ್ಕಳ ರಕ್ಷಣಾ ಘಟಕದ ಅಧಿಕಾರಿ, ಸಿಬ್ಬಂದಿಯೊಂದಿಗೆ ಭೇಟಿ ನೀಡಿದ್ದೆವು. ಮಗುವೊಂದರ ಹೇಳಿಕೆಯನ್ನು ಸಹಾಯವಾಣಿ, ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳು ದಾಖಲಿಸಿಕೊಂಡರು. 9 ಮಕ್ಕಳ ವಿಚಾರ ನನಗೆ ಗೊತ್ತಿಲ್ಲ. ಪೋಷಕರು ದೂರು ನೀಡಲು ನಿರಾಕರಿಸಿದರು. ಮಕ್ಕಳ ಹೇಳಿಕೆ ಆಧಾರದಲ್ಲಿ ಮುಂದಿನ ಕ್ರಮವನ್ನು ಸಂಬಂಧಿಸಿದ ಇಲಾಖೆಯವರಿಂದ ಆಗಲಿದೆ ಎಂದು ಶಿಡ್ಲಘಟ್ಟ ಬಿಇಒ ನರೇಂದ್ರ ಕುಮಾರ್ ಹೇಳಿದರು.

### ತಿಪಟೂರಿನ ಗಾಂಧಿನಗರದ ತೋಟದ ಬಾವಿಗೆ ಬಿದ್ದ ಚಿರತೆ

• ಉದಯವಾಹಿನಿ, ತಿಪಟೂರು

ತಿಪಟೂರು ನಗರದ ಗಾಂಧಿನಗರ ಪಕ್ಕದಲ್ಲಿರುವ ಕೃಷ್ಣಮೂರ್ತಿ ಅವರ ತೋಟದ ಬಾವಿಗೆ ಶನಿವಾರ ಬೆಳಗ್ಗೆ ಚಿರತೆ ಬಿದ್ದಿರುವ ಘಟನೆ ಆತಂಕಕ್ಕೆ ಕಾರಣವಾಗಿದೆ. ಘಟನೆ ತಿಳಿದ ತಕ್ಷಣ ಗ್ರಾಮಸ್ಥರು ಅರಣ್ಯ ಇಲಾಖೆಗೆ ಮಾಹಿತಿ ನೀಡಿ ಚಿರತೆಯನ್ನು ಸುರಕ್ಷಿತವಾಗಿ ಹಿಡಿಯುವಂತೆ ಮನವಿ ಮಾಡಿದರು. ಆದರೆ ಮಧ್ಯಾಹ್ನವಾದರೂ ಸಹ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

### ಉದ್ಯೋಗ ಮೇಳ ಸದುಪಯೋಗ ಆಗಲಿ: ಸಿಇಒ ಸೂಚನೆ

• ಉದಯವಾಹಿನಿ, ಮಂಡ್ಯ

ಮಂಡ್ಯ ವಿಶ್ವವಿದ್ಯಾಲಯದಲ್ಲಿ ಜಿಲ್ಲಾ ಮಟ್ಟದ ಉದ್ಯೋಗ ಮೇಳ ಆಯೋಜಿಸಿರುವುದರಿಂದ ಅಧಿಕಾರಿಗಳು ಅಗತ್ಯ ಕ್ರಮ ತೆಗೆದುಕೊಂಡು, ಜಿಲ್ಲೆಯಲ್ಲಿ ಪ್ರಚಾರ ನಡೆಸುವ ಮೂಲಕ ತಮ್ಮ ಜವಾಬ್ದಾರಿ ನಿಭಾಯಿಸಬೇಕು ಎಂದು ಜಿ.ಪಂ. ಸಿಇಒ ಕೆ.ಆರ್. ನಂದಿನಿ ಸೂಚನೆ ನೀಡಿದರು.

ಜಿಲ್ಲಾ ಪಂಚಾಯಿತಿ ಮಿನಿ ಸಭಾಂಗಣದಲ್ಲಿ ಕೌಶಲಾಭಿವೃದ್ಧಿ, ಉದ್ಯಮಶೀಲತಾ, ಜೀವನೋಪಾಯ ಇಲಾಖೆ, ದೀನ್ ದಯಾಳ್ ಅಂತ್ಯೋದಯ ಗ್ರಾಮೀಣ ಕೌಶಲ್ಯ ಯೋಜನೆ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಮಂಡ್ಯ ವಿಶ್ವವಿದ್ಯಾನಿಲಯದ ಸಹಯೋಗದಲ್ಲಿ ನಡೆದ ಉದ್ಯೋಗ ಮೇಳದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಜಿಲ್ಲಾಮಟ್ಟದ ಉದ್ಯೋಗ ಮೇಳ– 2026 ಕಲಾಭವನದಲ್ಲಿ ಫೆ.21 ರಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 5 ಗಂಟೆ ವರಗೆ ಮಂಡ್ಯ ವಿವಿಯಲ್ಲಿ ನಡೆಯಲಿದೆ. ಅಂಗವಿಕಲ ಅಭ್ಯರ್ಥಿಗಳನ್ನು ಗುರುತಿಸಿ ನಿಗದಿಪಡಿಸಿರುವ 'ವಿಶೇಷ ಕೊಠಡಿ'ಯಲ್ಲಿ ಸಂದರ್ಶನಕ್ಕೆ ಸೂಕ್ತ ವ್ಯವಸ್ಥೆ ಕಲ್ಪಿಸಬೇಕು ಎಂದರು.

## ಬಂಡೀಪುರ, ನಾಗರಹೊಳೆ, ಬಿಆರ್‌ಟಿ ಪ್ರದೇಶಗಳಲ್ಲಿ ಹುಲಿ ಸೆರೆ ವಿಧಾನ ಅವೈಜ್ಞಾನಿಕ: 4 ತಿಂಗಳಲ್ಲಿ 27 ಹುಲಿಗಳ ಸೆರೆ

# ಎನ್‌ಟಿಸಿಎ ಆಕ್ಷೇಪ, ಸ್ಪಷ್ಟನೆಗಾಗಿ ಅರಣ್ಯ ಇಲಾಖೆಗೆ ಪತ್ರ

• ಉದಯವಾಹಿನಿ, ಚಾಮರಾಜನಗರ


ಉದಯವಾಹಿನಿ ಚಿತ್ರ

**ಪದೇ ಪದೆ ಸಂಘರ್ಷ**

ಮೂರು ತಿಂಗಳ ಅವಧಿಯಲ್ಲಿ ಬಂಡೀಪುರ, ನಾಗರಹೊಳೆ ಮತ್ತು ಬಿಳಿಗಿರಿ ರಂಗನಾಥಸ್ವಾಮಿ ದೇವಸ್ಥಾನ ರಕ್ಷಿತಾರಣ್ಯಗಳ ಪ್ರದೇಶಗಳಲ್ಲಿ ಹುಲಿಗಳನ್ನು ಸೆರೆಹಿಡಿಯುವ ಕಾರ್ಯಾಚರಣೆಗಳ ಬಗ್ಗೆ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ ಆಕ್ಷೇಪ ವ್ಯಕ್ತಪಡಿಸಿದೆ. ಜಿಲ್ಲೆಯ ಬಂಡೀಪುರ, ಬಿಆರ್‌ಟಿ ವ್ಯಾಪ್ತಿಯಲ್ಲಿ ಇತ್ತೀಚೆಗೆ ಮಾನವ-ಹುಲಿ ಸಂಘರ್ಷ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ರೈತ ಸಂಘಟನೆ, ಗ್ರಾಮಸ್ಥರ ಒತ್ತಡಕ್ಕೆ ಮಣಿದು ವ್ಯಾಘ್ರಗಳ ಸೆರೆ ಕಾರ್ಯಾಚರಣೆ ನಡೆಯುತ್ತಿದೆ.

ಆದರೆ, ಸೆರೆ ಕಾರ್ಯಾಚರಣೆ ವೇಳೆ ನಿಯಮ ಪಾಲನೆಯಾಗುತ್ತಿಲ್ಲ ಎಂಬುದು ಎನ್‌ಟಿಸಿಎ ಆರೋಪ ಆಗಿದೆ. ಈ ಕುರಿತು ಜ.27ರಂದು ಎನ್‌ಟಿಸಿಎ ಅರಣ್ಯ ಪ್ರಧಾನ ಪರಿಶೀಲಕರಾದ ಸಿ.ಎಂ ಶಿವಕುಮಾರ್ ಅವರು, ಕರ್ನಾಟಕದ ಮುಖ್ಯ ವನ್ಯಜೀವಿ ಸಂರಕ್ಷಕರಿಗೆ ಪತ್ರ ಬರೆದು, ಸ್ಪಷ್ಟೀಕರಣ ಕೇಳಿದ್ದಾರೆ. 2025ರ ನವೆಂಬರ್‌ನಿಂದ ಡಿಸೆಂಬರ್ ವರೆಗೆ, ಬಂಡೀಪುರ, ನಾಗರಹೊಳೆ ಸುತ್ತಮುತ್ತಲ ಪ್ರದೇಶಗಳಲ್ಲಿ ಹುಲಿಗಳ ದಾಳಿಯಿಂದಾಗಿ ನಾಲ್ವರು ಮೃತಪಟ್ಟಿದ್ದರು. ಕಳೆದ ವರ್ಷ ಡಿ.27ರಂದು ಬಂಡೀಪುರ ಹುಲಿ ರಕ್ಷಿತಾರಣ್ಯದಲ್ಲಿ ಇಲಾಖೆ ಸಿಬ್ಬಂದಿ ಸಣ್ಣ ಹೈದ (56) ಅವರು ಹುಲಿ ದಾಳಿಯಿಂದಾಗಿ ಮೃತಪಟ್ಟಿದ್ದರು. ಇಂಥ ಸಂಘರ್ಷದ ಹಿನ್ನೆಲೆಯಲ್ಲಿ ಅರಣ್ಯ ಸಚಿವರ ನಿರ್ದೇಶನದ ಮೇರೆಗೆ ಬಂಡೀಪುರ ಮತ್ತು ನಾಗರಹೊಳೆಯಲ್ಲಿ ಸಫಾರಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ ಎಂಬುದು ಗಮನಾರ್ಹ.

ಮಾನವ, ಹುಲಿ ಸಂಘರ್ಷಕ್ಕೆ ಪ್ರಮುಖವಾಗಿ ಅರಣ್ಯ ಒತ್ತುವರಿ, ಕಾಡಿನಲ್ಲಿ ಹುಲಿ ಸಾಂದ್ರತೆ ಪ್ರದೇಶ ತಗ್ಗುವಿಕೆ ಕಾರಣವಾಗಿದೆ ಎನ್ನಲಾಗುತ್ತಿದೆ. ಮತ್ತೊಂದೆಡೆ ಈ ಸಂಘರ್ಷಗಳನ್ನು ನಿಯಂತ್ರಿಸಲು ಅರಣ್ಯ ಇಲಾಖೆ ಹುಲಿಗಳನ್ನು ಸೆರೆ ಹಿಡಿಯುವ, ಸ್ಥಳಾಂತರಿಸುವ ಕಾರ್ಯಾಚರಣೆಗಳನ್ನು ತೀವ್ರಗೊಳಿಸಿದೆ. ಕಳೆದ 3–4 ತಿಂಗಳಲ್ಲಿ ಈ ಮೂರು ಅರಣ್ಯ ವ್ಯಾಪ್ತಿಯಲ್ಲಿ 27 ಹುಲಿಗಳನ್ನು ಸೆರೆಹಿಡಿಯಲಾಗಿದ್ದು, ಈ ಪೈಕಿ 13 ಮರಿಗಳು ಸೇರಿವೆ.

> ಇನ್ನು 2025ರ ಡಿಸೆಂಬರ್ ಅಂತ್ಯದಲ್ಲಿ ರಾತ್ರಿ ವೇಳೆ ಚಾಮರಾಜನಗರ ತಾಲ್ಲೂಕಿನಲ್ಲಿ ಸೆರೆಹಿಡಿದ ಗಂಡು ಹುಲಿಯು ಸಂಘರ್ಷದಲ್ಲಿ ಭಾಗಿಯೇ ಆಗಿರಲಿಲ್ಲ. ಹೀಗಿದ್ದರೂ ಅದನ್ನು ಸೆರೆ ಹಿಡಿಯಲಾಗಿದೆ ಎಂದು ಅವರು ಪತ್ರದಲ್ಲಿ ಆರೋಪಿಸಿದ್ದಾರೆ. ಎನ್‌ಟಿಸಿಎ ಪತ್ರದ ಬಗ್ಗೆ ನನಗೆ ಮಾಹಿತಿ ಇಲ್ಲ. ನಮಗೆ ಪತ್ರ ತಲುಪಿದ ಬಳಿಕ ಈ ಬಗ್ಗೆ ನಾನು ಮಾತನಾಡಲು ಸಾಧ್ಯ.
> –ಪ್ರಭಾಕರನ್, ನಿರ್ದೇಶಕ, ಬಂಡೀಪುರ ಹುಲಿ ಯೋಜನೆ

**ಹುಲಿಗಳ ಸಂಖ್ಯೆ ಹೆಚ್ಚಾಗಿಲ್ಲ:** ಮಾನವ, ಹುಲಿ ಸಂಘರ್ಷದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಜನರ ಒತ್ತಡಕ್ಕೆ ಮಣಿದು ಹುಲಿಗಳ ಸೆರೆ ಕಾರ್ಯಾಚರಣೆ ನಡೆಸುತ್ತಿದೆ. ಆದರೆ, ಇದಕ್ಕೆ ಎನ್‌ಟಿಸಿಎ ಪ್ರತಿನಿಧಿ ಸಿ.ಎಂ ಶಿವಕುಮಾರ್ ಅವರು ಕೆಲವು ಆಕ್ಷೇಪಗಳನ್ನು ಎತ್ತಿದ್ದಾರೆ. ಕಳೆದ 3–4 ತಿಂಗಳಲ್ಲಿ 27 ಹುಲಿಗಳ ಸೆರೆಹಿಡಿದಿರುವುದು ಅತಿಯಾದ ಕಾರ್ಯಾಚರಣೆಯಾಗಿದೆ. ಅಲ್ಲದೇ ಅವೈಜ್ಞಾನಿಕವಾಗಿವಾಗಿದೆ. ಅರಣ್ಯದಲ್ಲಿ ಹುಲಿಗಳ ಸಂಖ್ಯೆ ಹೆಚ್ಚಾಗಿದೆ ಎಂಬುದನ್ನು ನಾವು ಒಪ್ಪುವುದಿಲ್ಲ.

ವೈಜ್ಞಾನಿಕ ಮೌಲ್ಯಮಾಪನದ ಪ್ರಕಾರ ಬಂಡೀಪುರದಲ್ಲಿ 110 ಹುಲಿಗಳಿದ್ದು, ಅಲ್ಲಿ ಒಟ್ಟು 229 ಹುಲಿಗಳು ಇರಬಹುದಾಗಿದೆ. ನಾಗರಹೊಳೆಯಲ್ಲಿ 135 ಹುಲಿಗಳಿದ್ದು, ಅಲ್ಲಿನ ಸಾಮರ್ಥ್ಯ 170 ಹುಲಿಗಳಿರುವಷ್ಟಿದೆ.

> ನಮ್ಮ ವ್ಯಾಪ್ತಿಯ ಅರಣ್ಯದಲ್ಲಿ ನಾನು ಅಧಿಕಾರ ವಹಿಸಿಕೊಂಡ ಬಳಿಕ ಉನ್ನತ ಅಧಿಕಾರಿಗಳ ಆದೇಶದ ಬಳಿಕವೇ ಹುಲಿಗಳನ್ನು ಸೆರೆ ಹಿಡಿಯಲಾಗಿದೆ. ಯಾವುದೇ ನಿಯಮ ಉಲ್ಲಂಘಿಸಿಲ್ಲ. ಅಲ್ಲದೇ ಸೆರೆ ಹಿಡಿದ ಹುಲಿಗಳು ಸುರಕ್ಷಿತವಾಗಿವೆ.
> – ಡಾ. ಮಾಲತಿಪ್ರಿಯಾ, ಸಿಸಿಎಫ್, ಚಾಮರಾಜನಗರ ವೃತ್ತ

ಇನ್ನು ಬಿಆರ್‌ಟಿಯಲ್ಲಿ ಸದ್ಯ 29 ಹುಲಿಗಳಿದ್ದು, ಆ ಕಾಡಿನಲ್ಲಿ 81 ಹುಲಿಗಳಿರುವಷ್ಟು ಸಾಮರ್ಥ್ಯವಿದೆ ಎಂದಿದ್ದಾರೆ. ಅಲ್ಲದೇ ತಮಿಳುನಾಡಿನ ಮುದುಮಲೈ ಹುಲಿ ರಕ್ಷಿತಾರಣ್ಯದಲ್ಲಿ 58 ಹುಲಿಗಳಿದ್ದು, ಈವರೆಗೆ ಗಾಯಗೊಂಡಿತ್ತು ಎಂಬ ಕಾರಣಕ್ಕೆ 1 ಹುಲಿಯನ್ನು ಮಾತ್ರ ಸೆರೆ ಹಿಡಿಯಲಾಗಿದೆ. ಕರ್ನಾಟಕದಲ್ಲಿ ಇಂಥ ನಿರ್ವಹಣೆ ಏಕೆ ಸಾಧ್ಯವಾಗಿಲ್ಲ ಎಂಬುದರ ಬಗ್ಗೆ ಅವರು ಪ್ರಶ್ನಿಸಿದ್ದಾರೆ. ಮಾರ್ಗಸೂಚಿ ಪ್ರಕಾರ, ಹುಲಿಗಳನ್ನು ಸೆರೆಹಿಡಿಯುವುದು ಪದೇ ಪದೆ ಸಂಘರ್ಷ ನಡೆಯುತ್ತಿದ್ದಾಗ ಅಥವಾ ತಕ್ಷಣದ ಅಪಾಯದ ಸಂದರ್ಭಗಳಲ್ಲಿ ಮಾತ್ರ. ರಾತ್ರಿ ವೇಳೆ ಸೆರೆ ಕಾರ್ಯಾಚರಣೆ ನಡೆಸುವುದು ತಪ್ಪು, ಅಪಾಯಕಾರಿ. ಎಲ್ಲಕ್ಕಿಂತ ಮಿಗಿಲಾಗಿ ಮಾರ್ಗಸೂಚಿ ಉಲ್ಲಂಘನೆಯಾಗಿದೆ ಎಂದಿದ್ದಾರೆ.

## ಮಾದಿಗ ಸಮುದಾಯಕ್ಕೆ ರಾಜಕೀಯ ಕ್ಷೇತ್ರದಲ್ಲಿ ಸಮಾನ ಅವಕಾಶ ಕಲ್ಪಿಸಿ

• ಉದಯವಾಹಿನಿ, ಗುಂಡ್ಲುಪೇಟೆ


ಉದಯವಾಹಿನಿ ಚಿತ್ರ

ತಾಲ್ಲೂಕಿನ ಶ್ರೀ ಕ್ಷೇತ್ರ ಪಾರ್ವತಿ ಬೆಟ್ಟದ ಗದ್ದಿಗಲ್ಲು ಸಿದ್ದಪ್ಪಾಜಿ ದೇವಸ್ಥಾನದಲ್ಲಿ ಒಟ್ಟಾಗಿ ಸೇರಿದ ಮಾದಿಗ ಸಮುದಾಯದ ಮುಖಂಡರು ಒಗ್ಗಟ್ಟು ಪ್ರದರ್ಶನ ಮಾಡುವ ಮೂಲಕ ಕ್ಷೇತ್ರದಲ್ಲಿ ಸಮುದಾಯಕ್ಕೆ ದಕ್ಕಬೇಕಾದ ಮೂಲಸೌಕರ್ಯಗಳ ಕುರಿತು ಶಾಸಕರ ಗಮನಕ್ಕೆ ತರುವ ಮೂಲಕ ಸಮುದಾಯದ ಬೆಳವಣಿಗೆಗೆ ಸಹಕರಿಸುವಂತೆ ಒಕ್ಕೊರಲಿನ ಮನವಿ ಸಲ್ಲಿಸಲು ತೀರ್ಮಾನಿಸಲಾಯಿತು.

ಸಮುದಾಯದ ಮುಖಂಡ ವಕೀಲ ರಾಜೇಶ್ ಮಾತನಾಡಿ ಕ್ಷೇತ್ರದ ಬಹುತೇಕ ಗ್ರಾಮಗಳಲ್ಲಿನ ಮೂಲಭೂತ ಸೌಕರ್ಯಗಳ ಪರಿಪೂರ್ಣತೆಗೆ ಆದ್ಯತೆ ನೀಡಬೇಕಿದೆ, ಪಟ್ಟಣದಲ್ಲಿನ ಬಾಬು ಜಗಜೀವನರಾಂ ಸಮುದಾಯ ಭವನದ ಕಾಮಗಾರಿಯನ್ನ ಪೂರ್ಣಗೊಳಿಸಿ ಏಪ್ರಿಲ್ 05 ರಂದು ಹಸಿರು ಕ್ರಾಂತಿ ಹರಿಕಾರ ಬಾಬು ಜಗಜೀವನರಾಂ ಅವರ ಜಯಂತಿ ಆಚರಣೆಗೆ ಸಕಲ ವ್ಯವಸ್ಥೆ ಕಲ್ಪಿಸಲು ವಿನಂವ್ರತವಾಗಿ ಕೋರಿಕೆ ಸಲ್ಲಿಸಲು ಎಲ್ಲರೂ ಕೈಜೋಡಿಸೋಣ ಎಂದು ಮನವಿ ಮಾಡಿದರು.

ಎಸ್ಸಿಪಿ ಟಿಎಸ್ಪಿ ಯೋಜನೆಯಡಿ ವಿಶೇಷ ಅನುದಾನವನ್ನ ಸಾಮಾಜಿಕ ನ್ಯಾಯದಡಿ ಮಾದಿಗ ಸಮುದಾಯಕ್ಕೂ ಹಂಚಿಕೆ ಮಾಡಬೇಕು, ನಮ್ಮಲ್ಲಿನ ಕಡುಬಡವರಿಗೆ, ಅರ್ಹರಿಗೆ ಯೋಜನೆ ಫಲಸಿಗುವಂತಾಗಬೇಕು ಎಂದು ಅಭಿಪ್ರಾಯಪಟ್ಟರು. ಹಾಗೆಯೇ ಆರ್. ಬಿ.ತಿಮ್ಮಾಪುರ ವಿರುದ್ಧ ವಿಪಕ್ಷದವರು ಎಣೆದಿರುವ ಕುತಂತ್ರಗಾರಿಕೆಯನ್ನ ಖಂಡಿಸಿದರು. **ಮಾದಿಗ ಸಮುದಾಯದ ಯುವಕರಿಗೆ ಉದ್ಯೋಗ ಸಿಗಲಿ :** ಸ್ಥಳೀಯವಾಗಿ ಲಭ್ಯವಿರುವಂತಹ ಗುತ್ತಿಗೆ ಆಧಾರಿತ ಉದ್ಯೋಗಗಳು ಆದ್ಯತೆ ಆಧಾರದ ಮೇಲೆ ದಕ್ಕುವಂತಾಗಬೇಕು, ಹಾಗೆಯೇ ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಎಡಗೈ ಸಮುದಾಯ ಯುವಕರಿಗೆ ಅವಕಾಶ ಕಲ್ಪಿಸಬೇಕು, ಹೀಗಾದಾಗ ಮಾತ್ರ ಹಿಂದುಳಿದ ಎಡಗೈ ಸಮುದಾಯದ ಉನ್ನತಿ ಸಾಧ್ಯ, ಹಾಗಾಗಿ ಸಮುದಾಯದ ಏಳ್ಗೆಗೆ ಎಲ್ಲರೂ ಒಕ್ಕೊರಲಿನ ಅಭಿಪ್ರಾಯ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಪಿಎಪಿಸಿಎಂಎಸ್ ಹಾಲಿ ನಿರ್ದೇಶಕ ಸೋಮಶೇಖರ್, ಪುರಸಭಾ ಮಾಜಿ ಉಪಾಧ್ಯಕ್ಷ ರಂಗಸ್ವಾಮಿ, ಹಂಗಳ ಗ್ರಾ.ಪ.ಮಾಜಿ ಉಪಾಧ್ಯಕ್ಷ ನಾಗಮಲ್ಲು , ಬಾಬುಜಗಜೀವನ್ ರಾಂ ಸಂಘಟನೆ ತಾ.ಅಧ್ಯಕ್ಷ ಮಹದೇವಯ್ಯ ನಿಟ್ರೆ, ಅಂಕಹಳ್ಳಿ ಸಿದ್ದಯ್ಯ, ನರಸಿಂಹ, ಕಂದೇಗಾಲ ಮಹೇಶ್, ಸಿದ್ದರಾಜು, ಗಂಗಾಧರ್, ನಾಗರಾಜು, ಸಿದ್ದರಾಜು, ನಾಗಯ್ಯ , ಚನ್ನಬಸವಯ್ಯ , ಶಂಕರ್ ಸೇರಿದಂತೆ ಹಲವರು ಹಾಜರಿದ್ದರು.

## ಎಸ್‌ಎಸ್‌ಎಲ್‌ಸಿ ಎ+ ಫಲಿತಾಂಶ ಪಡೆಯುವರಿಗೆ 50 ಸಾವಿರ ಬಹುಮಾನ: ಶಾಸಕ ನರೇಂದ್ರಸ್ವಾಮಿ ಘೋಷಣೆ

• ಉದಯವಾಹಿನಿ, ಮಳವಳ್ಳಿ


ಉದಯವಾಹಿನಿ ಚಿತ್ರ

ತಾಲ್ಲೂಕಿನಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಎ + ಫಲಿತಾಂಶ ಪಡೆಯುವ ವಿದ್ಯಾರ್ಥಿಗಳಿಗೆ ವೈಯಕ್ತಿಕವಾಗಿ ತಲಾ 50 ಸಾವಿರ ನಗದು ಬಹುಮಾನ ನೀಡಿ ಅಭಿನಂದಿಸುತ್ತೇನೆ ಎಂದು ಶಾಸಕ ಪಿ.ಎಂ. ನರೇಂದ್ರಸ್ವಾಮಿ ಹೇಳಿದರು. ಪಟ್ಟಣದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಶನಿವಾರ ಏರ್ಪಡಿಸಿರುವ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಸ್ಪೂರ್ತಿ ಸಿಂಚನ ಪರೀಕ್ಷಾ ಮಾರ್ಗದರ್ಶನ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಸರ್ಕಾರಿ ಶಾಲೆ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸಿಗಬೇಕು. ಮಳವಳ್ಳಿ ಶಾಲೆಗಳಿಗೆ ಉತ್ತಮ ಮೂಲ ಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ಶ್ರಮಿಸಲಾಗುತ್ತಿದೆ ಎಂದರು. ಉದ್ಯಮಗಳು ಶಿಕ್ಷಣದ ಜೊತೆಗೆ ಕೌಶಲ ಹೊಂದಿದ ಕಾರ್ಮಿಕರನ್ನು ಬಯಸುತ್ತಿವೆ. ನೀವು ಉತ್ತಮ ಅಂಕಗಳನ್ನು ಪಡೆಯದಿದ್ದರೆ ನಿರ್ದಿಷ್ಟ ಗುರಿ ಸಾಧಿಸಲು ಸಾಧ್ಯವಾಗುವುದಿಲ್ಲ ಎಂದು ಹೇಳಿದರು. ಬುದ್ಧಿವಂತಿಕೆಯ ಮಾನದಂಡ ಅಳೆಯುವುದು ಎಸ್‌ಎಸ್‌ಎಲ್‌ಸಿ ಪರೀಕ್ಷೆ. ಒಂದು ತಿಂಗಳಲ್ಲಿ ದೊಡ್ಡ ಜವಾಬ್ದಾರಿ ಎದುರಿಸುತ್ತಿದ್ದೀರಿ. ಧೈರ್ಯದಿಂದ, ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಿ. ಯಾವುದೇ ಕಾರಣಕ್ಕೂ ಎದೆಗುಂದಬೇಡಿ ಎಂದು ಸಲಹೆ ನೀಡಿದರು.

ಮಳವಳ್ಳಿ ತಾಲ್ಲೂಕಿನಲ್ಲಿ 39 ಮಲ್ಟಿ ಮೀಡಿಯಾ ಸೆಂಟರ್ ಆರಂಭವಾಗಲಿವೆ. ಇದರ ಸದ್ಬಳಕೆ ಮಾಡಿಕೊಳ್ಳಿ ಎಂದರು. ನೀವು ಉನ್ನತ ಶಿಕ್ಷಣ ಪಡೆದು, ಭವ್ಯ ಭಾರತದ ನಿರ್ಮಾತೃಗಳಾಗಿ. ಶಿಕ್ಷಕರಲ್ಲಿ ಹತ್ತಾರು ಸಂಘಟನೆಗಳಾಗಿವೆ. ರಾಜಕಾರಣ, ಗುಂಪುಗಾರಿಕೆ ಬಿಟ್ಟು ಉತ್ತಮ ಬೋಧನೆ ಮೂಲಕ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಿ ಎಂದು ಮನವಿ ಮಾಡಿದರು.

# ಫೆ.28ರಂದು ರಾಜ್ಯಮಟ್ಟದ ಶೈಕ್ಷಣಿಕ ಮಹಾ ಸಮ್ಮೇಳನ

• ಉದಯವಾಹಿನಿ, ರಾಮನಗರ


ಉದಯವಾಹಿನಿ ಚಿತ್ರ

ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಶನಿವಾರ ಬೃಹತ್ ಪ್ರಮಾಣದ ಸಂಘಟನೆ ಯಾಗಿದ್ದು, 55 ವರ್ಷಗಳನ್ನು ಪೂರೈಸಿ ಇವುದರಿಂದ ರಾಜ್ಯಮಟ್ಟದ ಶೈಕ್ಷಣಿಕ ಮಹಾ ಸಮ್ಮೇಳನವನ್ನು ಫೆ.28ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಮಹಾ ಸಮ್ಮೇಳನ, ಧನ್ಯತಾ ಸಮಾರಂಭ, ಸುವರ್ಣ ಮಹೋತ್ಸವ, ಗುರುವಂದನಾ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ರಮೇಶ್ ಹೇಳಿದರು. ನಗರದ ಗುರುಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿಎಂ ಸಿದ್ಧರಾಮಯ್ಯ , ಶಿಕ್ಷಣ ಸಚಿವ ಮಧು ಬಂಗಾರಪ್ಪ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಹಲವು ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಸರ್ಕಾರ ಶಾಲೆಗಳಿಗೆ ಉಚಿತ ವಿದ್ಯುತ್, ನೀರಿನ ಸಂಪರ್ಕ, ಮಹಿಳಾ ಶಿಕ್ಷಕರಿಗೆ ಮಾಸಿಕ ಋತುಚಕ್ರ ರಜೆ, ಶೈಕ್ಷಣಿಕ ಆರ್ಥಿಕ ಸಮೀಕ್ಷೆಯಲ್ಲಿ ಆಕಸ್ಮಿಕ ಮರಣ ಹೊಂದಿದವರಿಗೆ 20 ಲಕ್ಷ ಪರಿಹಾರ, 45 ಸಾವಿರ ಶಿಕ್ಷಕರಿಗೆ ವರ್ಗಾವಣೆ ಭಾಗ್ಯ ಸೇರಿದಂತೆ ಹಲವಾರು ಬೇಡಿಕೆಗಳನ್ನು ಈಡೇರಿಸಿದ್ದು ಸರ್ಕಾರದ ಮಂತ್ರಿಗಳಿಗೆ ಇದೆ ಸಂದರ್ಭದಲ್ಲಿ ಧನ್ಯತಾ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದರು. ಅದೆ ರೀತಿಯಲ್ಲಿ ಪ್ರತಿ ಜಿಲ್ಲೆ ಓರ್ವ ಮಹಿಳಾ ಶಿಕ್ಷಕಿಗೆ ಸಾವಿತ್ರಿಬಾಯಿ ಫುಲೆ, ಓರ್ವ ಶಿಕ್ಷಕರಿಗೆ ಜ್ಯೋತಿಬಾ ಫುಲೆ ಪ್ರಶಸ್ತಿ ನೀಡಿ ಗೌರವಸಲಾಗುತ್ತಿದೆ. ಅಲ್ಲದೆ ಸರ್ಕಾರಿ ಶಾಲೆಗಳಲ್ಲಿ ನಲಿ ಕಲಿ ಪದ್ದತಿ ರದ್ದುಗೊಳಿಸುವುದು, ಖಾಲಿ ಇರುವ ಶಿಕ್ಷಕರ ಹುದ್ದೆ ಭರ್ತಿ ಮಾಡುವುದು, ಹಳೆ ಪಿಂಚಣಿ ಜಾರಿಗೊಳಿಸುವುದು, ಗ್ರಾಮೀಣ ಕೃಪಾಂಕ ಜಾರಿಗೊಳಿಸುವುದು, ಶಿಕ್ಷಕರಿಗೆ ಬೋಧಕೇತರ ಕೆಲಸಗಳಿಂದ ಬಿಡುಗಡೆ ಮಾಡುವುದು ಸೇರಿದಂತೆ ಹಲವು ಹಕ್ಕೊತ್ತಾಯಗಳನ್ನು ಮಂಡಿಸಲಾಗುತ್ತಿದ್ದು, ಕಾರ್ಯಕ್ರಮದಲ್ಲಿ ಭಾಗವಹಿಸುವ ಶಿಕ್ಷಕರಿಗೆ ಇಲಾಖೆ ವತಿಯಿಂದ ಸಾಂದರ್ಭಿಕ ರಜೆ ಘೋಷಿಸಲಾಗಿದೆ ಎಂದು ತಿಳಿಸಿದರು. ಪ್ರಧಾನ ಕಾರ್ಯದರ್ಶಿ ವಾಸುದೇವ್, ಚನ್ನಪಟ್ಟಣ ಪ್ರಧಾನ ಕಾರ್ಯದರ್ಶಿ ಮಹದೇವ, ರಾಮನಗರ ತಾಲ್ಲೂಕು ಅಧ್ಯಕ್ಷೆ ಎಲ್.ವಿ.ರುದ್ರಾಣಮ್ಮ ಇದ್ದರು.

# ಕೆಂಗಲ್ ಹನುಮಂತಯ್ಯ ಸಮಾಧಿ, ವಿಶ್ರಾಂತಿ ಗೃಹ ನಿರ್ಲಕ್ಷ್ಯ

## ಜಿಲ್ಲೆಯ ಮಾಜಿ ಮುಖ್ಯಮಂತ್ರಿ, ವಿಧಾನಸೌಧ ನಿರ್ಮಾತೃ ಸ್ಮಾರಕ ಸ್ಥಳಗಳ ಕಡೆಗಣನೆಗೆ ಆಕ್ರೋಶ

• ಉದಯವಾಹಿನಿ, ಚನ್ನಪಟ್ಟಣ

ರಾಜ್ಯದ ಎರಡನೇ ಮುಖ್ಯಮಂತ್ರಿ, ಭವ್ಯವಾದ ವಿಧಾನಸೌಧವನ್ನು ಕಟ್ಟಿಸಿದ ಕೆಂಗಲ್ ಹನುಮಂತಯ್ಯ ಅವರ ಸಮಾಧಿ ಸ್ಥಳ ಅವರು ಕಟ್ಟಿಸಿದ ವಿಶ್ರಾಂತಿಗೃಹ ನಿರ್ಲಕ್ಷ್ಯಕ್ಕೆ ಒಳಗಾಗಿ ಪಾಳು ಬಿದ್ದಂತಿವೆ. ಇದು ಕನ್ನಡಪರ, ರೈತಪರ ಹೋರಾಟಗಾರರು, ಹನುಮಂತಯ್ಯ ಅವರ ಅಭಿಮಾನಿಗಳ ಆಕ್ರೋಶಕ್ಕೆ ಕಾರಣವಾಗಿದೆ. ತಾಲ್ಲೂಕಿನ ಕೆಂಗಲ್ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿರುವ ಹನುಮಂತಯ್ಯ ಅವರ ಸಮಾಧಿ ಸ್ಥಳ, ತಾಲ್ಲೂಕಿನ ಚಂದ್ರಗಿರಿದೊಡ್ಡಿ ಬಳಿಯ ಗುಡ್ಡದ ಮೇಲೆ ಹನುಮಂತಯ್ಯ ಅವರು ಕಟ್ಟಿಸಿದ ವಿಶ್ರಾಂತಿ ಗೃಹವನ್ನು ಜಿಲ್ಲಾಡಳಿತ, ತಾಲ್ಲೂಕು ಆಡಳಿತ ಕಡೆಗಣಿಸಿದೆ ಎಂಬು ಟೀಕೆ ವ್ಯಕ್ತವಾಗಿದೆ.


ಉದಯವಾಹಿನಿ ಚಿತ್ರ

ಫೆ. 14ರಂದು ಕೆಂಗಲ್ ಹನುಮಂತಯ್ಯ ಅವರ ಜನ್ಮದಿನ. ಸಾಮಾಜಿಕ ಜಾಲತಾಣ ಸೇರಿದಂತೆ ಎಲ್ಲಡೆ ಹನುಮಂತಯ್ಯ ಅವರನ್ನು ಸ್ಮರಿಸುವ ಕೆಲಸವಾಗುತ್ತಿದ್ದರೂ, ಅವರ ಸಮಾಧಿ ಸ್ಥಳ, ಅವರ ವಿಶ್ರಾಂತಿ ಗೃಹ ಕಡೆಗಣನೆಗೆ ಒಳಗಾಗಿದೆ. ಪ್ರತಿ ವರ್ಷ ಅವರ ಜನ್ಮದಿನ, ಪುಣ್ಯತಿಥಿ ವೇಳೆ ಅವರ ಕುಟುಂಬಸ್ಥರು ಬಂದು ಪೂಜೆ ಸಲ್ಲಿಸಿ ಹೋಗುವುದು, ದೇವಸ್ಥಾನ ಅಭಿವೃದ್ಧಿ ಸಮಿತಿ ಸಮಾಧಿ ಸ್ಥಳವನ್ನು ಸಿಂಗರಿಸಿ ಪೂಜೆ ಮಾಡುವುದು ಬಿಟ್ಟರೆ, ಸಮಾಧಿ ಸ್ಥಳವನ್ನು ಸ್ಮಾರಕವಾಗಿಸುವ ಯಾವುದೇ ಕಾರ್ಯಗಳು ನಡೆದಿಲ್ಲ ಎಂಬುದು ಕೆಂಗಲ್ ಅಭಿಮಾನಿಗಳ ಅಸಮಾಧಾನಕ್ಕೆ ಕಾರಣವಾಗಿದೆ.

**ಯಾವುದೇ ಕಾರ್ಯಗಳು ನಡೆದಿಲ್ಲ**

ರಾಮನಗರ ಜಿಲ್ಲೆಯ ಕೈಲಾಂಚ ಹೋಬಳಿಯ ಲಕ್ಕಪ್ಪನಹಳ್ಳಿ ಗ್ರಾಮದಲ್ಲಿ ಜನಿಸಿದ ಹನುಮಂತಯ್ಯ ಅವರು, ತಮ್ಮ ಮನೆದೇವರು ಕೆಂಗಲ್ ಆಂಜನೇಯಸ್ವಾಮಿ ಅವರ ಪರಮ ಭಕ್ತರಾಗಿ ಕೆಂಗಲ್ ಹನುಮಂತಯ್ಯ ಎಂದೇ ಪ್ರಸಿದ್ಧಿ ಪಡೆದವರು. 1908 ಫೆ. 14ರಲ್ಲಿ ಜನಿಸಿದ ಹನುಮಂತಯ್ಯ ಅವರು 1980 ಡಿ. 1ರಂದು ಕೊನೆಯುಸಿರೆಳೆದರು.

ಅವರ ಮೃತದೇಹವನ್ನು ತಾಲ್ಲೂಕಿನ ಇತಿಹಾಸ ಪ್ರಸಿದ್ಧ ಕೆಂಗಲ್ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ಸಮಾಧಿ ಮಾಡಿ, ಅಲ್ಲೇ ಕಿರು ಉದ್ಯಾನ ಸಹ ನಿರ್ಮಿಸಲಾಗಿದೆ.

**ಸ್ಮಾರಕ ನಿರ್ಮಾಣಕ್ಕೆ ಆಗ್ರಹ**

ಜಿಲ್ಲಾಡಳಿತ ಹನುಮಂತ್ಯನವರನ್ನು ಸಂಪೂರ್ಣ ನಿರ್ಲಕ್ಷ್ಯ ಮಾಡಿದೆ. ಇಂತಹ ಮಹನೀಯರ ಸಮಾಧಿ ಸ್ಥಳ ಹಾಗೂ ವಿಶ್ರಾಂತಿಗೃಹವನ್ನು ಸ್ಮಾರಕವನ್ನಾಗಿ ಮಾಡಲು ಮುಂದಾಗದಿರುವುದು ನಿಜಕ್ಕೂ ನಾಚಿಕೆಗೇಡು. ಜಿಲ್ಲೆಯ ಹೆಮ್ಮೆಯ ರಾಜಕಾರಣಿಯಾದ ಕೆಂಗಲ್ ಹನುಮಂತಯ್ಯ ಅವರ ಸಮಾಧಿ ಸ್ಥಳವನ್ನು ಸ್ಮಾರಕವಾಗಿಸುವುದರ ಜೊತೆಗೆ ಅವಸಾನದ ಅಂಚಿಗೆ ತಲುಪಿರುವ ವಿಶ್ರಾಂತಿ ಗೃಹವನ್ನು ದುರಸ್ತಿಗೊಳಿಸಬೇಕು. ತಿಂಗಳೊಳಗೆ ಈ ಕುರಿತು ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಸ್ಮಾರಕಕ್ಕಾಗಿ ಹೋರಾಟ ನಡೆಸಲಾಗುವುದು. ಎಂದು ಜಯ ಕರ್ನಾಟಕ ಜನಪರ ಸಂಘನೆಯ ಕುಮಾರಸ್ವಾಮಿ ಮತ್ತು ರೈತ ಸಂಘದ ಉಪಾಧ್ಯಕ್ಷ ಕೆ. ಮಲ್ಲಯ್ಯ ಎಚ್ಚರಿಕೆ ನೀಡಿದರು.

**ಇಂದಿನ ಪೀಳಿಗೆಗೆ ಪರಿಚಯಿಸುವ ಕೆಲಸ ಮಾಡಬೇಕು**


ಹಾಗೆಯೆ ಚಂದ್ರಗಿರಿದೊಡ್ಡಿಯಲ್ಲಿ ಹನುಮಂತಯ್ಯ ಅವರು ನಿರ್ಮಿಸಿರುವ ವಿಶ್ರಾಂತಿಗೃಹ ಇದೆ. 1975ರಲ್ಲಿ ಹನುಮಂತ್ಯಯ ಅವರು ಇದನ್ನು ನಿರ್ಮಿಸಿದ್ದರು. ಅವರು ಕೆಂಗಲ್ ಕ್ಷೇತ್ರಕ್ಕೆ ಭೇಟಿ ನೀಡಿದಾಗ, ಈ ಗೃಹದಲ್ಲಿ ತಂಗುತ್ತಿದ್ದರು. ಆದರೆ ಈಗ, ವಿಶ್ರಾಂತಿ ಗೃಹ ಪಾಳು ಬಿದ್ದಿದೆ. ಕಟ್ಟಡದ ಸುತ್ತಲೂ ಗಿಡಗಂಟಿಗಳು ಬೆಳೆದುಕೊಂಡಿದೆ. ಜೊತೆಗೆ ಕಟ್ಟಡ ಶಿಥಿಲಾವಸ್ಥೆ ತಲುಪಿದೆ. ಕಿಟಕಿ, ಬಾಗಿಲುಗಳು ನಾಪತ್ತೆಯಾಗಿವೆ. ಹನುಮಂತಯ್ಯ ಅವರನ್ನು ನೆನಪಿಸಿಕೊಳ್ಳುವ ಜನಪ್ರತಿನಿಧಿಗಳು, ಅಧಿಕಾರಿಗಳು ಅವರಿಗೆ ಸಲ್ಲಬೇಕಾದ ಗೌರವ ನೀಡದಿರುವುದು ವಿಪರ್ಯಾಸ. ಈ ಸ್ಥಳಗಳನ್ನು ಸ್ಮಾರಕ ಸ್ಥಳಗಳನ್ನಾಗಿ ಅಭಿವೃದ್ಧಿಪಡಿಸಿ, ಹನುಮಂತಯ್ಯ ಅವರು ಮಾಡಿರುವ ಕೆಲಸ ಕಾರ್ಯಗಳನ್ನು ಇಂದಿನ ಪೀಳಿಗೆಗೆ ಪರಿಚಯಿಸುವ ಕೆಲಸ ಮಾಡಬೇಕು ಎಂಬುದು ಕೆಂಗಲ್ ಅಭಿಮಾನಿಗಳ ಒತ್ತಾಯವಾಗಿದೆ.

ಅಂತರಾಳದಿಂದ... EDITORIAL


# ಸಂಸತ್ ಕಲಾಪದ ಮಹತ್ವ-ಘನತೆ ಸಂರಕ್ಷಿಸಲು ಸಭಾಧ್ಯಕ್ಷಪೀಠ ವಿಫಲ

ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರ ವಿರುದ್ಧ ಪ್ರತಿ ಪಕ್ಷಗಳು ಮಂಡಿಸಿರುವ ಅವಿಶ್ವಾಸ ಗೊತ್ತುವಳಿಯು ಸಂಖ್ಯಾಬಲದ ಕೊರತೆಯಿಂದಾಗಿ ಬಿದ್ದುಹೋಗುವುದು ಖಚಿತ. ಆದರೆ, ಆ ನಿರೀಕ್ಷಿತ ಫಲಿತಾಂಶವು ಅವಿಶ್ವಾಸ ನಿರ್ಣಯಕ್ಕೆ ಕಾರಣವಾಗಿರುವ ಮುಖ್ಯ ವಿಷಯದ ಮಹತ್ವ ಕಡಿಮೆ ಆಗಲು ಕಾರಣವಾಗಬಾರದು. ಸ್ಪೀಕರ್ ಅವರ ನಡವಳಿಕೆಯು ಸಭಾಧ್ಯಕ್ಷರು ಎತ್ತಿಹಿಡಿಯಬೇಕಾದ ಅತ್ಯುತ್ತಮ ಮಾನದಂಡಗಳಿಗೆ ಅನುಗುಣವಾಗಿಲ್ಲ. ಹಿಂದಿನ ಕೆಲವು ಸ್ಪೀಕರ್‌ಗಳು ರೂಪಿಸಿಕೊಟ್ಟ ಅನುಸರಣೀಯ ಪೂರ್ವ ನಿದರ್ಶನಗಳ ಮಾದರಿಗೆ ಅನುಗುಣವಾಗಿಯೂ ಇಲ್ಲ. ಕೊನೆಗೊಂಡ ಬಜೆಟ್ ಅಧಿವೇಶನದ ಮೊದಲ ಹಂತದ ಕಲಾಪದಲ್ಲಿನ ಸ್ಪೀಕರ್ ಅವರ ನಡವಳಿಕೆಯು ಅವಿಶ್ವಾಸ ನಿರ್ಣಯಕ್ಕೆ ತಕ್ಷಣದ ಪ್ರಚೋದನೆ ಒದಗಿಸಿದ್ದರೂ, ಈ ಹಿಂದೆಯೂ ಓಂ ಬಿರ್ಲಾ ಅವರು ಸದನವನ್ನು ನಿರ್ವಹಿಸಿರುವ ರೀತಿಯ ಬಗ್ಗೆ ಪ್ರತಿಪಕ್ಷಗಳು ಆತಂಕ, ಅಸಮಾಧಾನ ವ್ಯಕ್ತಪಡಿಸಿವೆ. ಕಲಾಪಗಳು ನ್ಯಾಯಯುತವಾಗಿ ಹಾಗೂ ಸಂಸದೀಯ ಪ್ರಜಾಪ್ರಭುತ್ವ ಮಾದರಿಯ ಅತ್ಯುತ್ತಮ ಸಂಪ್ರದಾಯವನ್ನು ಅನುಸರಿಸುವಂತೆ ನೋಡಿಕೊಳ್ಳುವುದು ಸಭಾಧ್ಯಕ್ಷರ ಹೊಣೆಗಾರಿಕೆಯಾಗಿದೆ. ಆದರೆ, ಈ ಬಗ್ಗೆ ಬಿರ್ಲಾ ಅವರಿಗೆ ಯಾವುದೇ ಸ್ಪಷ್ಟತೆ ಇರುವಂತೆ ಕಾಣಿಸುತ್ತಿಲ್ಲ. ಸದನವನ್ನು ಅವರು ನಿರ್ವಹಿಸುತ್ತಿರುವ ರೀತಿಯ ಬಗ್ಗೆ ಪ್ರತಿಪಕ್ಷಗಳು ವ್ಯಕ್ತಪಡಿಸಿರುವ ಕಳವಳವನ್ನು ನಿವಾರಿಸುವಲ್ಲಿ ಅವರ ಸ್ಪಂದನ ನಿರಾಶಾದಾಯಕವಾಗಿದೆ. ಭಾರತದ ಸೇನೆಯ ಮಾಜಿ ಮುಖ್ಯಸ್ಥ ಜನರಲ್ ಎಂ.ಎಂ. ನರವಣೆ ಅವರ ನೆನಪುಗಳ ಅಪ್ರಕಟಿತ ಕೃತಿಯ ಆಯ್ದ ಭಾಗಗಳನ್ನು ಸದನದಲ್ಲಿ ಪ್ರಸ್ತಾಪಿಸುವುದಕ್ಕೆ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಅನುಮತಿ ನಿರಾಕರಿಸಿರುವ ಸ್ಪೀಕರ್ ಅವರ ನಿರ್ಧಾರ ವಿವಾದಕ್ಕೆ ಕಾರಣವಾಗಿದೆ. ರಾಷ್ಟ್ರೀಯ ಭದ್ರತೆಯ ವಿಷಯಕ್ಕೆ ಸಂಬಂಧಿಸಿದಂತೆ ಭಾರತದ ಸೇನೆಯ ಮಾಜಿ ಮುಖ್ಯಸ್ಥರು ಗಮನಿಸಿರುವ ಅಂಶಗಳ ಬಗ್ಗೆ ಸದನದಲ್ಲಿ ಪ್ರಸ್ತಾಪಿಸುವ ಹಕ್ಕು ರಾಹುಲ್ ಗಾಂಧಿ ಅವರಿಗಿದೆ. ಕಲಾಪಕ್ಕೆ ಸಂಬಂಧಿಸಿಲ್ಲದ ಪಠ್ಯಗಳನ್ನು ಸದನದಲ್ಲಿ ಓದುವುದನ್ನು ನಿಯಮಗಳು ನಿರ್ಬಂಧಿಸುತ್ತವಾದರೂ, ಪಠ್ಯದ ನೈಜತೆಯನ್ನು ಪ್ರಮಾಣೀಕರಿಸುವ ಮೂಲಕ ಸಂಸದರು ಸದನದಲ್ಲಿ ವಿಷಯ ಪ್ರಸ್ತಾಪಿಸಲು ಅವಕಾಶವಿದೆ. ಹಾಗಾಗಿ, ರಾಹುಲ್ ಅವರಿಗೆ ನರವಣೆ ಅವರ ಪುಸ್ತಕದಲ್ಲಿನ ವಿವರಗಳನ್ನು ಸದನದಲ್ಲಿ ಪ್ರಸ್ತಾಪಿಸುವುದಕ್ಕೆ ಸಭಾಧ್ಯಕ್ಷರು ಅನುಮತಿ ನೀಡಬೇಕಾಗಿತ್ತು.

ಸಂಸತ್ತಿನ ಅತ್ಯುತ್ತಮ ಪರಂಪರೆಯು, ಲೋಕಸಭೆ ವಿರೋಧ ಪಕ್ಷದ ನಾಯಕ ಮಾತನಾಡುವುದನ್ನು ನಿರ್ಬಂಧಿಸಲು ಒಪ್ಪುವುದಿಲ್ಲ. ರಾಷ್ಟ್ರಪತಿ ಅವರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಯಲ್ಲಿ ಪ್ರಧಾನಿ ಅವರು ಮಾತನಾಡಬೇಕಾಗಿತ್ತು. ಆ ಸಂದರ್ಭದಲ್ಲಿ ಸದನಕ್ಕೆ ಗೈರುಹಾಜರಾಗುವಂತೆ ಬಿರ್ಲಾ ಅವರು ನರೇಂದ್ರ ಮೋದಿ ಅವರಿಗೆ ನೀಡಿದ ಸಲಹೆಯೂ ವಿವಾದಾಸ್ಪದವಾಗಿದೆ. ತಮ್ಮ ನಡವಳಿಕೆಗೆ ಸಮರ್ಥನೆಯಾಗಿ, ಮಹಿಳಾ ಸದಸ್ಯರಿಂದ ಪ್ರಧಾನಿ ಮೇಲೆ ದಾಳಿ ನಡೆಸುವುದು ಸೇರಿದಂತೆ ಅಹಿತಕಾರಿ ಆಗಿ ನಡೆದುಕೊಳ್ಳಲು ವಿರೋಧ ಪಕ್ಷಗಳು ಯೋಜಿಸಿರುವುದು ವಿಶ್ವಾಸಾರ್ಹ ಮೂಲಗಳಿಂದ ತಿಳಿದುಬಂತು ಎಂದು ಸ್ಪೀಕರ್ ಹೇಳಿದ್ದಾರೆ. ಒಂದುವೇಳೆ, ಪ್ರಧಾನಿ ಅವರ ಸುರಕ್ಷತೆಗೆ ಬೆದರಿಕೆ ಇದ್ದಲ್ಲಿ ಪಿತೂರಿ ಮಾಡಿದವರ ಮೇಲೆ ಕ್ರಮ ಕೈಗೊಳ್ಳುವುದು ಹಾಗೂ ಪ್ರಧಾನಿ ಅವರ ಸುರಕ್ಷತೆಯ ಹೊಣೆ ಹೊತ್ತವರನ್ನು ಎಚ್ಚರಿಸುವುದು ಸಭಾಧ್ಯಕ್ಷರ ಕರ್ತವ್ಯವಾಗಿತ್ತೇ ಹೊರತು, ಪ್ರಧಾನಿ ಅವರನ್ನು ಸದನದಿಂದ ದೂರವಿರಿಸುವುದು ಸಮರ್ಪಕವಾದ ಪ್ರತಿಕ್ರಿಯೆಯಲ್ಲ. ಸಂಸತ್‌ನಲ್ಲಿನ ಚರ್ಚೆ, ಸಂವಾದಗಳ ಗುಣಮಟ್ಟ, ನಡವಳಿಕೆಯು ಇತ್ತೀಚಿನ ವರ್ಷಗಳಲ್ಲಿ ತೀವ್ರವಾಗಿ ಕುಸಿಯುತ್ತಿದೆ. ಈ ಕುಸಿತದ ಜವಾಬ್ದಾರಿಯನ್ನು ಸರ್ಕಾರದೊಂದಿಗೆ ವಿರೋಧ ಪಕ್ಷಗಳೂ ಹೊರಬೇಕಾಗಿದೆ. ಆದರೆ, ಸಭಾಧ್ಯಕ್ಷರು ತಮ್ಮ ಕರ್ತವ್ಯವನ್ನು ಪರಿಣಾಮಕಾರಿಯಾಗಿ ನಿರ್ವಹಿಸುವಲ್ಲಿ ವಿಫಲರಾದಾಗ, ನಿಷ್ಪಕ್ಷಪಾತವಾಗಿ, ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲು ಸೋತಾಗ, ಕಲಾಪ ಅರ್ಥಪೂರ್ಣವಾಗಿ ಸಾಗುವುದಕ್ಕೆ ಅಗತ್ಯವಾದ ಅತ್ಯುತ್ತಮ ಮಾನದಂಡಗಳು, ಸಂಪ್ರದಾಯಗಳನ್ನು ನಿರ್ಲಜ್ಜೆಯಿಂದ ನಿರ್ಲಕ್ಷಿಸಿದಾಗ. ಈ ಕುಸಿತ ಮತ್ತಷ್ಟು ಆತಂಕ ಹುಟ್ಟಿಸುವಂತಹದ್ದಾಗುತ್ತದೆ. ಅವಿಶ್ವಾಸ ಗೊತ್ತುವಳಿ ಮಂಡನೆಯ ಸಂದರ್ಭವನ್ನು ಬಿರ್ಲಾ ಅವರು ಸ್ವತಃ ಆಹ್ವಾನಿಸಿಕೊಂಡಿದ್ದಾರೆ. ಬಜೆಟ್ ಅಧಿವೇಶನದ ಎರಡನೇ ಹಂತ ಮಾರ್ಚ್ 9ರಿಂದ ಪ್ರಾರಂಭವಾಗಲಿದ್ದು, ಸ್ಪೀಕರ್ ಕಾರ್ಯವಿಧಾನದ ಪರಾಮರ್ಶೆ, ಸದನದ ಘನತೆಯನ್ನು ಸಂರಕ್ಷಿಸುವ ಕುರಿತಾದ ಅರ್ಥಪೂರ್ಣ ಚರ್ಚೆ ನಡೆಯಬೇಕಾಗಿದೆ.



## ರಾಮಾಯಣ



### ವರ್ಷಾಕಾಲ ವರ್ಣನೆ

• ಹಿಂದಿನ ಸಂಚಿಕೆಯಿಂದ **120ನೆಯ ಅಧ್ಯಾಯ**

ಪರ್ವತಗಳು ಮೇಘಗಳೆಂಬ ಕೃಷ್ಣಾಜಿನ ಯಜ್ಞೋಪವೀತಗಳನ್ನು ಧರಿಸಿಕೊಂಡು, ಸುಶ್ಮಲುಂಟಾಗುವ ಧ್ವನಿಗೆ ಪ್ರತಿಧ್ವನಿ ಕೊಡುತ್ತಿರುವ ತಮ್ಮ ಗುಹೆಗಳಲ್ಲಿ ಹೊಕ್ಕ ಗಾಳಿಯ ಧ್ವನಿಯಿಂದ ಅಧ್ಯಯನಮಾಡುವ ಬ್ರಹ್ಮಚಾರಿಗಳೋ ಎಂಬಂತೆ ಒಪ್ಪುತ್ತಿವೆ. ಗುಡುಗುತ್ತಿರುವ ನೀಲಮೇಘಗಳು ಮಿಂಚುಗಳೆಂಬ ಚಾವಟಿ ಪೆಟ್ಟಿನ ವೇದನೆಯಿಂದ ಮೆಲ್ಲಗೆ ತೆರಳುತ್ತಿವೆ. ನೀಲವರ್ಣವಾದ ಮೇಘಮಂಡಲದಲ್ಲಿ ಹೊಳೆಯುವ ಮಿಂಚು ಶ್ಯಾಮಲವರ್ಣನಾದ ರಾವಣನ ಬಳಿಯಲ್ಲಿ ಕುಳಿತುಕೊಂಡು ಬಿಸುಸುಯ್ಯುತ್ತಿದ್ದ ಸೀತಾದೇವಿಯಂತೆ ಒಪ್ಪುತ್ತಿದೆ! ದಿಕ್ಕುಗಳು ಮೇಘಗಳಿಂದ ವ್ಯಾಪಿಸಲ್ಪಟ್ಟು ಚಂದ್ರಸೂರ್ಯರು ಕಾಣಿಸದಿರುವುದರಿಂದ ಕತ್ತಲೆಗವಿದು ಕಾಮುಕರಾದವರಿಗೆ ಅನುಕೂಲವಾಗಿದೆ. ಎಲೈ ಲಕ್ಷ್ಮಣ, ವಿರಹಶೋಕದಿಂದ ಕಂಗೆಟ್ಟಿರುವ ನನಗೆ ವಿರಹಾಗ್ನಿಯನ್ನುಂಟುಮಾಡುತ್ತ ಪುಷ್ಪಿತವಾಗಿ ನಿಂತಿರುವ ಕೊಡಸಿನ ಮರ ಗಳನ್ನು ನೋಡು. ಈ ವರ್ಷಾಕಾಲದಲ್ಲಿ ಭೂಮಿಯು ಧೂಳು ತಗ್ಗಿದೆ. ಗಾಳಿಯು ಅತಿಶೀತ ವಾಗಿದೆ. ಎಲ್ಲಿ ನೋಡಿದರೂ ಮಳೆಯಿಂದ ನೆನೆದ ಭೂಮಿಯಲ್ಲಿ ಸೆಕೆಯುಂಟಾಗುತ್ತಿದೆ. ದಾರಿಹೋಕರ ಸಂಚಾರವು ಅಡಗಿದೆ. ಅರಸರ ದಂಡಯಾತ್ರೆಯು ನಿಲ್ಲಲು ಭಟರು ತಮ್ಮ ಸ್ತ್ರೀಯರಿರುವ ಸ್ಥಳಕ್ಕೆ ತಿರುಗಿ ಹೋಗುತ್ತಿದ್ದಾನೆ. ಚಕ್ರವಾಕಪಕ್ಷಿಗಳು ಮಾನಸ ಸರೋವರದಲ್ಲಿದ್ದು ವರ್ಷಾಕಾಲವನ್ನು ಕಳೆಯಬೇಕೆಂದು ತಮ್ಮ ಸ್ತ್ರೀಪಕ್ಷಿಗಳನ್ನು ಕೂಡಿಕೊಂಡು ಹೋಗುತ್ತಿವೆ. ಮಾರ್ಗಗಳಲ್ಲಿ ಕುದುರೆ ಮೊದಲಾದ ವಾಹನಗಳ ಸಂಚಾರವಿಲ್ಲ. ಮೇಘಗಳಿಂದ ಮುಚ್ಚಲ್ಪಟ್ಟ ಆಕಾಶ ಮಂಡಲವು ಒಂದು ದಿಕ್ಕಿನಲ್ಲಿ ಬೆಳಕಾಗಿಯೂ ಮತ್ತೊಂದು ದಿಕ್ಕಿನಲ್ಲಿ ಕತ್ತಲೆಗವಿದೂ ಇದೆ.

ಪರ್ವತಗಳು ಕೆಂಪಾದ ಗೈರಿಕಾದಿ ಧಾತುಗಳಿಂದಲೂ ನವಿಲುಗಳ ಧ್ವನಿಗಳಿಂದಲೂ ನೀರು ಹರಿಯುತ್ತಿರುವ ಗಿರಿನದಿಗಳಿಂದಲೂ ಮನೋಹರವಾಗಿವೆ. ಎಲ್ಲಿ ನೋಡಿದರೂ ಪಲ್ಲವಿತವಾದ ಮಾವಿನಮರಗಳಿಂದ ಮಾವಿನಹಣ್ಣುಗಳು ಗಾಳಿಯಿಂದ ತೊಟ್ಟುಕಳೆದು ಬೀಳುತ್ತಿವೆ. ಮಿಂಚುಗಳೆಂಬ ಪತಾಕೆಗಳುಳ್ಳವಾಗಿ ಬೆಳ್ಳಕ್ಕಿಗಳ ಪಂಕ್ತಿಗಳೆಂಬ ಸರಪಣಿಗಳುಳ್ಳವಾಗಿ ಪರ್ವತಾಕಾರವಾದ ಮೇಘಗಳು ಗುಡುಗಿನ ಧ್ವನಿಗಳಿಂದ ಯುದ್ಧರಂಗದಲ್ಲಿ ಪರಬಲದಿಂದ ಮುರಿದೋಡುವ ಆನೆಗಳೋ ಎಂಬಂತೆ ಒಪ್ಪುತ್ತಿವೆ. ಪರ್ವತದ ತಪ್ಪಲುಗಳಂ ಮಳೆನೀರಿನ ಪ್ರವಾಹದಿಂದಲೂ ಎಳೆ ಗರಿಕಗಳ ಮೇಲೆ ನರ್ತನಮಾಡುವ ನವಿಲುಗಳಿಂದಲೂ ಕುಳಿತಿರುವ ಬೆಳ್ಳಕ್ಕಿಗಳಿಂದಲೂ ಮರೆಯುವ ವನಗಳುಳ್ಳವಾಗಿ ಮನೋಹರವಾಗಿ ಒಪ್ಪುತ್ತಿವೆ. ನೀರುಂಡ ಮೇಘಗಳನ್ನು ಬಯಸಿ ಸಾಲಾಗಿ ಹೋಗುವ ಬೆಳ್ಳಕ್ಕಿಗಳು ಬಿರುಗಾಳಿಯಿಂದ ಚೆದರಿ ಮೇಘ ಮಂಡಲಕ್ಕೆ ಆಲಂಕರಿಸಲ್ಪಟ್ಟ ಬೆಳ್ದಾವರೆಮಾಲೆಯೋ ಎಂಬಂತೆ ಒಪ್ಪುತ್ತಿವೆ. ಭೂಮಿಯು ಇಂದ್ರಗೋಪ ಹುಳುಗಳಿಂದ ಬೆರಸಲ್ಪಟ್ಟ ಎಳೆಯ ಹುಲ್ಲುಳ್ಳದ್ದಾಗಿ ಚಿತ್ರಿತವಾದ ಹಸಿರುಬಟ್ಟೆಯನ್ನು ಹೊದ್ದಿರುವ ಸ್ತ್ರೀಯಂತೆ ಒಪ್ಪುತ್ತಿದೆ. ವರ್ಷಾಕಾಲವು ಪ್ರಾಪ್ತವಾದ್ದರಿಂದ ನದಿಗಳು ವೇಗದಿಂದ ''ಸಮುದ್ರವನ್ನೈದುತ್ತಿವೆ. ಬೆಳ್ಳಕ್ಕಿಗಳು ಅತಿಹರ್ಷದಿಂದ ಮೇಘಮಂಡಲವನ್ನೈದುತ್ತಿವೆ. ಈಗ ಕಾಮುಕಿಯರಾದ ಸ್ತ್ರೀಯರು ತಮ್ಮ ಪುರುಷರ ಬಳಿಗೈದುತ್ತಿರುವರು. ವನಗಳು ನರ್ತನಮಾಡುವ ನವಿಲುಗಳುಳ್ಳವಾಗಿವೆ. ವೃಷಭಗಳು ಗೋವುಗಳಲ್ಲಿ ಕಾಮಾತುರವುಳ್ಳ ವಾಗಿವೆ. ಭೂಮಿಯು ಪೈ ರುಪಜ್ಜೆಗಳಿಂದ ರಮಣೀಯವಾಗಿದೆ. ನದಿಗಳು ವೇಗವಾಗಿ ಪ್ರವಹಿಸುತ್ತಿವೆ. ಮೇಘಗಳು ಮಳೆಗರೆಯುತ್ತಿವೆ. ಮದ್ದಾನೆಗಳು ಆನಂದದಿಂದ ಹಿತ ಧ್ವನಿಮಾಡುತ್ತಿವೆ. ವನಗಳು ಪುಷ್ಪಿತವಾಗಿಯೂ ಫಲಿತವಾಗಿಯೂ ರಮಣೀಯವಾಗಿ ಒಪ್ಪುತ್ತಿವೆ. ಈಗ ವಿರಹಿಗಳು ತಮ್ಮ ಪ್ರಾಣವಲ್ಲಭರನ್ನು ನೆನೆದು ಧ್ಯಾನ ಮಾಡುತ್ತಿರುವರು. ಎಲ್ಲಿ ನೋಡಿದರೂ ನವಿಲುಗಳು ಕುಣಿಯುತ್ತಿವೆ. ಕಪಿಗಳು ಸಮೃದ್ಧವಾಗಿ ಸಿಕ್ಕುತ್ತಿರುವ ಆಹಾರಗಳಿಂದ ನೆಮ್ಮದಿಯಿಂದಿರುವುವು. ಮಸಿಯ ಚೂರ್ಣಕ್ಕೆ ಸಮಾನವಾದ ಕಾಂತಿ ಯುಳ್ಳ ರಸಭರಿತವಾದ ವೃಕ್ಷಫಲಗಳಿಂದ ಇಟ್ಟಣಿಸಿರುವ ನೇರಿಳೆಮರದ ಕೊಂಬೆಗಳು ದುಂಬಿಗಳಿಂದ ಮುಚ್ಚಿಹೋದಂತೆ ಕಾಣುತ್ತಿವೆ.

ಮುಂದುವರಿಯುವುದು...

ಎಲ್ಲರೂ ಎಲ್ಲಾ ರಂಗದಲ್ಲೂ ಶುದ್ಧ ಪರಿಶುದ್ಧ ಒಳ್ಳೆಯ ಹೃದಯ, ಮನಸುಳ್ಳ ಮನುಷ್ಯರಾಗಿ ಬದುಕುವ ಸಂಕಲ್ಪ ಮಾಡೋಣ

# ಜಾಗರಣೆಗಿಂತ ಎಲ್ಲರೂ ಜಾಗೃತರಾಗೋಣ



ಕಲಾ ಸಾಹಿತ್ಯ

ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

(1) ಕೆಟ್ಟ ಆಲೋಚನೆಗಳು, ಕೆಟ್ಟ ಚಿಂತನೆಗಳು, ಕೆಟ್ಟ ಮನಸ್ಸುಗಳು, ಕೆಟ್ಟ ಬಾಯಿ, ಕೆಟ್ಟಕಣ್ಣು, ಕೆಟ್ಟ ಕಿವಿಗಳು, ಕೆಟ್ಟದೃಷ್ಟಿಗಳು, ಕೆಟ್ಟ ಹೃದಯಗಳು, ಕೆಟ್ಟ ಕೈಗಳು ಮಾತ್ರವೇ ಜೀವನದ ಎಲ್ಲಾ ಸಮಸ್ಯೆಗಳಿಗೆ ಮೂಲ ಕಾರಣ.

(2) ಪರಿಪಕ್ವವಾಗಿರುವ ಬಹುಮುಖ ಪ್ರಜ್ಞೆಯನ್ನು ಒಳಗೊಂಡ ಸರಿಯಾದ ಪೂರ್ಣ ಜ್ಞಾನವೇ ನಮ್ಮ ಎಲ್ಲಾ ಸಮಸ್ಯೆಗಳೆಲ್ಲದಕ್ಕೂ ಅಂತಿಮ ಪರಿಹಾರ.

(3) ಸ್ವಾರ್ಥರಹಿತ, ಅಪೇಕ್ಷ ರಹಿತ, ನಿಸ್ವಾರ್ಥ ಸೇವೆ ಮಾತ್ರವೇ ನಮ್ಮ ಎಲ್ಲಾ ಪ್ರಗತಿಗೆ ಮತ್ತು ಶ್ರೇಯಸ್ಸಿಗೆ ಮಾರ್ಗ.

(4) ಪ್ರತಿದಿನ ದೇಹ ಮತ್ತು ಮನಸ್ಸಿಗೆ ಉಲ್ಲಾಸವಾಗುವ ಯೋಗ, ಧ್ಯಾನ, ಸತ್ಸಂಗ, ಪ್ರವಚನ, ಪ್ರಾರ್ಥನೆಯಿಂದ ಭಗವಂತನಲ್ಲಿ ಐಕ್ಯವಾಗಿ ಉತ್ತಮ ಹಾಗೂ ಶ್ರೇಷ್ಠ ಮನುಷ್ಯನಾಗಬಹುದು.

(5) ನಮ್ಮ ಮನದಲ್ಲಿ ಸ್ಥಾನಗಿಟ್ಟಿಸಿಕೊಂಡು ಸಿಂಹಾಸನದಲ್ಲಿ ಕುಳಿತು ರಾಜ್ಯಭಾರ ಮಾಡುತ್ತಿರುವ ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಲೋಭ, ಮದ, ಮತ್ಸರ ಹಾಗೂ ಅಹಂಕಾರ ಇವುಗಳ ವಿರುದ್ಧ ಹೋರಾಟ ಮಾಡಿ ಗೆದ್ದು ಅವುಗಳನ್ನ ತ್ಯಜಿಸಿದ ನಂತರವೇ ಅನಂತದಲ್ಲಿರುವ ಆನಂದವನ್ನು ಆನಂದವಾಗಿ ಅನುಭವಿಸಬಹುದು.

(6) ಪ್ರತಿದಿನ ಉತ್ತಮವಾದ ಚೈತನ್ಯ ಚಿಲುಮೆಯಾಗಿ ಕಂಗೊಳಿಸಬೇಕಾದರೆ ಗೋಡೆ ನಿರ್ಮಿಸಿಕೊಂಡು ಸ್ವಾರ್ಥವಾಗಿ ಬದುಕುವ ಬದಲು, ಸಂಪರ್ಕದ ಸೇತುವೆಯಾಗಿ ಸಂಬಂಧವನ್ನು ಗಟ್ಟಿಮಾಡಿಕೊಳ್ಳಬೇಕು ಹಾಗೂ ಮಾನವ ಮತ್ತು ಮಾನವನ ನಡುವೆ ಸದಾ ಅವಿನಾಭಾವ ಸಂಬಂಧ ಇರಬೇಕು.

(7) ಹುಟ್ಟಿನಿಂದ ಕೊನೆಯವರೆಗೂ ಮನುಷ್ಯನಲ್ಲಿ ಶ್ರದ್ಧೆ, ಭಕ್ತಿ, ವೈರಾಗ್ಯ ಇರಬೇಕು. ದೇವರಿಗೆ ನೈವೇದ್ಯ ಮುಖ್ಯ ಅಲ್ಲ, ಭಕ್ತಿ ತೋರಿಸಬೇಕು.



ಉದಯವಾಹಿನಿ ಚಿತ್ರ

ಇವೆರಡಿದ್ದರೆ ದೇವರ ದರ್ಶನವಾಗುತ್ತದೆ. ಶ್ರದ್ಧೆಯಿಂದ ಎಲ್ಲಾ ವಿದ್ಯೆಗಳನ್ನು ಕಲಿತುಕೊಂಡ ಹಾಗೆ ಜೀವನ ಸಾಗಿಸಬೇಕು.

(8) ನಮ್ಮಲ್ಲಿ ಸತ್ಯ ಮತ್ತು ಪ್ರಾಮಾಣಿಕತೆ ಮನೆಮಾಡಿಕೊಂಡಿದ್ದರೆ ಯಾವತ್ತೂ ಬೇರೆಯವರಿಗೆ ಅವಕಾಶ ಕೊಡಬೇಡಿ. ಅದಿಲ್ಲದಿದ್ದರೆ ಯಥಾಪ್ರಕಾರ ನಮ್ಮ ಮೇಲೆ ದಾಳಿ ಮಾಡಿ ಆಕ್ರಮಿಸಿಕೊಳ್ಳುತ್ತಾರೆ.

(9) ದೇವರು ಜಗತ್ತಿನ ಎಲ್ಲರಿಗೂ ಒಂದೇ ಸಮನೆ ಆಶೀರ್ವಾದ ನೀಡಿದ್ದಾರೆ. ಆದರೆ ನಾವು ಆಶೀರ್ವಾದ ನೀಡುವಷ್ಟು ಇನ್ನೂ ಮನುಷ್ಯ ಪರಿಪಕ್ವ, ಪರಿಶುದ್ಧ, ಪರಿಪೂರ್ಣ ದೇವರ ಗುಣಗಳನ್ನು ಕಲಿತಿಲ್ಲ ಹಾಗೂ ಬೆಳೆದಿಲ್ಲ.

(10) ಸೃಷ್ಟಿಯ ಇನ್ನೊಂದು ಮುಖವೇ ಭಗವಂತ. ಭಗವಂತ ಸರ್ವಶಕ್ತ, ಸರ್ವವ್ಯಾಪಿ, ಸರ್ವಂತಾಮಿ, ನಮ್ಮ ಎಲ್ಲಾ ಸುತ್ತ ಮುತ್ತ ಕಣ್ಣಿಗೆ ಕಾಣುವ ಹಾಗೂ ಕಾಣದೇ ಇರುವ ಶಕ್ತಿಯೇ ಆ ದೈವ ಶಕ್ತಿ.

(11) ಸತ್ಯ ಸದಾ ಕಹಿ, ಅದೇ ಸುಳ್ಳು ಸದಾ ಸಿಹಿ. ಸತ್ಯವನ್ನ ಯಥಾರೀತಿ ನೋಡಲು ಆದಷ್ಟು ಎದೆಗಾರಿಕೆ ಬೇಕು ಹಾಗೂ ಸತ್ಯವನ್ನು ಎದುರಿಸುವ ಧೈರ್ಯ-ಸ್ಥೈರ್ಯ, ಸಾಮರ್ಥ್ಯ, ಭರವಸೆ ಹಾಗೂ ಸಮರ್ಥದಿಂದ ಕೂಡಿರಬೇಕು.

(12) ದೇಹ ಕಣ್ಣಿಗೆ ಕಾಣಿಸುತ್ತದೆ ಆದರೆ ಮನಸ್ಸು ಮತ್ತು ಆತ್ಮ ಕಾಣುವುದಿಲ್ಲ. ಆದ್ದರಿಂದ ಮನಸ್ಸನ್ನು ಉನ್ನತವಾಗಿ ಗ್ರಹಿಸಿ, ನಿಗ್ರಹಿಸಿ ಇಟ್ಟುಕೊಳ್ಳಬೇಕು.

(13) ದೇವರು ಮಾಯೆ, ಮಾಯೆಯಿಂದ ಕಳೆದುಹೋಗುವ ದೈವಕ್ಕೆ ಅನುಬಂಧ ವಿರಲಿ. ದೇವರು ನಮ್ಮ ಬಳಿಗೆ ಬರುವ ರೀತಿ ನಮ್ಮ ನಡವಳಿಕೆಗಳಲ್ಲಿ ಶುದ್ಧ ಇರಬೇಕು.

(14) ನಮ್ಮ ನಮ್ಮ ದೃಷ್ಟಿಕೋನಗಳಿಗೆ ಅನುಗುಣವಾಗಿ ಸರಿಹೊಂದುವ ಜೀವನಶೈಲಿಯನ್ನು ಅನುಭವಿಸಬೇಕು. ಬೇರೆಯವರ ದೃಷ್ಟಿಕೋನಗಳನ್ನು ನಕಲು ಮಾಡಿ ಅನುಕರಿಸುವುದು ಅದು ಸರಿಯಲ್ಲ.

(15) ಸೃಷ್ಟಿಕರ್ತನೇ ದೇವರು ಆ ದೇವರಿಗೆ ಮೊದಲು ಪ್ರಾಧಾನ್ಯತೆ ಕೊಡಿ. ನಂತರ ಹೆತ್ತವರಿಗೆ, ಗುರುಹಿರಿಯರಿಗೆ, ಕಷ್ಟದಲ್ಲಿ ನೆರವಾದವರಿಗೆ ಪ್ರಾಧಾನ್ಯತೆ ಕೊಟ್ಟು ಗೌರವಿಸಿ.

(16) ಕಾಯಾ-ವಾಚಾ-ಮನಸಾ, ಅಂತರಂಗ-ಬಹಿರಂಗ ಶುದ್ಧಿಯಾಗಿ ಒಳ್ಳೆಯರಾಗಿರುವುದೇ ಪ್ರತಿಫಲ.

(17) ಆಹ್ಲಾದಕರವಾದ ವುಗಳ ಮೇಲೆ ಹಕ್ಕನ್ನು ಬೆಳೆಸಿಕೊಳ್ಳುವುದು ಶಕ್ತಿಯ ಸಂಕೇತ. ಶಕ್ತಿಯ ಜೊತೆಗೆ ಯುಕ್ತಿಯು ಸಹ ಇರಬೇಕು.

(18) ಪದವಿ, ಅಧಿಕಾರ, ಹಣ, ಅಂತಸ್ತು, ಕಿರೀಟ, ಗೌರವ, ಅಪೇಕ್ಷೆ, ಪ್ರತಿಫಲ ಎಲ್ಲಾ ವ್ಯಾಮೋಹವನ್ನು ತೊರೆದುಬಿಡಬೇಕು.

ಎಲ್ಲರೂ ದೇವರಾಗಿ ಎಲ್ಲರೂ ದೇವರು ತೋರಿಸಿರುವ ದಾರಿ ಮಾರ್ಗದಲ್ಲಿ ನಡೆಯಲು ಇಂದೇ ಪ್ರತಿಜ್ಞೆ ಮತ್ತು ಸಂಕಲ್ಪ ಮಾಡಿ ಕಣ್ಣಿಗೆ ಕಾಣದ ಆ ಕಲ್ಪನೆಯ ದೇವರಿಗೆ ಹತ್ತಿರವಾಗೋಣ ಅಂದರೆ ಸೃಷ್ಟಿಗೆ ಗೌರವ ನೀಡೋಣ.

ಈ ಮೇಲ್ಕಂಡ ಗೀತಾಸಾರದ ದಾರಿದೀಪೋಕ್ತಿ ಅಂಶಗಳು ಭಗವದ್ಗೀತೆಯ 18 ಅಧ್ಯಾಯಗಳಲ್ಲಿ ಸಂಕ್ಷಿಪ್ತವಾಗಿ ಕಾಣಬಹುದು.

ಸಮ ಸಮಾಜದಲ್ಲಿರುವ ಸಮಾನ ಮನಸ್ಕರುಳ್ಳ ಸರ್ವರಿಗೂ 2026 ಈ ವರ್ಷದ ಮಹಾಶಿವರಾತ್ರಿ ಹಬ್ಬದ ಹಾರ್ದಿಕ ಶುಭಾಶಯಗಳು.


ಜಾಗರಣೆಗಿಂತ ಮನಸ್ಸು ಮತ್ತು ಹೃದಯ ಶುದ್ಧಿಯಾಗಿಟ್ಟುಕೊಂಡು ಒಳ್ಳೆಯ ಮನುಷ್ಯರಾಗಿ ಎಲ್ಲಾ ರಂಗದಲ್ಲೂ ಜಾಗೃತರಾಗೋಣ ಹಾಗೂ ಶಿವ ತೋರಿಸಿರುವ ದಾರಿಯಲ್ಲಿ ನಡೆಯೋಣ.

# ಮಹಾ ಶಿವರಾತ್ರಿಯ ಸಂದೇಶ

• **ಡಾ ಆರೂಢಭಾರತೀ ಸ್ವಾಮೀಜಿ, ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ, ರಾಮೋಹಳ್ಳಿ**


ಶಿವನ ನೆನೆದು ಪೂಜಿಸಿ ಶಿವಗುಣ ತತ್ತ್ವಗಳ ಅಳವಡಿಸಿಕೊಂಡು ಶಿವಮಯವಾಗುವ ಸುದಿನ ಶಿವರಾತ್ರಿ. ಕನಿಷ್ಠ ಮಾಸಕ್ಕೊಂದು ಮಾಸಶಿವರಾತ್ರಿ, ವರ್ಷಕ್ಕೊಂದು ಮಹಾಶಿವರಾತ್ರಿ. ಪ್ರತಿ ದಿನ ಪ್ರತಿ ರಾತ್ರಿ ಶಿವರಾತ್ರಿಯಾಗಬೇಕು. ಶಿವ ಶಂಕರ ಶಂಭು ಹರ ಈಶ ಉಮೇಶ ಪರಮೇಶ ಪರಮಾತ್ಮ ನೂರಾರು ಶಿವನಾಮ. ಶಿವ ದೇವರು ನಿರಾಕಾರ ಸಾಕಾರವೂ ಹೌದು. ನೀರು ದ್ರವ ಮಂಜು ಘನ ಎರಡೂ ಆದಂತೆ. ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್. ತೇನ ತ್ಯಕ್ತೇನ ಭುಂಜೀಥಾಃ ಮಾ ಗೃಧಃ ಕಸ್ಯಸ್ವಿದ್ಧನಂ ಇದು ಈಶಾವಾಸ್ಯೋಪನಿಷತ್ತಿನ ಮೊದಲ ಮಂತ್ರ. ಈ ಶಿವ ನಿರಾಕಾರ. **ಇದರರ್ಥ :** ಜಗದ ಪ್ರತಿಯೊಂದೂ ಪರಮಾತ್ಮನಿಂದ ತುಂಬಿದೆ. ಎಲ್ಲಾ ಶಿವಮಯ. ಆದ್ದರಿಂದ ತ್ಯಾಗ ನಿಸ್ವಾರ್ಥದಿಂದ ಬಾಳಬೇಕು. ಮತ್ತೊಬ್ಬರದ್ದಕ್ಕೆ ಆಶೆ ಪಡಬಾರದು. ಈ ಅರ್ಥವನ್ನು ಮತ್ತೆ ಮತ್ತೆ ಮನಗಾಣಬೇಕು. ಇದನ್ನರಿತು ಬಾಳಿದರೆ ಕದನ ಯುದ್ಧ ಲಂಚ ಮೋಸ ಯಾವುದೂ ಇಲ್ಲ. ಉತ್ತಮ ಉದಾಹರಣೆ ತಾಯಿ. ಮಕ್ಕಳು ತನಗಿಂತ ಬೇರೆ ಎಂದು ಭಾವಿಸದ ತಾಯಿ ಮಕ್ಕಳಿಗಾಗಿ ಊಟ ನಿದ್ರೆ, ಆರೋಗ್ಯ ಎಲ್ಲಾ ಮರೆಯುವಳು.

ಮಕ್ಕಳದ್ದನ್ನು ಕಿತ್ತುಕೊಳ್ಳುವ ಸ್ವಾರ್ಥ ತೋರಳು ಜಗವೆಲ್ಲ ಶಿವಮಯ ತಾನೂ ಶಿವ ಪರರು ಶಿವ ಎಂದವಗೆ ಸ್ವಾರ್ಥತೆಯ ಮುಖವಿಲ್ಲ. ಅನ್ನವನು ಇಕ್ಕುವುದು ನನ್ನಿಯನು ನುಡಿಯುವುದು ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು ಸರ್ವಜ್ಞ ಎಂಬಂತೆ ಆತ ಅನ್ನದಾನಾದಿ ಪರೋಪಕಾರ ಮಾಡುವನು. ಸುಳ್ಳು ಹೇಳದೇ ಸತ್ಯ ನುಡಿವನು. ಎಲ್ಲರನ್ನೂ ತನ್ನಂತೆ ಕಾಣುವ ಆತನೇ ಶಿವ ಆತನ ನೆಲೆಯೇ ಕೈಲಾಸ ಇನ್ನು ಪಾರ್ವತಿ ಪತಿ ಷಣ್ಮುಖ - ಗಣೇಶರ ಪಿತಾಲಯಕರ್ತಾ ಮೋಕ್ಷ - ಶಾಂತಿದಾತಾ ಶಿವ ಸಾಕಾರ ಶಿವ. ಕುಬೇರ ಮಿತ್ರ ಜಗದೊಡೆಯನಾದರೂ ಏನಿಲ್ಲದಂತೆ ಸ್ಮಶಾನವಾಸಿ, ಭಸ್ಮಧಾರಿ ಚರ್ಮದುಡಿಗೆ ಸರಳ ಸುಖಮಯ ಜೀವನ ಅನ್ನಪೂರ್ಣೆ ಮಡದಿಯಾದರೂ ಕಪಾಲ ಪಾತ್ರೆ ಹಿಡಿದು ಭಿಕ್ಷೆ ಬೇಡಿ ತಿರಿದುಣ್ಣುವವ.



ಬದುಕಿನಲ್ಲಿ ಎಂಥವನಿಗೂ ಕಷ್ಟ ತಪ್ಪಿದ್ದಲ್ಲ, ಏನಿದ್ದರೂ ಕಳಚುವುದು, ಸ್ಮಶಾನವೇ ಅಂತಿಮ ಗತಿ, ಇದ್ದೂ ಇಲ್ಲದಂತಿರುವುದೇ ನಿಜ ಜೀವನ ಎಂಬ ಶಾಶ್ವತ ಸಂದೇಶ ಶಿವನ ಬದುಕು. ಸಿರಿತನದ ಅಜ್ಞಾನದ ಅಮಲಿನಲ್ಲಿರುವವರಿಗೆ ಇದು ಅರಿವಾಗದಿರಬಹುದು. ಆದರೆ ಅಸಂಖ್ಯಾತ ಜನಸಾಮಾನ್ಯರ ಬದುಕಿನ ಬಲ ನೆಮ್ಮದಿ ಈ ಶಿವನ ಸಂದೇಶ - ಬದುಕು. ಗಂಗೆ ಚಂದ್ರರನ್ನು ತಲೆಯ ಮೇಲೆ ಹೊತ್ತು ಸುಖ ಒಳಿತನ್ನು ಜಗಕ್ಕೆ ಸಾರುವನು ವಿಷ ನುಂಗಿ ಕಷ್ಟ ಕೆಟ್ಟದ್ದನ್ನು ಸಹಿಸಿ ಬಚ್ಚಿಡಲು ಹೇಳುವನು. ಇಂಥ ಆದರ್ಶ ಪಾಲನೆಗೆ ನಾವೆಲ್ಲ ಶಿವನನ್ನು ಪೂಜಿಸೋಣ ಭಾವಿಸೋಣ ಆನಂದಿಸೋಣ.

## ದಿನಕ್ಕೊಂದು ಮುಕ್ತಕ -92



ಸಾಮಾಜಿಕ ಕಳಕಳಿ

ಹೆಚ್.ಎಸ್. ಪ್ರತಿಮಾ
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ ಶಿಕ್ಷಕಿ, ಹಾಸನ

**ಹೋಗಬಾರದು ಹಸಿರು ಭೂಲೋಕವನು ಬಿಟ್ಟು**
**ಸಾಗುವಳಿ ಮಾಡುವರು ಬಡ ರೈತರು**
**ನೀಗಿಸುತ ದಾಹವನ್ನು ಜೀವಿಗಳ ಮನತಣಿಸಿ**
**ಬಾಗುವರು ತಾಯೆಂದು ಲಕ್ಷ್ಮಿ ದೇವಿ.....**

**ಭಾವಾರ್ಥ:** ಹಸಿರು ನೀ ಭೂಲೋಕವನ ಬಿಟ್ಟು ಹೋಗಬೇಡ ಎಂದು ಪ್ರಾರ್ಥಿಸುತ್ತಿದ್ದಾರೆ. ರೈತರು ನಿನ್ನೆಡೆ ಬಂದು ಸಾಗುವಳಿ ಮಾಡಲು ಕಾಯುತ್ತಿದ್ದಾರೆ ಅವರೆಲ್ಲ ಬಡವರಾಗಿದ್ದಾರೆ. ರೈತರಿಗೆ ಮಳೆರಾಯನೊಂದಿಗೆ ಬೆಳೆಯು ಬಂದು ದಾಹವನ್ನು ನೀಗಿಸಬೇಕಿದೆ. ಭೂಮಿತಾಯಿಯನ್ನು ತಾಯಿ ಎಂದು ರೈತರು ಕೈಮುಗಿದು ಬೇಡಿಕೊಳ್ಳುತ್ತಿದ್ದಾರೆ. ದಯಮಾಡಿ ನಿನ್ನಡೆ ಬಾಗುತ್ತಿರುವ ರೈತರಿಗೆ ಆಶೀರ್ವಾದ ಮಾಡುತ್ತಾ ಹೋಗಬೇಡ ಹಸಿರು ನೀ ಭೂಲೋಕವನ್ನು ಬಿಟ್ಟು ಎಂದು ಹೇಳುತ್ತಿದ್ದಾರೆ.



ಉದಯವಾಹಿನಿ ಚಿತ್ರ

## ನಮ್ಮ ಭಾರತದಲ್ಲಿರುವ ಪ್ರಮುಖ ಶಿವಾಲಯಗಳು

| ರಾಜ್ಯ | ಸ್ಥಳ | ಶಿವಾಲಯಗಳು |
|---|---|---|
| ಕರ್ನಾಟಕ | ನಂಜನಗೂಡು | ಶ್ರೀಕಂಠೇಶ್ವರ |
| ಕರ್ನಾಟಕ | ಗೋಕರ್ಣ | ಶ್ರೀ ಮಹಾಬಲೇಶ್ವರ |
| ಕರ್ನಾಟಕ | ಧರ್ಮಸ್ಥಳ | ಶ್ರೀ ಮಂಜುನಾಥ |
| ಕರ್ನಾಟಕ | ಹಂಪಿ | ಶ್ರೀ ವಿರೂಪಾಕ್ಷ |
| ತಮಿಳುನಾಡು | ಮಾಯಾವರಂ | ಶ್ರೀ ಅಂಬಿಕೇಶ್ವರ |
| ಆಂಧ್ರಪ್ರದೇಶ | ಶ್ರೀಶೈಲ | ಶ್ರೀ ಮಲ್ಲಿಕಾರ್ಜುನ |
| ಆಂಧ್ರಪ್ರದೇಶ | ದ್ರಾಕ್ಷಾರಾಮ | ಶ್ರೀ ಬೀಮೇಶ್ವರ |
| ಆಂಧ್ರಪ್ರದೇಶ | ಕಾಳಹಸ್ತಿ | ಶ್ರೀ ಕಾಳಹಸ್ತಿಶ್ವರ |
| ತಮಿಳುನಾಡು | ಕಂಚಿ | ಶ್ರೀ ಏಕಾಂಬರೇಶ್ವರ |
| ತಮಿಳುನಾಡು | ತಂಜಾವೂರು | ಶ್ರೀ ಬೃಹದೀಶ್ವರ |
| ತಮಿಳುನಾಡು | ಕುಂಭಕೋಣಂ | ಶ್ರೀ ಕುಂಭೇಶ್ವರ |
| ತಮಿಳುನಾಡು | ರಾಮೇಶ್ವರ | ಶ್ರೀರಾಮೇಶ್ವರ |
| ತಮಿಳುನಾಡು | ಚಿದಂಬರಂ | ಶ್ರೀ ನಟರಾಜ |
| ತಮಿಳುನಾಡು | ತಿರುವಣ್ಣಾಮಲೈ | ಶ್ರೀ ಅರುಣಾಚಲೇಶ್ವರ |
| ತಮಿಳುನಾಡು | ಮಧುರೈ | ಶ್ರೀ ಸುಂದರೇಶ್ವರ |
| ಮಹಾರಾಷ್ಟ್ರ | ನಾಸಿಕ್ | ಶ್ರೀ ತ್ರ್ಯಂಬಕೇಶ್ವರ |
| ಮಧ್ಯಪ್ರದೇಶ | ಉಜ್ಜಯಿನಿ | ಶ್ರೀ ಮಹಾಕಾಳೇಶ್ವರ |
| ಗುಜರಾತ್ | ಸೋಮನಾಥ್ | ಶ್ರೀ ಸೋಮನಾಥ |
| ಉತ್ತರಪ್ರದೇಶ | ಕಾಶಿ | ಶ್ರೀ ವಿಶ್ವೇಶ್ವರ |
| ಉತ್ತರಪ್ರದೇಶ | ಪ್ರಯಾಗ | ಶ್ರೀ ನೀಲಕಂಠೇಶ್ವರ |
| ಉತ್ತರ ಪ್ರದೇಶ | ಕೇದಾರ | ಶ್ರೀ ಕೇದಾರೇಶ್ವರ |
| ಜಮ್ಮು ಕಾಶ್ಮೀರ | ಕಾಶ್ಮೀರ | ಶ್ರೀ ಅಮರನಾಥ |



ವಿ.ಎಂ.ಎಸ್.ಗೋಪಿ
• ಉದಯವಾಹಿನಿ, ವಿಶೇಷ

# ಫೆಬ್ರವರಿ 14 ಪ್ರೀತಿಯ ದಿನವೇ ಅಥವಾ ಕರಾಳ ಸ್ಮರಣೆಯ ದಿನವೇ

ಫೆಬ್ರವರಿ 14 ಅನ್ನು ವಿಶ್ವದಾದ್ಯಂತ ''ವ್ಯಾಲೆಂಟೈನ್ಸ್ ಡೇ'' ಎಂದು ಪ್ರೀತಿಯ ದಿನವಾಗಿ ಆಚರಿಸಲಾಗುತ್ತದೆ. ಆದರೆ ನಮ್ಮ ದೇಶದ ಇತಿಹಾಸದಲ್ಲಿ ಇದೇ ದಿನವು ಒಂದು ಕರಾಳ ನೆನಪಿನ ದಿನವಾಗಿಯೂ ಉಳಿದಿದೆ. 2019ರ ಫೆಬ್ರವರಿ 14ರಂದು ಜಮ್ಮು-ಕಾಶ್ಮೀರದ ಪಲ್ವಾಮಾದಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ ನಮ್ಮ 40ಕ್ಕೂ ಹೆಚ್ಚು ಸಿಆರ್‌ಪಿಎಫ್ ಯೋಧರು ಹುತಾತ್ಮರಾದರು. ಆ ದಾಳಿ ಕೇವಲ ಒಂದು ಘಟನೆ ಅಲ್ಲ ಅದು ದೇಶದ ಹೃದಯಕ್ಕೆ ಬಿದ್ದ ಭಾರೀ ಹೊಡೆತವಾಗಿತ್ತು. ಆದ್ದರಿಂದ ಅನೇಕ ಭಾರತೀಯರ ಮನಸ್ಸಿನಲ್ಲಿ ಫೆಬ್ರವರಿ 14 ''ಬ್ಲ್ಯಾಕ್ ಡೇ'' ಎಂಬ ನೆನಪನ್ನು ಮೂಡಿಸುತ್ತದೆ. ಪ್ರೀತಿ ಎಂದರೆ ಕೇವಲ ಪ್ರೇಮಿಗಳ ನಡುವಿನ ಭಾವನೆ ಮಾತ್ರವಲ್ಲ. ಪ್ರೀತಿ ಎಂದರೆ ತಾಯಿಯ ಮಮತೆ, ತಂದೆಯ ತ್ಯಾಗ, ಸ್ನೇಹಿತರ ನಿಷ್ಠೆ, ಮತ್ತು ದೇಶಕ್ಕಾಗಿ ಪ್ರಾಣ ತ್ಯಾಗ ಮಾಡುವ ಸೈನಿಕರ ಅಪಾರ ಭಕ್ತಿ. ಪಲ್ವಾಮಾ ದಾಳಿಯಲ್ಲಿ ಹುತಾತ್ಮರಾದ ಯೋಧರು ತಮ್ಮ ಕುಟುಂಬವನ್ನು ಬಿಟ್ಟು ದೇಶ ಸೇವೆಗೆ ಹೊರಟಿದ್ದರು. ಅವರು ತಮ್ಮ ಜೀವವನ್ನೇ ಪಣಕ್ಕಿಟ್ಟು ನಮ್ಮ ಸುರಕ್ಷತೆಗೆ ನಿಂತವರು. ಅವರ ತ್ಯಾಗದ ಬೆಲೆ ಅಳೆಯಲಾಗದು.



ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ

ಈ ಘಟನೆಯ ನಂತರ ದೇಶದಾದ್ಯಂತ ಶೋಕದ ವಾತಾವರಣ ನಿರ್ಮಾಣವಾಯಿತು. ಸಾವಿರಾರು ಜನರು ಕಣ್ಣೀರಿನಿಂದ ಯೋಧರಿಗೆ ಅಂತಿಮ ನಮನ ಸಲ್ಲಿಸಿದರು. ಆ ದಿನದಿಂದ ಫೆಬ್ರವರಿ 14 ಅನೇಕ ಜನರಿಗೆ ಕೇವಲ ಪ್ರೀತಿಯ ದಿನವಾಗಿರದೆ, ದೇಶಭಕ್ತಿಯ ದಿನವಾಗಿ ಪರಿಣಮಿಸಿದೆ. ಸಾಮಾಜಿಕ ಜಾಲತಾಣಗಳಲ್ಲಿ #BlackDay ಎಂಬ ಹ್ಯಾಶ್‌ಟ್ಯಾಗ್ ಟ್ರೆಂಡ್ ಆಗಿ, ಹುತಾತ್ಮರಿಗೆ ಗೌರವ ಸಲ್ಲಿಸಲಾಯಿತು.

ಆದರೆ ಇಲ್ಲಿ ಒಂದು ಮಹತ್ವದ ಪ್ರಶ್ನೆ ಎದುರಾಗುತ್ತದೆ ? ನಾವು ಪ್ರೀತಿಯನ್ನು ಆಚರಿಸಬೇಕಾ? ಅಥವಾ ಈ ದಿನವನ್ನು ಕೇವಲ ದುಃಖದ ದಿನವಾಗಿ ನೆನಪಿಸಿಕೊಳ್ಳಬೇಕಾ? ನಿಜವಾಗಿ ನೋಡಿದರೆ, ಈ ಎರಡೂ ಭಾವನೆಗಳು ಪರಸ್ಪರ ವಿರೋಧಿಯಾಗಿಲ್ಲ. ಪ್ರೀತಿ ಮತ್ತು ದೇಶಭಕ್ತಿ ಎರಡೂ ಮಾನವೀಯ ಮೌಲ್ಯಗಳೇ. ಯೋಧರು ತೋರಿದ ತ್ಯಾಗವೂ ಪ್ರೀತಿಯ ಒಂದು ರೂಪವೇ ಸರಿ ಅದು ದೇಶದ ಮೇಲಿನ ಪ್ರೀತಿ ಆದ್ದರಿಂದ ಫೆಬ್ರವರಿ 14ರಂದು ನಾವು ಪ್ರೀತಿಯನ್ನು ಆಚರಿಸುವಾಗ, ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದವರನ್ನು ಮರೆಯಬಾರದು.

ಇಂದಿನ ಯುವಜನತೆ ವ್ಯಾಲೆಂಟೈನ್ಸ್ ಡೇ ಅನ್ನು ಉಡುಗೊರೆ, ಹೂವು,



ಉದಯವಾಹಿನಿ ಚಿತ್ರ

ಶುಭಾಶಯಗಳ ಮೂಲಕ ಆಚರಿಸುತ್ತಾರೆ. ಇದು ತಪ್ಪಲ್ಲ. ಆದರೆ ಅದೇ ಸಮಯದಲ್ಲಿ ಕೆಲವು ಕ್ಷಣಗಳನ್ನು ಮೀಸಲಿಟ್ಟು ಹುತಾತ್ಮರಿಗಾಗಿ ಮೌನ ಪ್ರಾರ್ಥನೆ ಸಲ್ಲಿಸುವುದು ನಮ್ಮ ಕರ್ತವ್ಯ. ಶಾಲೆಗಳು, ಕಾಲೇಜುಗಳು, ಸಂಸ್ಥೆಗಳು ಈ ದಿನ ದೇಶಭಕ್ತಿಯ ಕಾರ್ಯಕ್ರಮಗಳನ್ನು ಆಯೋಜಿಸಿ, ವಿದ್ಯಾರ್ಥಿಗಳಿಗೆ ಯೋಧರ ತ್ಯಾಗದ ಮಹತ್ವವನ್ನು ತಿಳಿಸಬೇಕು. ಪಲ್ವಾಮಾ ದಾಳಿಯಂತಹ ಘಟನೆಗಳು ನಮ್ಮನ್ನು ಎಚ್ಚರಿಸುತ್ತವೆ ದೇಶದ ಭದ್ರತೆ ಎಷ್ಟು ಅಮೂಲ್ಯವೆಂಬುದನ್ನು. ನಾವು ಶಾಂತಿಯಿಂದ ಜೀವನ ನಡೆಸಲು ಸಾಧ್ಯವಾಗುವುದು ನಮ್ಮ ಸೈನಿಕರ ತ್ಯಾಗದ ಫಲ. ಅವರ ಕುಟುಂಬಗಳು ಅನುಭವಿಸಿದ ನೋವು ಅಳತೆಯಾಚೆ. ಒಂದು ಕುಟುಂಬಕ್ಕೆ ತಂದೆ, ಮಗ, ಸಹೋದರ ಕಳೆದುಹೋಗುವುದು ಎಷ್ಟು ದೊಡ್ಡ ನೋವೋ, ಅದನ್ನು ಮಾತಿನಲ್ಲಿ ಹೇಳಲಾಗದು.

ಹೀಗಾಗಿ ಫೆಬ್ರವರಿ 14ನ್ನು ನಾವು ಎರಡು ರೀತಿಯಲ್ಲಿ ನೋಡಬಹುದು. ಒಂದೆಡೆ ಪ್ರೀತಿಯ ದಿನವಾಗಿ, ಮತ್ತೊಂದೆಡೆ ದೇಶದ ಕರಾಳ ನೆನಪಿನ ದಿನವಾಗಿ. ಪ್ರೀತಿ ಎಂದರೆ ಕೇವಲ ವೈಯಕ್ತಿಕ ಸಂಬಂಧವಲ್ಲ ಅದು ರಾಷ್ಟ್ರದ ಮೇಲಿನ ಹೊಣೆಗಾರಿಕೆ ಕೂಡ ಹೌದು. ದೇಶದ ಭದ್ರತೆಗಾಗಿ ನಿಂತಿರುವ ಯೋಧರ ಬಗ್ಗೆ ಗೌರವ ಮತ್ತು ಕೃತಜ್ಞತೆ ತೋರಿಸುವುದೂ ಪ್ರೀತಿಯ ಒಂದು ಮಹತ್ತರ ರೂಪ. ಕೊನೆಯಲ್ಲಿ ಹೇಳುವುದಾದರೆ, ಫೆಬ್ರವರಿ 14 ನಮ್ಮ ಮನಸ್ಸಿನಲ್ಲಿ ಎರಡು ಭಾವನೆಗಳನ್ನು ಜಾಗೃತಗೊಳಿಸುತ್ತದೆ ಪ್ರೀತಿ, ದೇಶಭಕ್ತಿ. ಈ ಎರಡನ್ನೂ ಸಮತೋಲನದಿಂದ ಸ್ವೀಕರಿಸುವುದು ನಮ್ಮ ಸಂಸ್ಕೃತಿ. ನಾವು ಹೂವುಗಳನ್ನು ಕೊಡುವಾಗ, ನಮ್ಮ ಹೃದಯದಲ್ಲಿ ಯೋಧರಿಗಾಗಿ ಒಂದು ನಮನ ಇರಲಿ. ನಾವು ಶುಭಾಶಯಗಳನ್ನು ಕಳುಹಿಸುವಾಗ, ದೇಶಕ್ಕಾಗಿ ತ್ಯಾಗ ಮಾಡಿದವರನ್ನು ನೆನಪಿಸಿಕೊಳ್ಳೋಣ. ಅವರ ತ್ಯಾಗವೇ ನಮ್ಮ ಭದ್ರತೆಯ ಆಧಾರ. ಅವರ ನೆನಪು ಎಂದಿಗೂ ಅಮರ. ಜೈ ಹಿಂದ್!

# ಮಹಾಶಿವರಾತ್ರಿಯ ನಿಮಿತ್ತ ಅಧ್ಯಾತ್ಮ ವಿಷಯದ ಗ್ರಂಥಗಳ ಪ್ರದರ್ಶನ

• ಉದಯವಾಹಿನಿ, ಬೆಂಗಳೂರು

ಮಹಾಶಿವರಾತ್ರಿಯ ದಿನದಂದು ಶಿವತತ್ತ್ವವು ಎಂದಿನ ತುಲನೆಯಲ್ಲಿ 1 ಸಾವಿರ ಪಟ್ಟುಗಳಷ್ಟು ಅಧಿಕ ಕಾರ್ಯನಿರತವಾಗಿರುತ್ತದೆ. ಅಂದು ಶಿವನ ಉಪಾಸನೆಯನ್ನು ಎಷ್ಟು ಅಧಿಕ ಮಾಡುತ್ತೇವೆಯೋ, ಅಷ್ಟು ಅಧಿಕ ಉಪಾಸಕನಿಗೆ ಅಧ್ಯಾತ್ಮಿಕ ಸ್ತರದಲ್ಲಿ ಲಾಭವಾಗುತ್ತದೆ. ಈ ಕಾರಣದಿಂದ ಭಕ್ತರಿಗೆ ಶಿವನ ಉಪಾಸನೆಯೊಂದಿಗೆ ವಿವಿಧ ವಿಷಯಗಳ ಕುರಿತು ಶಾಸ್ತ್ರೀಯ ಮಾಹಿತಿ ದೊರೆಯಬೇಕು ಎಂದು ಮಹಾಶಿವರಾತ್ರಿಯ ನಿಮಿತ್ತ ಫೆಬ್ರವರಿ 15ರಂದು ಸನಾತನ ಸಂಸ್ಥೆಯ ವತಿಯಿಂದ ದೇಶದ ಅನೇಕ ರಾಜ್ಯಗಳಲ್ಲಿ ವಿಶೇಷ ಗ್ರಂಥ ಪ್ರದರ್ಶನಗಳ ಮಳಿಗೆಗಳನ್ನು ತೆರೆಯಲಾಗಿದೆ. ಬೆಂಗಳೂರಿನಲ್ಲಿಯೂ ಒಟ್ಟು 20ಕ್ಕೂ ಹೆಚ್ಚು ದೇವಸ್ಥಾನಗಳಲ್ಲಿ ಈ ಗ್ರಂಥ ಪ್ರದರ್ಶನಗಳನ್ನು ಆಯೋಜಿಸಲಾಗಿದೆ.




ಉದಯವಾಹಿನಿ ಚಿತ್ರ

ತಮ್ಮ ಪ್ರದೇಶದಲ್ಲಿ ತೆರೆಯಲಾಗಿರುವ ಸನಾತನ ಸಂಸ್ಥೆಯ ಗ್ರಂಥ ಪ್ರದರ್ಶನ ಮಳಿಗೆಗೆ ಭೇಟಿ ನೀಡಿ ಭಗವಾನ ಶಿವನ, ಇನ್ನಿತರೆ ವಿವಿಧ ವಿಷಯಗಳ ಶಾಸ್ತ್ರೀಯ ಮಾಹಿತಿಯನ್ನು ತಿಳಿದುಕೊಳ್ಳಿರಿ, ಅಧ್ಯಾತ್ಮಿಕ ಸ್ತರದಲ್ಲಿ ಮಹಾಶಿವರಾತ್ರಿಯ ಲಾಭವನ್ನು ಪಡೆದುಕೊಳ್ಳುವಂತೆ ಸನಾತನ ಸಂಸ್ಥೆಯು ತನ್ನ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಹಿಂದೂಗಳ ಹಬ್ಬಗಳನ್ನು ಗುರಿ ಮಾಡಿ ಶಿವರಾತ್ರಿಯಂದು ಶಿವಲಿಂಗಕ್ಕೆ ಹಾಲಿನ ಅಭಿಷೇಕ ಮಾಡದೇ, ಅದನ್ನು ಬಡವರಿಗೆ ವಿತರಿಸಿರಿ, ಎಂಬ ಆಶಯದ ಆಂದೋಲನವನ್ನು ಕೆಲವು ತಥಾಕಥಿತ ಪ್ರಗತಿಪರರು ನಡೆಸುತ್ತಿದ್ದಾರೆ. ಈ ಅಪಪ್ರಚಾರಕ್ಕೆ ಬಲಿಯಾಗದೇ, ಭಕ್ತಿಭಾವದಿಂದ ಮಹಾಶಿವರಾತ್ರಿಯ ಉತ್ಸವವನ್ನು ಆಚರಿಸಿರಿ ಎಂದು ಉತ್ಸವದ ನಿಮಿತ್ತ ಸನಾತನ ಸಂಸ್ಥೆಯ ವತಿಯಿಂದ ಕರೆ ನೀಡಲಾಗಿದೆ. ಭಗವಾನ ಶಿವನ ಕಾರ್ಯ, ಶಿವನ ಉಪಾಸನೆಯ ಹಿಂದಿನ ಶಾಸ್ತ್ರ, ಶಿವಲಿಂಗಕ್ಕೆ ಅರ್ಧ ಪ್ರದಕ್ಷಿಣೆಯನ್ನು ಏಕೆ ಹಾಕುತ್ತಾರೆ?, ಶಿವನಿಗೆ ಬಿಲ್ವಪತ್ರೆಯನ್ನು ಅರ್ಪಿಸುವುದರ ಮಹತ್ವ, ರುದ್ರಾಕ್ಷಿಯ ಮಹತ್ವ, ಜ್ಯೋತಿರ್ಲಿಂಗದ ಸ್ಥಾನಗಳು ಮತ್ತು ಅವುಗಳ ಆಧ್ಯಾತ್ಮಿಕ ಮಹತ್ವ ಇತ್ಯಾದಿ ಅಮೂಲ್ಯ ಜ್ಞಾನವು ಸನಾತನದ ಈ ಮಳಿಗೆಗಳಲ್ಲಿ ಗ್ರಂಥರೂಪದಲ್ಲಿ ದೊರೆಯಲಿದೆ. ಶಿವತತ್ತ್ವವನ್ನು ಆಕರ್ಷಿಸುವ ರಂಗೋಲಿಯ ಆಕೃತಿಯಿರುವ ಸಾತ್ತ್ವಿಕ ರಂಗೋಲಿಗಳು ಈ ಚಿಕ್ಕ ಗ್ರಂಥವೂ ಮಳಿಗೆಯಲ್ಲಿ ದೊರೆಯುವುದು. ಈ ಮಳಿಗೆಯಲ್ಲಿ ಅಧ್ಯಾತ್ಮ ವಿಷಯದ ಗ್ರಂಥದೊಂದಿಗೆ ರಾಷ್ಟ್ರ, ಧರ್ಮ, ಆಯುರ್ವೇದ, ಬಾಲಸಂಸ್ಕಾರ ಇತ್ಯಾದಿ ವಿವಿಧ ವಿಷಯಗಳ ಮೇಲಿನ ಗ್ರಂಥ ಸಂಪತ್ತು ಕೂಡ ಲಭ್ಯವಿದೆ. ಈ ಗ್ರಂಥ ಮಳಿಗೆಯ ಕುರಿತು ಹೆಚ್ಚಿನ ಮಾಹಿತಿಗಾಗಿ ಈ 7892690621 ದೂರವಾಣಿ ಸಂಖ್ಯೆಯನ್ನು ಅವಶ್ಯವಾಗಿ ಸಂಪರ್ಕಿಸಿ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಸಾಯಂಕಾಲ | 04:30 ರಿಂದ 06:00 |
| ಗುಳಿಕ ಕಾಲ | ಮಧ್ಯಾಹ್ನ | 03:00 ರಿಂದ 04:30 |
| ಯಮಗಂಡ ಕಾಲ | ಮಧ್ಯಾಹ್ನ | 12:00 ರಿಂದ 01:30 |

**ಮೇಷ** ನಿಮ್ಮ ಕಚೇರಿಯನ್ನು ಬೇಗನೆ ಬಿಡಲು ಮತ್ತು ನೀವು ನಿಜವಾಗಿಯೂ ಆನಂದಿಸುವದನ್ನು ಮಾಡಲು ಪ್ರಯತ್ನಿಸಿ. ಆಶೀರ್ವಾದ ಹಾಗೂ ಅದೃಷ್ಟ ನಿಮ್ಮ ಬಳಿ ಬರುತ್ತಿದ್ದ ಹಾಗೆ ನಿಮ್ಮ ಬಯಕೆಗಳು ಪೂರೈಸಲ್ಪಡುತ್ತವೆ.

**ವೃಷಭ** ನಿಮ್ಮ ಆಹಾರವನ್ನು ನಿಯಂತ್ರಣದಲ್ಲಿರಿಸಿಕೊಳ್ಳಿ ಮತ್ತು ಫಿಟ್ ಆಗಿ ಉಳಿಯಲು ವ್ಯಾಯಾಮ ಮಾಡಿ. ಯಾವುದೇ ಆಪ್ತ ಸಂಬಂಧಿಕರ ಬೆಂಬಲದಿಂದ ನಿಮ್ಮ ವ್ಯಾಪಾರದಲ್ಲಿ ಉತ್ತಮವಾಗಿ ಮಾಡಬಹುದು.

**ಮಿಥುನ** ನಿಮ್ಮ ಅಸೂಯೆ ವರ್ತನೆ ನಿಮ್ಮನ್ನು ದುಃಖಿಗಳಾಗಿಯೂ ಮತ್ತು ಖಿನ್ನರಾಗಿಯೂ ಮಾಡಬಹುದು. ಆದರೆ ಇದು ಒಂದು ಸ್ವಯಂಕೃತ ಗಾಯವಾಗಿರುವುದರಿಂದ ಇದರ ಬಗ್ಗೆ ಪ್ರಲಾಪಿಸುವ ಅಗತ್ಯವಿಲ್ಲ.

**ಕರ್ಕಾಟಕ** ಕೋಪದ ಬಡಿದೆಬ್ಬಿಸುವಿಕೆ ವಾದ ಮತ್ತು ಘರ್ಷಣೆಗೆ ಕಾರಣವಾಗಬಹುದು. ನಿಮ್ಮ ಖರ್ಚುಗಳನ್ನು ನಿಯಂತ್ರಿಸಲು ಮತ್ತು ಕೇವಲ ಅಗತ್ಯವಾದ ವಸ್ತುಗಳ ಮಾತ್ರ ಇಂದು ಖರೀದಿಸಲು ಪ್ರಯತ್ನಿಸಿ.

**ಸಿಂಹ** ನಿಮ್ಮ ಸಂಗಾತಿಯ ಜೊತೆ ಹೊರಹೋಗುವಾಗ ಸಭ್ಯತೆಯಿಂದ ವರ್ತಿಸಿ. ಕಳೆದ ಕೆಲವು ದಿನಗಳಿಂದ ತುಂಬಾ ಕಾರ್ಯನಿರತವಾಗಿದ್ದವರು ಇಂದು ತಮಗಾಗಿ ಉಚಿತ ಸಮಯವನ್ನು ಪಡೆಯಬಹುದು.

**ಕನ್ಯಾ** ಮಕ್ಕಳೊಂದಿಗೆ ಆಟವಾಡುವುದು ನಿಮಗೆ ಯಾವತ್ತೂ ಅದ್ಭುತ ಚಿಕಿತ್ಸೆಯ ಅನುಭವ ನೀಡುತ್ತದೆ. ಮನರಂಜನೆ ಅಥವಾ ಹೊರನೋಟದ ಸುಧಾರಣೆಗಾಗಿ ಹೆಚ್ಚು ಖರ್ಚು ಮಾಡಬೇಡಿ.

**ತುಲಾ** ನೀವು ಆರಾಮವಾಗಿರುವ ಭಾವನೆ ಹೊಂದಿರುತ್ತೀರಿ ಮತ್ತು ಆನಂದಿಸಲು ಸೂಕ್ತ ಮನೋಭಾವದಲ್ಲಿರುತ್ತೀರಿ. ನಿಮ್ಮ ಜೀವನದ ಕಳಪೆ ಆರೋಗ್ಯದಿಂದಾಗಿ, ನಿಮ್ಮ ಹಣವನ್ನು ಖರ್ಚು ಮಾಡಬಹುದು.

**ವೃಶ್ಚಿಕ** ಸೃಜನಶೀಲ ಕೆಲಸ ನಿಮ್ಮನ್ನು ಶಾಂತವಾಗಿರಿಸುತ್ತವೆ. ಇಂದು ನೀವು ನಿಮ್ಮ ಮನೆಯ ಹಿರಿಯ ಜನರಿಂದ ಹಣವನ್ನು ಉಳಿಸುವ ಬಗ್ಗೆ ಯಾವುದೇ ಸಲಹೆಯನ್ನು ತೆಗೆದುಕೊಳ್ಳಬಹುದು.

**ಧನಸ್ಸು** ಆರೋಗ್ಯ ಸಂಬಂಧಿತ ಸಮಸ್ಯೆಗಳು ಅಸ್ವಸ್ಥತೆಯನ್ನು ತರಬಹುದು. ಇಂದು ನಿಮ್ಮ ಹಣವನ್ನು ಅನೇಕ ವಿಷಯಗಳಿಗೆ ಖರ್ಚು ಮಾಡಬಹುದು, ನೀವು ಇಂದು ಉತ್ತಮ ಬಜೆಟ್ ಅನ್ನು ಯೋಜಿಸಬೇಕಾಗಿದೆ.

**ಮಕರ** ಇಂದು ನೀವು ಎಲ್ಲಾ ಕೆಲಸಗಳನ್ನು ಹೊರತುಪಡಿಸಿ, ಬಾಲ್ಯದಲ್ಲಿ ನೀವು ಮಾಡಲು ಇಷ್ಟಪಟ್ಟ ಕೆಲಸಗಳನ್ನು ಮಾಡಲು ಇಷ್ಟಪಡುತ್ತೀರಿ. ಮೂಡ್ ಆಫ್ ಆಗಿರುವುದರಿಂದ ನಿಮ್ಮ ಸಂಗಾತಿಯ ಮೇಲೆ ಸಿಟ್ಟಾಗಬಹುದು.

**ಕುಂಭ** ಅನಗತ್ಯ ಆಲೋಚನೆಗಳು ನಿಮ್ಮ ಮನಸ್ಸನ್ನು ಆವರಿಸಬಹುದು. ಖಾಲಿ ಮೆದುಳು ದೆವ್ವಗಳ ಕಾರ್ಖಾನೆಯಾದ್ದರಿಂದ ದೈಹಿಕ ವ್ಯಾಯಾಮದಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಲು ಪ್ರಯತ್ನಿಸಿ.

**ಮೀನ** ನಿರಾಶಾದಾಯಕ ಮನೋಭಾವವು ಕೇವಲ ನಿಮ್ಮ ಅವಕಾಶಗಳನ್ನು ಸೀಮಿತಗೊಳಿಸುವುದಷ್ಟೇ ಅಲ್ಲದೇ ದೇಹದ ಸಾಮರಸ್ಯವನ್ನೂ ಭಂಗಪಡಿಸುವುದರಿಂದ ಅವುಗಳನ್ನು ತಡೆಯಬೇಕು.

# ವ್ಯಸನಮುಕ್ತ ಭಾರತ ಅಭಿಯಾನ ರಾಷ್ಟ್ರ ನಿರ್ಮಾಣಕ್ಕೆ ಮಹತ್ವದ ಹೆಜ್ಜೆ : ಬೆಲ್ದಾಳೆ

• ಉದಯವಾಹಿನಿ ಬೀದರ್

ಪ್ರಜಾಪಿತಾ ಬ್ರಹ್ಮಾಕುಮಾರಿಸ್ ಈಶ್ವರಿಯ ವಿಶ್ವವಿದ್ಯಾಲಯ ರಾಜಯೋಗ ಕೇಂದ್ರ, ಪಾವನಧಾಮ ವತಿಯಿಂದ 90ನೇ ತ್ರಿಮೂರ್ತಿ ಶಿವ ಜಯಂತಿ ಮಹೋತ್ಸವ ಹಾಗೂ ವ್ಯಸನಮುಕ್ತ ಭಾರತ ಅಭಿಯಾನ ಕಾರ್ಯಕ್ರಮಕ್ಕೆ ಬೀದರ್ ದಕ್ಷಿಣ ಕ್ಷೇತ್ರದ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಅವರು ಅಧಿಕೃತವಾಗಿ ಚಾಲನೆ ನೀಡಿದರು. ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಬ್ರಹ್ಮಾಕುಮಾರಿಸ್ ಹಾಗೂ ಕೇಂದ್ರ ಸರ್ಕಾರದ ಸಂಯುಕ್ತ ಆಶ್ರಯದಲ್ಲಿ ನಡೆಯುತ್ತಿರುವ ವ್ಯಸನಮುಕ್ತ ಭಾರತ ಅಭಿಯಾನ ದೇಶದ ಭವಿಷ್ಯಕ್ಕಾಗಿ ಅತ್ಯಂತ ಮಹತ್ವದ ಹೆಜ್ಜೆ ಎಂದು ಶ್ಲಾಘಿಸಿದರು.

ಪ್ರತಿಯೊಬ್ಬ ಭಾರತೀಯನು ಆರೋಗ್ಯವಂತನಾಗಬೇಕು, ಭಾರತ ಶಕ್ತಿಶಾಲಿ ಹಾಗೂ ಸ್ವಾವಲಂಬಿ ರಾಷ್ಟ್ರವಾಗಿ ಬೆಳೆಯಬೇಕು ಮತ್ತು ಜಗತ್ತಿಗೆ ಮಾರ್ಗದರ್ಶಿಯಾಗುವ ವಿಶ್ವಗುರು ಭಾರತವನ್ನು


ಉದಯವಾಹಿನಿ ಚಿತ್ರ

ರೂಪಿಸಬೇಕು. ಎಲ್ಲರೂ ಒಟ್ಟಾಗಿ ಶ್ರಮಿಸಿದರೆ 2047ರ ವೇಳೆಗೆ ಭಾರತವನ್ನು ನಿಜವಾದ ಸೂಪರ್ ಪವರ್ ಆಗಿ ರೂಪಿಸುವುದು ಸಾಧ್ಯ ಎಂದು ವಿಶ್ವಾಸ ವ್ಯಕ್ತಪಡಿಸಿದರು. ನವದೆಹಲಿಯ ರಾಷ್ಟ್ರೀಯ ಪ್ರೇರಣಾದಾಯಕ ಪ್ರವಚನಕಾರರಾದ ರಾಜಯೋಗಿ ಬಿ.ಕೆ. ಪಿಯೂಷ್ ಭಾಯಿಜಿ ಮಾತನಾಡಿ, ಸಮಾಜವನ್ನು ನಶಾಮುಕ್ತಗೊಳಿಸುವ ಉದ್ದೇಶದಿಂದ ಹಮ್ಮಿಕೊಂಡಿರುವ ಜಾಗೃತಿ ಅಭಿಯಾನಕ್ಕೆ ಜನರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ ಎಂದರು. ನಾರಿ ಲಕ್ಷ್ಮಿಯಾಗಬೇಕು, ನರ ನಾರಾಯಣನಾಗಬೇಕು. ನಶೆ ತ್ಯಾಗದ ಮೂಲಕ ವ್ಯಸನಗಳಿಂದ ಮುಕ್ತರಾಗಿ ಶಾಂತ, ಸುಖಿ ಜೀವನ ನಡೆಸಬೇಕು'' ಎಂದು ಅವರು ಕರೆ ನೀಡಿದರು.

ಕೇಂದ್ರದ ಸಂಚಾಲಕರಾದ ಬಿ.ಕೆ. ಪ್ರತಿಮಾ ಬಹೆನಜಿ ಮಾತನಾಡಿ, ಸರ್ಕಾರ ಹಾಗೂ ವಿವಿಧ ರೋಟರಿ ಕ್ಲಬ್‌ಗಳ ಸಹಕಾರದಿಂದ ಜಾಗೃತಿ ಬಸ್‌ಗಳ ಮೂಲಕ ಅಭಿಯಾನದ ಸಂದೇಶವನ್ನು ವ್ಯಾಪಕವಾಗಿ ಹರಡಲಾಗುತ್ತಿದೆ. ಈ ಅಭಿಯಾನದಿಂದ ಅನೇಕ ಕುಟುಂಬಗಳ ಜೀವನದಲ್ಲಿ ಶಾಂತಿ, ಸೌಹಾರ್ದತೆ ಮತ್ತು ಸುಖ ಪುನಃ ಸ್ಥಾಪನೆಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ, ಅಖಿಲ ಭಾರತೀಯ ವೀರಶೈವ ಲಿಂಗಾಯತ ಮಹಾಸಭೆಯ ರಾಷ್ಟ್ರೀಯ ಉಪಾಧ್ಯಕ್ಷ ಡಾ. ಗುರಮ್ಮ ಸಿದ್ದಾರೆಡ್ಡಿ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದರು.

### ಮೂಲಸೌಕರ್ಯ ಅಭಿವೃದ್ಧಿಗಾಗಿ ಹೂಡಿಕೆ ನಿರೀಕ್ಷಿತ ಪ್ರಮಾಣದಲ್ಲಿ ಆಗಿಲ್ಲ: ಸಿ.ಟಿ.ರವಿ

# ಜನ ಕಷ್ಟದಲ್ಲಿದ್ದಾಗ ಕಾಂಗ್ರೆಸ್ ಸಂಭ್ರಮಿಸುವುದು ವಿಕೃತಿ

• ಉದಯವಾಹಿನಿ ಮಂಗಳೂರು

ರಾಜ್ಯ ಸರ್ಕಾರ ಸಾವಿರ ದಿನಗಳನ್ನು ಪೂರೈಸಿದಕ್ಕಾಗಿ ಸಂಭ್ರಮ ಆಚರಿಸಿದೆ. ಈ ಸಂಭ್ರಮ ಏಕೆ ಎಂದು ಅರ್ಥವಾಗುತ್ತಿಲ್ಲ. ಆಡಳಿತದ ಬಗ್ಗೆ ಜನ ಸಂತೃಪ್ತರಾಗಿದ್ದರೆ, ಸರ್ಕಾರ ಸಂಭ್ರಮಿಸಬಹುದಿತ್ತು. ಆದರೆ, ಜನ ಕಷ್ಟದಲ್ಲಿರುವಾಗ ಕಾಂಗ್ರೆಸ್‌ನವರು ಸಂಭ್ರಮಿಸುತ್ತಿರುವುದು ವಿಕೃತಿ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಹೇಳಿದರು.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,

**ಮೈಸೂರಿಗೆ ಸಿದ್ದರಾಮಯ್ಯ ಕೊಡುಗೆ ಏನು?**

ಭ್ರಷ್ಟಾಚಾರದಲ್ಲಿ ದಾಖಲೆ ಮಾಡಿದ್ದಕ್ಕೆ, ಗುತ್ತಿಗೆದಾರರಿಂದ ಶೇ 60ರಷ್ಟು ಕಮಿಷನ್ ಪಡೆದದ್ದಕ್ಕೆ, ವಿದ್ಯುತ್ ದರ ಏರಿಕೆಗೆ, ನೀರಿನ ಬಿಲ್ ಏರಿಕೆಗೆ, ಅಗತ್ಯ ವಸ್ತುಗಳ ಬೆಲೆ ಏರಿಕೆಗೆ, ಕಾಂಗ್ರೆಸ್ ಶಾಸಕರಾದ ನಾಗೇಂದ್ರ, ವೀರೇಂದ್ರ, ಸತೀಶ್ ಸೈಲ್ ಜೈಲಿಗೆ ಹೋಗಿದ್ದಕ್ಕೆ, ರೈತರ ಆತ್ಮಹತ್ಯೆಯಲ್ಲಿ ರಾಜ್ಯ ಎರಡನೇ ಸ್ಥಾನ ಪಡೆದಿದ್ದಕ್ಕೆ, ರಾಜ್ಯದಲ್ಲಿ ದರೋಡೆಗಳು ನಡೆಯುತ್ತಿರುವುದಕ್ಕೆ, ಡ್ರಗ್ಸ್‌ಮಾಫಿಯಾಕ್ಕೆ ಮುಕ್ತ ಅವಕಾಶ ನೀಡಿದ್ದಕ್ಕೆ ಈ ಸಂಭ್ರಮವೇ ಎಂದು ಅವರು ಪ್ರಶ್ನಿಸಿದರು.

ಮುಡಾ ಹಗರಣ, ವಾಲ್ಮೀಕಿ ನಿಗಮ ಮತ್ತು ಬೋವಿ ನಿಗಮಗಳ ಹಗರಣ, ವಕ್ಫ್ ಮಂಡಳಿ ಹಗರಣ, ಮದ್ಯ ವರ್ತಕರಿಂದ ಲಂಚ ಪಡೆದಿರುವುದು, 11 ಇಲಾಖೆಗಳಲ್ಲಿ ರೂ. 43 ಕೋಟಿ ದುರುಪಯೋಗ, ಕಸ ಬಳಿವ ಯಂತ್ರಕ್ಕೆ ರೂ. 617 ಕೋಟಿ ನೀಡಲು ಹೊರಟಿದ್ದು… ಇವೆಲ್ಲವೂ ಸರ್ಕಾರದ ಸಾವಿರ ದಿನಗಳ ಕಿರೀಟದ ಗರಿಗಳು ಎಂದರು.

ಸರ್ಕಾರಿ ಆಸ್ಪತ್ರೆಗಳಿಗೆ ಔಷಧಿ ಸರಬರಾಜು ಮಾಡುವ ಯೋಗ್ಯತೆಯೂ ಇಲ್ಲದ ಸ್ಥಿತಿಗೆ ಸರ್ಕಾರ ತಲುಪಿದೆ. ಮೂಲಸೌಕರ್ಯ ಅಭಿವೃದ್ಧಿಗಾಗಿ ಹೂಡಿಕೆ ನಿರೀಕ್ಷಿತ ಪ್ರಮಾಣದಲ್ಲಿ ಆಗಿಲ್ಲ. ನಿರೀಕ್ಷೆಗಿಂತ ರೂ. 16 ಸಾವಿರ ಕೋಟಿ ಆದಾಯ ಖೋತಾ ಆಗಿದೆ. ಅಭಿವೃದ್ಧಿ ಕಾರ್ಯಕ್ಕೆ ಸರ್ಕಾರದ ಬಳಿ ದುಡ್ಡಿಲ್ಲ. ಯಾವ ಆಯಾಮದಲ್ಲೂ ರಾಜ್ಯವು ಸಂಭ್ರಮ ಪಡುವ ಸ್ಥಿತಿ ಉಳಿದಿಲ್ಲ. ಆದರೂ ಶಾಸಕರ ಸಂಖ್ಯೆಗಿಂತಲೂ ಹೆಚ್ಚು ಮಂದಿಗೆ ಕ್ಯಾಬಿನೆಟ್ ದರ್ಜೆ ಸ್ಥಾನಮಾನ ನೀಡಲಾಗಿದೆ' ಎಂದರು.


ಉದಯವಾಹಿನಿ ಚಿತ್ರ

> ರಾಜ್ಯದಲ್ಲಿ ಯಾರು ಮುಖ್ಯಮಂತ್ರಿ ಯಾಗಿರುತ್ತಾರೆ ಎನ್ನುವುದು ಜನರ ಸಮಸ್ಯೆ ಅಲ್ಲ. ಅಭಿವೃದ್ಧಿ ಕೆಲಸ ಯಾವಾಗ ಮಾಡುತ್ತೀರಿ ಎಂದಷ್ಟೇ ಜನ ಕೇಳುತ್ತಾರೆ. ಆದರೆ, ಕುರ್ಚಿ ವಿವಾದದಿಂದಾಗಿ ಆಡಳಿತ ಯಂತ್ರದ ಬಿಗಿ ತಪ್ಪಿದೆ. ಭ್ರಷ್ಟಾಚಾರದಲ್ಲಿ ಸ್ಪರ್ಧೆ ಏರ್ಪಟ್ಟಿದೆ. ಕಾಂಗ್ರೆಸ್ ಹೈಕಮಾಂಡ್ ಸಿದ್ದರಾಮಯ್ಯ ಅವರಿಗೆ ಅಭಯ ನೀಡಿ, ಡಿ.ಕೆ.ಶಿವಕುಮಾರ್ ಮೂಗಿಗೆ ತುಪ್ಪ ಸವರಿದೆ. ಎರಡೂ ಕಡೆಯವರಿಂದಲೂ ತರಿಸಿಕೊಂಡು ರಾಜ್ಯದ ಖಜಾನೆಯನ್ನು ಬರಿದು ಮಾಡಿದೆ. ಅವರು ತಮ್ಮ ದೌರ್ಬಲ್ಯ ಮುಚ್ಚಿ ಹಾಕಲು ಕೇಂದ್ರ ಸರ್ಕಾರದ ಮೇಲೆ ಆರೋಪ ಮಾಡುತ್ತಿದ್ದಾರೆ. -ಸಿ.ಟಿ.ರವಿ

ಸರ್ಕಾರ ಗುತ್ತಿಗೆದಾರರಿಗೆ ರೂ.37 ಸಾವಿರ ಕೋಟಿ ಬಿಲ್ ಬಾಕಿ ಇರಿಸಿಕೊಂಡಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಉಪಯೋಜನೆಯ ಅನುದಾನ ಬಿಡುಗಡೆ ಮಾಡಿಲ್ಲ. ಗೃಹಲಕ್ಷ್ಮೀ ಯೋಜನೆ ಹಣ ದುರುಪಯೋಗವಾಗಿದೆ. ಅಬಕಾರಿ ಪರವಾನಗಿ ನೀಡಲು ಎಷ್ಟು ಲಂಚ ನೀಡಬೇಕೆಂಬ ದರಪಟ್ಟಿಯೇ ಇದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮುಡಾ ನಿವೇಶನ ಮರಳಿಸಿದ್ದಾರೆ. ಇವೆಲ್ಲವೂ ಸಂಭ್ರಮ ಪಡುವ ಸಾಧನೆಗಳೇ. ಜನ ನೆನಪಿಟ್ಟುಕೊಳ್ಳಯವ ಯಾವುದಾದರೂ ಒಂದು ಸಾಧನೆಯನ್ನೂ ಈ ಸರ್ಕಾರ ಮಾಡಿದೆಯೇ. ತವರೂರಾದ ಮೈಸೂರಿಗೆ ಸಿದ್ದರಾಮಯ್ಯ ಏನು ಕೊಡುಗೆ ನೀಡಿದ್ದಾರೆ ಎಂದು ಕೇಳಿದರು.

ಭೈರತಿ ಬಸವರಾಜು ಅವರನ್ನು ರಾಜಕೀಯ ಕಾರಣಕ್ಕಾಗಿ ಬಂಧಿಸಲಾಗಿದೆ. ಅವರ ಮೇಲೆ ಹೊರಿಸಿರುವ ಕೊಲೆ ಆರೋಪಕ್ಕೆ ಪೊಲೀಸರು ಸಾಕ್ಷಾಧಾರ ಕೊಡಲು ಸಾಧ್ಯವಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

**ಕೈದಿಗಳಿಗೆ ಜೈಲಿನಲ್ಲಿ ರಾಜಾತಿಥ್ಯ**

**ಭ್ರಷ್ಟಾಚಾರ ಮಿತಿ ಮೀರಿದ ಕುರಿತು ಉಪಲೋಕಾಯುಕ್ತರು ಸರ್ಕಾರವನ್ನು ಟೀಕಿಸಿದ್ದಾರೆ. ಯುವ ಜನರ ಭವಿಷ್ಯಕ್ಕೆ ಸರ್ಕಾರ ಕೊಳ್ಳಿ ಇಟ್ಟಿದೆ. ವಿಚಾರಣಾಧೀನ ಕೈದಿಗಳಿಗೆ ಜೈಲಿನಲ್ಲಿ ರಾಜಾತಿಥ್ಯ ಸಿಗುತ್ತಿದೆ. ಮಹಾರಾಷ್ಟ್ರದ ಪೊಲೀಸರು ಬಂದು ರಾಜ್ಯದಲ್ಲಿ ಡ್ರಗ್ಸ್ ಕಾರ್ಖಾನೆಯನ್ನು ಮುಚ್ಚಿಸಿದ್ದಾರೆ. ಗುಜರಾತ್ ಪೊಲೀಸರು ಬಂದು ಇಲ್ಲಿ ಮಾದಕ ಪದಾರ್ಥ ವಶಕ್ಕೆ ಪಡೆದಿದ್ದಾರೆ. ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ರಾಜ್ಯದ ಸಾಲ 7.5 ಲಕ್ಷ ಕೋಟಿ ದಾಟಿದೆ. ಸಿದ್ದರಾಮಯ್ಯ ಆಡಳಿತಾವಧಿಯ ಸಾಲವೇ 5 ಲಕ್ಷ ಕೋಟಿ ದಾಟಿದೆ. ಅವರು ರಾಜ್ಯವನ್ನು ಮುಳುಗಿಸಿಯೇ ಹೋಗುತ್ತಾರೆ' ಎಂದರು.**

ಪಕ್ಷದ ರಾಜ್ಯ ಘಟಕದ ಅಧ್ಯಕ್ಷರ ಬದಲಾವಣೆ ಸಲುವಾಗಿ ರಾಜ್ಯದ ಕೆಲ ಬಿಜೆಪಿ ಮುಖಂಡರು ವರಿಷ್ಠರನ್ನು ಭೇಟಿಯಾದ ವಿಚಾರ ಗೊತ್ತಿಲ್ಲ. ಉಚ್ಚಾಟನೆಗೊಂಡಿರುವ ರಘುಪತಿ ಭಟ್, ಕೆ.ಎಸ್.ಈಶ್ವರಪ್ಪ ಪಕ್ಷಕ್ಕೆ ಮರಳುವುದಕ್ಕೆ ಕಾಲ ಒದಗಿ ಬರಬೇಕು ಎಂದರು. ರಾಜ್ಯದ ಸ್ಥಳೀಯಾಡಳಿತ ಸಂಸ್ಥೆಗಳ ಚುನಾವಣೆ ನ್ಯಾಯಾಲಯದ ಆದೇಶಗಳಿಂದಾಗಿ ತಡವಾಗಿದೆ. ರಾಜ್ಯ ಸರ್ಕಾರ ಕಾನೂನು ತೊಡಕು ನೀಗಿಸಿ ಆದಷ್ಟು ಬೇಗ ಚುನಾವಣೆ ನಡೆಸಲು ಕ್ರಮವಹಿಸಬೇಕು. ಎಂದರು.

## ದೇಶಕ್ಕೆ ಸರೋಜಿನಿ ನಾಯ್ಡುರವರ ಕೊಡುಗೆ ಅನನ್ಯ:ಎಚ್.ಬಿ.ಪಾಟೀಲ್

• ಉದಯವಾಹಿನಿ ಕಲಬುರಗಿ

ಭಾರತದ ಸ್ವಾತಂತ್ರ್ಯ ಹೋರಾಟಗಾರ್ತಿ, ಕವಯತ್ರಿ ಮತ್ತು ರಾಜಕೀಯ ನಾಯಕಿ. ಮಹಾತ್ಮಾ ಗಾಂಧಿಯವರಿಂದ ಭಾರತದ ಕೋಗಿಲೆ ಎಂದು ಕರೆಯಲ್ಪಟ್ಟ ಸರೋಜಿನಿ ನಾಯ್ಡು ಅವರ ಕೊಡುಗೆ ಅನನ್ಯವಾಗಿದೆ ಎಂದು ಉಪನ್ಯಾಸಕ ಎಚ್.ಬಿ.ಪಾಟೀಲ್ ಹೇಳಿದರು. ನಗರದ ಆಳಂದ ರಸ್ತೆಯ ಸಂತೋಷ ಕಾಲನಿ ಕ್ರಾಸ್ ಸಮೀಪದ 'ರಿಪಬ್ಲಿಕ್ ಸ್ಪೋಕನ್ ಇಂಗ್ಲೀಷ್ ಅಕಾಡೆಮಿಯಲ್ಲಿ ಬಸವೇಶ್ವರ ಸಮಾಜ ಸೇವಾ ಬಳಗದ ವತಿಯಿಂದ ಜರುಗಿದ ಸರೋಜಿನಿ ನಾಯ್ಡುರವರ ಜನ್ಮದಿನಾಚರಣೆ-ರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಭಾವಚಿತ್ರಕ್ಕೆ ಪುಸ್ಪನಮನಗಳನ್ನು ಸಲ್ಲಿಸಿ, ಅವರು ಮಾತನಾಡುತ್ತಿದ್ದರು. ನಾಯ್ಡುರವರು ಕಾಂಗ್ರೆಸ್‌ನ ಮೊದಲ ಭಾರತೀಯ ಮಹಿಳಾ ಅಧ್ಯಕ್ಷೆ ಮತ್ತು ಉತ್ತರ ಪ್ರದೇಶದ ಮೊದಲ ಮಹಿಳಾ ರಾಜ್ಯಪಾಲರಾಗಿದ್ದರು. ಅವರ ಜನ್ಮದಿನವನ್ನು ರಾಷ್ಟ್ರೀಯ ಮಹಿಳಾ ದಿನವಾಗಿ ಆಚರಿಸಲಾಗುತ್ತದೆ ಎಂದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ದತ್ತು ಹಡಪದ, ಬಳಗದ ಗೌರವ ಸಲಹೆಗಾರ ಶಿವಯೋಗೆಪ್ಪಾ ಎಸ್. ಬಿರಾದಾರ ಹಾಗೂ ವಿದ್ಯಾರ್ಥಿಗಳು ಇದ್ದರು.

## ನೀರಿನ ಘಟಕದ ಟ್ಯಾಂಕಿ ಸ್ಫೋಟ


ಉದಯವಾಹಿನಿ ಚಿತ್ರ

• ಉದಯವಾಹಿನಿ ಸುಳ್ಯ

ಬೆಳ್ಳಾರೆಯಲ್ಲಿ ಗ್ರಾಮೀಣಾಭಿವೃದ್ಧಿ ಹಾಗೂ ಶುದ್ಧ ಕುಡಿಯುವ ನೀರಿನ ಘಟಕದ ಟ್ಯಾಂಕಿ ಸ್ಫೋಟಗೊಂಡಿದೆ. ತಾಂತ್ರಿಕ ಅಡಚಣೆಗಳಿಂದ ಘಟಕದ ಅನಿಲಸಂಪರ್ಕದ ಸಿಲಿಂಡರ್ ಸ್ಫೋಟ ಸಂಭವಿಸಿದ್ದು ಇಲ್ಲಿ ಗಾಜುಗಳು ಪುಡಿ ಪುಡಿಯಾಗಿದೆ. ಹಲವು ವರುಷಗಳಿಂದ ಕಾರ್ಯ ನಿರ್ವಹಿಸುತ್ತಾ ಇದ್ದ ಈ ಟ್ಯಾಂಕಿ ಸ್ಫೋಟದ ಬಗ್ಗೆ ಸುಳ್ಯ ತಾ.ಪಂಚಾಯಿತಿ ಇಒ ರವರು ಸೂಕ್ತ ತನಿಖೆ ಕೈಗೊಳ್ಳಬೇಕೆಂದು ಸಾರ್ವಜನಿಕರು ಮತ್ತು ಜನಪ್ರತಿನಿಧಿಗಳು ಆಗ್ರಹಿಸಿದ್ದಾರೆ. ಈ ಸಂದರ್ಭದಲ್ಲಿ ಬೆಳ್ಳಾರೆ ಗ್ರಾ.ಪಂ ಉಪಾಧ್ಯಕ್ಷೆ ವೀಣಾ ಮೂಡಾಯಿತೋಟ, ಸದಸ್ಯರಾದ ಅನಿಲ್ ರೈ ಚಾವಡಿಬಾಗಿಲು, ಮಣಿಕಂಠ ಕಲ್ಲೋಣಿ, ಸಾರ್ವಜನಿಕರು ಉಪಸ್ಥಿತರಿದ್ದು ವೀಕ್ಷಿಸಿದರು.

# ಸವಾಲುಗಳೇ ಸಾಧನೆಗೆ ಮೆಟ್ಟಿಲಾಗಿಸಿಕೊಂಡು ಕಠಿಣ ಪರಿಶ್ರಮಪಟ್ಟು ಭವಿಷ್ಯ ರೂಪಿಸಿಕೊಳ್ಳಲು: ಜಗನ್ನಾಥ ಶೇರಿಕಾರ ಸಲಹೆ

• ಉದಯವಾಹಿನಿ ಚಿಂಚೋಳಿ

ವಿದ್ಯಾರ್ಥಿಗಳು ಕಠಿಣ ಪರಿಶ್ರಮದ ಮೂಲಕ ಭವಿಷ್ಯ ರೂಪಿಸಿಕೊಳ್ಳಬೇಕೆಂದು ಪತ್ರಕರ್ತ ಜಗನ್ನಾಥ ಶೇರಿಕಾರ ವಿಧ್ಯಾರ್ಥಿಗಳಿಗೆ ಕರೆ ನೀಡಿದರು. ತಾಲ್ಲೂಕಿನ ಕೋಡ್ಲಿ ಗ್ರಾಮದ ಹೊರವಲಯದಲ್ಲಿರುವ ಕಿತ್ತೂರು ರಾಣಿ ಚನ್ನಮ್ಮವಸತಿ ಶಾಲೆಯ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು. ವಿದ್ಯಾರ್ಥಿಗಳು ದೊಡ್ಡ ಕನಸುಗಳನ್ನು ಕಾಣಬೇಕು ನನಸು ಮಾಡಲು ನಿರಂತರ ವಿದ್ಯಾಭ್ಯಾಸ ಮೂಲಕ ಛಲದಿಂದ ಶ್ರಮಿಸಬೇಕು. ಪೌರ ಕಾರ್ಮಿಕ ಮಹಿಳೆ ಆಶಾ ಕಂದಾರ ರಾಜಸ್ಥಾನ ಆಡಳಿತ ಸೇವೆಗೆ ಆಯ್ಕೆಯಾಗಿರುವ ಮತ್ತು ಐಪಿಎಸ್ ಅಧಿಕಾರಿ ದಿಂಡಿಗಲ್ ನ ಸಾಧಕಿ ಎನ್ ಅಂಬಿಕಾ,ಕೃತಕ ಕಾಲು ಹೊಂದಿದ್ದರೂ ಅರುಣಿಮಾ ಸಿಂಹಾ ಅವರು ಮೌಂಟ್ ಎವರೆಸ್ಟ್ ಏರಿ ಸಾಹಸ ಮಾಡಿರುವುದು ಬಿಹಾರದಲ್ಲಿ ಗುಡ್ಡ ಕತ್ತರಿಸಿ ರಸ್ತೆ ನಿರ್ಮಿಸಿದ ದಶರಥ ಮಾಂಝಿ ಅವರ ಸಾಧನೆ ಹೇಳಿ ವಿದ್ಯಾರ್ಥಿಗಳಿಗೆ ಹುರಿದುಂಬಿಸಿದರು.

ವಸತಿ ಶಾಲೆಗಳ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಆನಂದ ಕೊಡೆಕಲ್ ಮಾತನಾಡಿ,ವಿದ್ಯಾರ್ಥಿಗಳು


ಉದಯವಾಹಿನಿ ಚಿತ್ರ

ಜೀವನದಲ್ಲಿ ಶಿಸ್ತು ಸಂಯಮ ಹಾಗೂ ಪರಿಶ್ರಮ ಗುಣ ಮತ್ತು ತಂದೆ ತಾಯಿ ಗುರು ಹಿರಿಯರಿಗೆ ಗೌರವ ಕೊಡುವ ಗುಣಗಳು ರೂಢಿಸಿಕೊಳ್ಳಬೇಕು,ಉತ್ತಮ ಫಲಿತಾಂಶ ತರುವ ಮೂಲಕ ಶಾಲೆಗೆ ಕೀರ್ತಿ ತರಬೇಕೆಂದರು.

**ಶಾಲೆಗೆ ಕೀರ್ತಿ ತರಬೇಕು**

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ರಾಜಶೇಖರ ಮಾಂಗ ಮಾತನಾಡಿ, ಬಡತನ ಹಾಗೂ ಯಾವುದೇ ಸಮಸ್ಯೆಗಳು ಸಾಧನೆಗೆ ಅಡ್ಡಿಯಾಗಬಾರದು,ವಿದ್ಯಾರ್ಥಿಗಳು ಸಮಯ ವ್ಯರ್ಥ ಮಾಡದೇ ಶೇ 100 ಫಲಿತಾಂಶ ಪಡೆದು ಶಾಲೆಗೆ ಕೀರ್ತಿ ತರಬೇಕು,ಮಾದರಿ ವ್ಯಕ್ತಿಗಳಾಗಿ ತಂದೆತಾಯಿಯ ಸೇವೆ ಮಾಡಬೇಕೆಂದರು.

**ಕಾರ್ಯಕ್ರಮದಲ್ಲಿ:-** ಮಲ್ಲಪ್ಪ ಚಿಂತಕುಂಟಾ,ರೇವಣಸಿದ್ದ ಹಾಗೂ ಪಾಲಕರ ಪ್ರತಿನಿಧಿ ಮಲ್ಲಿಕಾರ್ಜುನ ಪತ್ರಕರ್ತರಾದ ರಮೇಶ ದೇವನಕಲ್, ಹಾಗೂ ವಸತಿ ಶಾಲೆ ಸಿಬ್ಬಂದಿ, ಶಿಕ್ಷಕರಾದ ಅಶೋಕ ಹಡಪದ್, ಶಿವಾನಂದ ಬೀಳಗಿ, ನಾಗಶೆಟ್ಟಿ,ಗೋಪಾಲ್ ದಾಸ ಸಾಹುಕಾರ್, ರೇವಣಸಿದ್ದಯ್ಯ ಹಿರೇಮಠ, ಮಹಾನಂದಾ, ಅಶೋಕ, ಕವಿತಾ, ಭಾಗ್ಯ, ಜ್ಯೋತಿ,ಸಹಾಯಕ ಮಹೇಶ, ನಿಲಯಪಾಲಕ ಶಿವಕುಮಾರ ಹಿರೇಮಠ, ಶಾಲಾ ಪ್ರಧಾನಿ ಶಿವಾನಿ ಇದ್ದರು.

## ಆಸ್ತಿತೆರಿಗೆ ಪಾವತಿಯಲ್ಲಿ ವಂಚನೆ- ಇಬ್ಬರ ಬಂಧನ

• ಉದಯವಾಹಿನಿ ಉಡುಪಿ

ಉಡುಪಿ ನಗರಸಭೆಯಲ್ಲಿ ಆಸ್ತಿತೆರಿಗೆ ಪಾವತಿಯಲ್ಲಿ ವಂಚನೆ ನಡೆದಿರುವುದು ಬೆಳಕಿಗೆ ಬಂದಿದ್ದು, ಈ ಸಂಬಂಧ ಉಡುಪಿ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ. ಪೌರಾಯುಕ್ತ ಮಹಾಂತೇಶ್ ಅವರು ನೀಡಿದ ದೂರಿನ ಪ್ರಕಾರ, ನಗರಸಭೆ ಕಚೇರಿಯಲ್ಲಿ ಆಸ್ತಿತೆರಿಗೆ ಪಾವತಿಯನ್ನು ಇ-ಸ್ವೀಕೃತಿ ಮೂಲಕ ಚಲನ್ ಸೃಜಿಸಿ ಯೂನಿಯನ್ ಬ್ಯಾಂಕ್‌ನಲ್ಲಿ ನಗರಸಭೆಯ ಖಾತೆಗೆ ಜಮಾ ಮಾಡುವ ವ್ಯವಸ್ಥೆ ಇದೆ. ಫೆಬ್ರವರಿ 3ರಂದು ಆಸ್ತಿತೆರಿಗೆ ಪಾವತಿಗಳ ತುಲನೆಯಲ್ಲಿ, ಜನವರಿ 28ರಂದು ಪಾವತಿಯಾಗಿದೆಯೆಂದು ಯೂನಿಯನ್ ಬ್ಯಾಂಕ್ ಸೀಲ್ ಹೊಂದಿದ್ದ ಚಲನ್ ಪತ್ತೆಯಾದರೂ, ಅದೇ ದಿನಾಂಕದ ಬ್ಯಾಂಕ್ ವಿವರ ಪಟ್ಟಿಯಲ್ಲಿ ಪಾವತಿ ದಾಖಲಾಗಿರಲಿಲ್ಲ ಎಂಬುದು ಗಮನಕ್ಕೆ ಬಂದಿದೆ. ಇದೇ ರೀತಿ ಫೆಬ್ರವರಿ 4ರಂದು ಪರಿಶೀಲನೆ ನಡೆಸಿದಾಗ, ಯೂನಿಯನ್ ಬ್ಯಾಂಕ್ ಸೀಲ್ ಹೊಂದಿದ್ದ ಕೆಲವು ಚಲನ್‌ಗಳು ಈಗಾಗಲೇ ಜನವರಿ 28ರಂದು ಜನರೇಟ್ ಆಗಿದ್ದ ಅದೇ ಚಲನ್ ಸಂಖ್ಯೆಯನ್ನು ಹೊಂದಿರುವುದು ಪತ್ತೆಯಾಗಿದೆ. ಒಂದೇ ಚಲನ್ ಸಂಖ್ಯೆಗೆ 2 ಬೇರೆ ಬೇರೆ ದಿನಾಂಕಗಳಲ್ಲಿ ಸೀಲ್ ಹೊಂದಿದ ಚಲನ್‌ಗಳು ದೊರೆತಿರುವುದು ಅನುಮಾನಕ್ಕೆ ಕಾರಣವಾಗಿದೆ.

## ಬೆಳವಡಿ ಮಲ್ಲಮ್ಮನ ಉತ್ಸವದ ಪೂರ್ವಭಾವಿ ಸಭೆ


ಉದಯವಾಹಿನಿ ಚಿತ್ರ

• ಉದಯವಾಹಿನಿ ಬೈಲಹೊಂಗಲ

ತಾಲ್ಲೂಕಿನ ಬೆಳವಡಿ ಗ್ರಾಮದ ಗ್ರಂಥಾಲಯದಲ್ಲಿ ಬೆಳವಡಿ ಮಲ್ಲಮ್ಮ ಉತ್ಸವದ ವಿಚಾರ ಸಂಕಿರಣದ ಪೂರ್ವಭಾವಿ ಸಭೆ ಜರುಗಿತು. ಇದೇ ತಿಂಗಳು 28 ಹಾಗೂ ಮಾರ್ಚ್ 1 ರಂದು ಜರಗುವ ಬೆಳವಡಿ ಮಲ್ಲಮ್ಮ ಉತ್ಸವದ ವಿಚಾರ ಸಂಕೀರ್ಣದ ಪೂರ್ವಭಾವಿ ಸಭೆಯು ಬೈಲಹೊಂಗಲ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ವಿಚಾರ ಸಂಕೀರ್ಣ ಸಮಿತಿ ಅಧ್ಯಕ್ಷರಾದ ಎ ಎನ್ ಪ್ಯಾಟಿ ಇವರ ಅಧ್ಯಕ್ಷತೆಯಲ್ಲಿ ಜರುಗಿತ್ತು . ವಿಚಾರ ಸಂಕೀರ್ಣದ ಕಾರ್ಯಕ್ರಮಕ್ಕೆ ಬೈಲಹೊಂಗಲದ ಶ್ರೀಗಳನ್ನು ಹಾಗೂ ಧಾರ್ಮಿಕ ದತ್ತಿ ಇಲಾಖೆಯ ಆರಾಧ್ರಿ ಮಠ ಶಾಸ್ತ್ರಿಗಳನ್ನು ಹವಾನಿಸಲು ಸಭೆಯಲ್ಲಿ ನಿರ್ಣಯಿಸಲಾಯಿತು ವಿಚಾರ ಸಂಕೀರ್ಣದ ಅಧ್ಯಕ್ಷತೆಯನ್ನು ಮೈಸೂರಿನ ನಿವೃತ್ತ ಕುಲಪತಿಗಳಾದ ಎ.ಕೆ ಉಪಾಧ್ಯಾಯ ಹಾಗೂ ಉಪನ್ಯಾಸಕರಾಗಿ ಮೈಸೂರಿನ ಸಾಹಿತ್ಯಗಳಾದ ರಾಮಣ್ಣ ತಟ್ಟಿ ಪ್ರೊಫೆಸರ್ ಶಿವಲೀಲಾ ಮುಕುಂದ ಹಾಗೂ ನೇತ್ರ ಬಿಸಿರೊಳ್ಳಿ ಅವರನ್ನು ಸಭೆಗೆ ಕರೆ ತರಲು ತೀರ್ಮಾನಿಸಲಾಯಿತು ಆಶಯ ನುಡಿ ಪ್ರಕಾಶ್ ಹುಂಬಿ ಉದ್ಘಾಟಕರಾಗಿ ಶಾಸಕರಾದ ಮಹಾಂತೇಶ ಕೌಜಲಗಿ ಅವ್ವಾನಿಸಲು ನಿರ್ಧರಿಸಲಾಯಿತು.

ಸಭೆಯಲ್ಲಿ ಬಿ ಆರ್ ಸಿ ರವಿ ಹಿರೇಮಠ ಗ್ರಾಮದ ಹಿರಿಯರಾದ ಚಂದ್ರಶೇಖರಯ್ಯ ಕಾರಿಮನಿ ವೀರಣ್ಣ ಕರಿಕಟ್ಟಿ ಬಿ ಜಿ ದೇಗಾವಿ ರಾಚಯ್ಯ ಸ್ವಾಮಿಗಳು ರೊಟ್ಟೆನವರ ಮಠ ಪ್ರಕಾಶ್ ಹುಂಬಿ ಸಿ ಎಸ್ ಚಿಕ್ಕನಗೌಡರ್ ಶಂಕ್ರಯ್ಯ ಗುಡ್ಡದಮಠ ಎಫ್ ಎಸ್ ಕಡಕೋಳ ವಿಶ್ವನಾಥ್ ಪೂಜಾರ ಡಿ ವೈ ಗರಗದ ಎಫ್ ಎಸ್ ಕಡಕೋಳ ಯಾಸೀನ್ ಕಿತ್ತೂರ್ ಮಹಿಳಾ ಪ್ರತಿಷ್ಠಾನದ ಕಾರ್ಯದರ್ಶಿ ಸವಿತಾ ಪಾಟೀಲ್ ಶಂಕರ್ ಸಿ ಕರಿಕಟ್ಟಿ ಮಹಾಂತೇಶ್ ಕರಿಕಟ್ಟಿ ಹನುಮಂತ ಸಾಲಹಳ್ಳಿ ರೋಹಿತ್ ಕುಲಕರ್ಣಿ ರಂಜಾನ್ ನದಾಫ್ ಶಂಕರ್ ಪರಮನಾಯಕರ್ ವಿರುಪಾಕ್ಷಪ್ಪ ವಾಲಿ ಅಶೋಕ್ ತಡಕೋಡ ಉಪಸ್ಥಿತರಿದ್ದರು ಶಿಕ್ಷಕರಾದ ಶಿವಾನಂದ ಹುಂಬಿ ಸ್ವಾಗತಿಸಿದರು ಶಿಕ್ಷಣ ಇಲಾಖೆಯ ರಾಜು ಹಕ್ಕಿ ವಂದಿಸಿದರು.

## ಬೇಸಿಗೆಯಲ್ಲಿ ಸಣ್ಣ ಗಿಡಗಳಿಗೆ ನೀರುಣಿಸಿ: ವೀರಭದ್ರಪ್ಪ

• ಉದಯವಾಹಿನಿ ಬೀದರ್

ಬೇಸಿಗೆ ದಿನಗಳಲ್ಲಿ ಸಣ್ಣ ಗಿಡಗಳಿಗೆ ನಿಯಮಿತವಾಗಿ ನೀರುಣಿಸಿ, ಬಿಸಿಲಿನ ತೀವ್ರತೆಯಿಂದ ಅವು ಸುಟ್ಟು ಹೋಗದಂತೆ ಕಾಪಾಡಬೇಕು ಎಂದು ರಾಜ್ಯ ಹಿರಿಯ ನಾಗರಿಕರ ಪ್ರಶಸ್ತಿ ಪುರಸ್ಕೃತರಾದ ವೀರಭದ್ರಪ್ಪ ಉಪ್ಪಿನ ಅವರು ಜನತೆಗೆ ಕರೆ ನೀಡಿದರು.

ನಗರದ ಪ್ರತಾಪನಗರದಲ್ಲಿರುವ ರಾಚಯ್ಯಸ್ವಾಮಿ ಅವರ ನಿವಾಸದ ಬಳಿ ಸಾಮೂಹಿಕವಾಗಿ ಸಣ್ಣ ಗಿಡಗಳಿಗೆ ನೀರುಣಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಕಳೆದ ವರ್ಷಕ್ಕಿಂತ ಈ ವರ್ಷ ಹೆಚ್ಚು ಮಳೆ ಮತ್ತು ಚಳಿ ಅನುಭವಿಸಿದ್ದೇವೆ. ಆದರೆ ಹವಾಮಾನ ಇಲಾಖೆಯ ಮುನ್ನೆಚ್ಚರಿಕೆ ಪ್ರಕಾರ ಮುಂಬರುವ ದಿನಗಳಲ್ಲಿ ವಾಡಿಕೆಗೆ ಹೋಲಿಸಿದರೆ ಸುಮಾರು 2 ಡಿಗ್ರಿ ಸೆಲ್ಸಿಯಸ್ ತಾಪಮಾನ ಹೆಚ್ಚಾಗುವ ಸಾಧ್ಯತೆ ಇದೆ ಎಂದು ತಿಳಿಸಿದರು. ತಮ್ಮ ಮನೆಗಳ ಆವರಣದಲ್ಲಿ ಅಥವಾ ಸುತ್ತಮುತ್ತಲಿರುವ ಸಣ್ಣ ಸಸಿಗಳಿಗೆ ಬೇಸಿಗೆ ಮುಗಿಯುವವರೆಗೆ ಆಗಾಗ ನೀರುಣಿಸಿ ಅವುಗಳನ್ನು


ಉದಯವಾಹಿನಿ ಚಿತ್ರ

ಜೀವಂತವಾಗಿಟ್ಟರೆ, ಮುಂದಿನ ಮಳೆಯ ವೇಳೆಯಲ್ಲಿ ಅವು ಚೆನ್ನಾಗಿ ಬೆಳೆಯುತ್ತವೆ ಎಂದು ಹೇಳಿದರು. ಗಿಡಗಳನ್ನು ಬೆಳೆಸುವಲ್ಲಿ ಪ್ರತಿಯೊಬ್ಬರೂ ಅಳಿಲು ಸೇವೆ ಸಲ್ಲಿಸಬೇಕು ಎಂದು ಅವರು ಅಭಿಪ್ರಾಯಪಟ್ಟರು.

ಯೋಗ ಮೇಲ್ವಿಚಾರಕ ಗಂಗಪ್ಪ ಸಾವಳೆ ಪರಿಸರ ಸಂರಕ್ಷಣೆ ಕುರಿತು ಮಾತನಾಡಿದರು. ಹಿರಿಯ ನಿವೃತ್ತ ಇಂಜಿನಿಯರ್ ಮಲ್ಲಿಕಾರ್ಜುನ ಪಾಟೀಲ್ ಬೇಸಿಗೆಯಲ್ಲಿ ಆರೋಗ್ಯದ ಬಗ್ಗೆ ವಿಶೇಷ ಕಾಳಜಿವಹಿಸಬೇಕೆಂದು ಸಲಹೆ ನೀಡಿದರು.

## ಮೂಲಸೌಲಭ್ಯಗಳಿಗೆ ಆದ್ಯತೆ: ವಿಜಯಾನಂದ ಕಾಶಪ್ಪನವರ

• ಉದಯವಾಹಿನಿ ಹುನಗುಂದ

ಸರ್ಕಾರ ಗ್ರಾಮೀಣ ಪ್ರದೇಶಗಳ ರಸ್ತೆ ಸೇರಿದಂತೆ ಮೂಲಸೌಲಭ್ಯಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಿದೆ ಎಂದು ಶಾಸಕ ವಿಜಯಾನಂದ ಕಾಶಪ್ಪನವರ ಹೇಳಿದರು. ತಾಲ್ಲೂಕಿನ ಹಾವರಗಿ ಗ್ರಾಮದಲ್ಲಿ ಪ್ರಸಕ್ತ 2025-26 ಸಾಲಿನ ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯಡಿಯಲ್ಲಿ ಗ್ರಾಮೀಣ ರಸ್ತೆ, ಸೇತುವೆಗಳ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ಈ ಭಾಗದಲ್ಲಿ ಮುಖ್ಯ ರಸ್ತೆಗಳು ಆಗಿಲ್ಲ ಎನ್ನುವ ಕೂಗು ಕಳೆದ ಹತ್ತು ವರ್ಷಗಳಿಂದ ಇತ್ತು. ಗ್ರಾಮದ ಬೇಡಿಕೆಗಳಾದ ಸಿಸಿ ರಸ್ತೆ, ಗ್ರಾಮದಿಂದ ಕೃಷ್ಣ ನದಿಯವರೆಗೆ ರಸ್ತೆ ಸುಧಾರಣೆ, ಹಾವರಗಿ-ಜಾಲಕಮಲದಿನ್ನಿ ಸಂಪರ್ಕಿಸುವ ರಸ್ತೆ ಸುಧಾರಣೆ ಕಾಮಗಾರಿಯೂ ಸೇರಿದಂತೆ ಜಿಲ್ಲಾ ಪಂಚಾಯತ್ ಮತ್ತು ಲೋಕೋಪಯೋಗಿ ಇಲಾಖೆಯಿಂದ ಒಟ್ಟು ರೂ. 5 ಕೋಟಿ ವೆಚ್ಚದ ಕಾಮಗಾರಿ ಕೈಗೊಳ್ಳಲಾಗುತ್ತಿದೆ ಎಂದರು.

# ಗ್ಯಾರಂಟಿ ಯೋಜನೆಗಳ ಸೌಲಭ್ಯ ಕಟ್ಟ ಕಡೆಯ ವ್ಯಕ್ತಿಗೂ ತಲುಪಿಸಿ

### ಬಡವರನ್ನು ಆರ್ಥಿಕವಾಗಿ ಸಬಲರನ್ನಾಗಿಸಲು ಪಂಚ ಗ್ಯಾರಂಟಿ ಯೋಜನೆಗಳು ಸಹಕಾರಿ: ಎಸ್.ಆರ್.ಪಾಟೀಲ

• ಉದಯವಾಹಿನಿ ವಿಜಯಪುರ

ಬಡವರನ್ನು ಆರ್ಥಿಕವಾಗಿ ಸಬಲರನ್ನಾಗಿಸಲು ಹಾಗೂ ಅವರು ಸ್ವಾವಲಂಬಿಯಾಗಿ ಜೀವನ ನಡೆಸಲು ಪಂಚ ಗ್ಯಾರಂಟಿ ಯೋಜನೆಗಳು ಸಹಕಾರಿಯಾಗಿದ್ದು, ಈ ಪಂಚ ಗ್ಯಾರಂಟಿ ಯೋಜನೆಯ ಸೌಲಭ್ಯವನ್ನು ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಲಭಿಸುವಂತೆ ನೋಡಿಕೊಂಡು ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳ ಲಾಭ ಜನರಿಗೆ ತಲುಪಿಸಿ ಎಂದು ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಎಸ್.ಆರ್. ಪಾಟೀಲ (ಬ್ಯಾಡಗಿ) ಸೂಚಿಸಿದರು. ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜನಸಾಮಾನ್ಯರ ಬದುಕಿನಲ್ಲಿ ಸುಭದ್ರತೆಯ ಭಾವನೆ ಮೂಡಿಸುವ ನಿಟ್ಟಿನಲ್ಲಿ ಸರ್ಕಾರ ಹಲವು ಮಹತ್ವದ ಯೋಜನೆಗಳನ್ನು ಜಾರಿಗೊಳಿಸಿದ್ದು, ರಾಜ್ಯ ಸರ್ಕಾರ ಜಾರಿಗೆ ತಂದಿರುವ ಮಹತ್ವಾಕಾಂಕ್ಷಿ ಯೋಜನೆಗಳಾದ ಶಕ್ತಿ ಯೋಜನೆ, ಗೃಹಜ್ಯೋತಿ, ಅನ್ನಭಾಗ್ಯ, ಗೃಹಲಕ್ಷ್ಮಿ ಹಾಗೂ ಯುವನಿಧಿ ಯೋಜನೆಗಳು ಎಲ್ಲಾ ವರ್ಗದ ಜನರಿಗೂ ಅನುಕೂಲ ಒದಗಿಸಿವೆ.

ಜನರ ಸಮಸ್ಯೆಗಳಿಗೆ ಸ್ಪಂದಿಸಿ ಸರ್ಕಾರದ ಕೆಲಸವನ್ನು ಆಸಕ್ತಿಯಿಂದ ಹಾಗೂ ಶ್ರದ್ಧೆಯಿಂದ ಅಧಿಕಾರಿಗಳು ನಿರ್ವಹಿಸಬೇಕು. ಪಡಿತರ ಅಂಗಡಿಗಳಲ್ಲಿ ಪಂಚ ಗ್ಯಾರಂಟಿ ಯೋಜನೆಗಳ ಬೋರ್ಡ ಪ್ರದರ್ಶಿಸಬೇಕು. ಒಟ್ಟಾರೆಯಾಗಿ


ಉದಯವಾಹಿನಿ ಚಿತ್ರ

**ಜಿಲ್ಲಾ ಮಟ್ಟದ ಸಮಾವೇಶ**

**ಫೆಬ್ರವರಿ 21 ರಂದು ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಪಂಚ ಗ್ಯಾರಂಟಿ ಯೋಜನೆಗಳ ಜಿಲ್ಲಾ ಮಟ್ಟದ ಸಮಾವೇಶ-ಉತ್ಸವ ಹಾಗೂ ಫಲಾನುಭವಿಗಳೊಂದಿಗೆ ಚರ್ಚೆ ಸಮಾರಂಭವು ಜರುಗಲಿದ್ದು,ಈ ಸಮಾರಂಭವನ್ನು ಅತ್ಯಂತ ಉತ್ಸವದಂತೆ ಆಚರಿಸಲು ಉದ್ದೇಶಿಸಲಾಗಿದೆ. ಗ್ಯಾರಂಟಿ ಸಮಾವೇಶವು ಅತ್ಯಂತ ವ್ಯವಸ್ಥಿತವಾಗಿ ಹಾಗೂ ಸಂಭ್ರಮದಿಂದ ಜರುಗಲು ವಿವಿಧ ಸಮಿತಿಗಳನ್ನು ರಚಿಸಿ ಅಧಿಕಾರಿಗಳಿಗೆ ಕಾರ್ಯ ಹಂಚಿಕೆ ಮಾಡಬೇಕು. ಸಮಾವೇಶದಲ್ಲಿ ಐದೂ ಗ್ಯಾರಂಟಿ ಯೋಜನೆಗಳ ಪ್ರತ್ಯೇಕ ಮಾಹಿತಿ ಮಳಿಗೆಗಳನ್ನು ತೆರೆದು ಗ್ಯಾರಂಟಿ ಶಿಷ್ಟಾಚಾರದನ್ವಯ ಆಮಂತ್ರಣ ಪತ್ರಿಕೆ, ವೇದಿಕೆ ವ್ಯವಸ್ಥೆ, ಫಲಾನುಭವಿಗಳ ಚರ್ಚೆ, ಊಟೋಪಹಾರದ ವ್ಯವಸ್ಥೆ ಸೇರಿದಂತೆ ಕಾರ್ಯಕ್ರಮವು ಯಾವುದೇ ಲೋಪದೋಷಗಳಿಲ್ಲದಂತೆ ಅತ್ಯಂತ ಅಚ್ಚುಕಟ್ಟಾಗಿ ನಡೆಸಬೇಕೆಂದು ತಿಳಿಸಿದರು.**

ಪಂಚ ಗ್ಯಾರಂಟಿ ಯೋಜನೆಗಳ ಸೌಲಭ್ಯ ಫಲಾನುಭವಿಗಳಿಗೆ ದೊರಕಿಸಿ ಕೊಡುವ ನಿಟ್ಟಿನಲ್ಲಿ ಕೆಲಸ ನಿರ್ವಹಿಸಬೇಕೆಂದು ತಿಳಿಸಿದರು.

ಸಭೆಯಲ್ಲಿ ಪಂಚಗ್ಯಾರಂಟಿ ಯೋಜನೆಯ ಸಂಬಂಧಿತ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು. ಜಿಲ್ಲೆಯಲ್ಲಿ ಶಕ್ತಿ ಯೋಜನೆಯಡಿ ಜನವರಿ ವರೆಗೆ 17,99,34,366 ಮಹಿಳೆಯರು ಪ್ರಯಾಣಿಸಿದ್ದು, 607.93 ಕೋಟಿ ರೂ.ವೆಚ್ಚವಾಗಿದೆ.

ಗೃಹ ಜ್ಯೋತಿ ಯೋಜನೆಯಡಿ ಜನವರಿ ಅಂತ್ಯಕ್ಕೆ 4,46,616 ಒಟ್ಟು ಫಲಾನುಭವಿಗಳಿದ್ದು ಈ ಯೋಜನೆಯಡಿ 538.15 ಕೋಟಿ ರೂ.ಜಮೆಯಾಗಿದೆ. ವಿಶೇಷವಾಗಿ ಯುವಜನರಿಗೆ ಆತ್ಮಸ್ಥೈರ್ಯ ತುಂಬಿ ಪ್ರೊತ್ಸಾಹ ಒದಗಿಸಲು ಪದವೀಧರ-ಡಿಪ್ಲೋಮಾ ಪದವೀಧರರಿಗೆ ಯುವ ನಿಧಿ ಯೋಜನೆ ಜಾರಿಗೊಳಿಸಿದೆ. ಈ ಯೋಜನೆಯಡಿ ಪದವಿ ಹಾಗೂ ಡಿಪ್ಲೋಮಾ ವಿದ್ಯಾಭ್ಯಾಸ ಪೂರ್ಣಗೊಳಿಸಿ ಉದ್ಯೋಗದ ಹುಡುಕಾಟದಲ್ಲಿ ತೊಡಗುವ ಯುವ ಜನರಿಗೆ ನಿರುದ್ಯೋಗ ಭತ್ಯೆಯ ಭದ್ರತೆ ಒದಗಿಸುವ ಯೋಜನೆ ಇದಾಗಿದ್ದು, ಪದವೀಧರ ನಿರುದ್ಯೋಗಿಗಳಿಗೆ ಪ್ರತಿ ತಿಂಗಳು 3 ಸಾವಿರ ರೂ. ಹಾಗೂ ಡಿಪ್ಲೊಮಾ ಪಾಸಾದ ನಿರುದ್ಯೋಗಿಗಳಿಗೆ ಪ್ರತಿ ತಿಂಗಳು 1500 ರೂ. ನಿರುದ್ಯೋಗ ಭತ್ಯೆಯನ್ನು ನೀಡಲಾಗುತ್ತದೆ. ಜಿಲ್ಲೆಯಲ್ಲಿ 2025ರ ಡಿಸೆಂಬರ್ ವರೆಗೆ ಒಟ್ಟು 17,467 ಯುವನಿಧಿ ಫಲಾನುಭವಿಗಳಾಗಿದ್ದು, ಇವರಿಗೆ 51,78,01,500 ರೂ.ಗಳನ್ನು ನೇರ ವರ್ಗಾವಣೆ (ಡಿ.ಬಿ.ಟಿ) ಮೂಲಕ ಅವರ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಲಾಗಿದೆ. ಯುವನಿಧಿ ಯೋಜನೆ ವಿಜಯಪುರ ಜಿಲ್ಲೆಯಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳ್ಳುತ್ತಿದ್ದು, ನಿರುದ್ಯೋಗಿ ಯುವಕರಿಗೆ ಆಶಾಕಿರಣವಾಗಿ ಪರಿಣಮಿಸಿದ್ದು, ಜಿಲ್ಲೆಯು ಯುವನಿಧಿ ಯೋಜನೆಯಲ್ಲಿ ರಾಜ್ಯಕ್ಕೆ ಮೂರನೇ ಸ್ಥಾನದಲ್ಲಿದೆ ಎಂದು ಸಭೆಗೆ ಮಾಹಿತಿ ನೀಡಲಾಯಿತು.

> **ಗ್ಯಾರಂಟಿ ಯೋಜನೆಗಳ ಸೌಲಭ್ಯ ಎಲ್ಲಾ ಅರ್ಹ ಫಲಾನುಭವಿಗಳಿಗೆ ಒದಗಿಸಬೇಕು. ಈ ಸೌಲಭ್ಯಗಳಿಂದ ಅರ್ಹ ಫಲಾನುಭವಿಗಳು ವಂಚಿತರಾಗದಂತೆ ಅಧಿಕಾರಿಗಳು ಕ್ರಮ ವಹಿಸಬೇಕು. -ಇಲಿಯಾಸ ಬೋರಾಮಣಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ**

# ನನ್ನ ಮದುವೆ ಏಪ್ರಿಲ್ 1ಕ್ಕೆ

ಮೃಣಾಲ್ ಠಾಕೂರ್ ಮತ್ತು ಧನುಷ್ ಮದುವೆ ವದಂತಿಗಳ ಕುರಿತು ನಟಿ ಸ್ಪಷ್ಟನೆ ನೀಡಿದ್ದಾರೆ. ಫೆಬ್ರವರಿ 14ರ ವಿವಾಹ ವರದಿಯನ್ನು ಹಾಸ್ಯಮಯವಾಗಿ ಅಲ್ಲಗಳೆದಿದ್ದಾರೆ. ಏಪ್ರಿಲ್ 1ರಂದು ತಮ್ಮ ಮದುವೆ ಎಂದು ಹೇಳುವ ಮೂಲಕ ವದಂತಿಗಳಿಗೆ ತೆರೆ ಎಳೆದಿದ್ದಾರೆ. ಎಐ ಸೃಷ್ಟಿಯ ಫೋಟೋಗಳು ವದಂತಿಗಳಿಗೆ ಪ್ರಮುಖ ಕಾರಣವಾಗಿದ್ದವು. ಮೃಣಾಲ್ ಠಾಕೂರ್ ಹಾಗೂ ಧನುಷ್ ಮದುವೆ ಆಗುತ್ತಾರೆ ಎಂಬ ಸುದ್ದಿ ಇತ್ತೀಚೆಗೆ ಜೋರಾಗಿತ್ತು. ಫೆಬ್ರವರಿ 14 ಇವರ ವಿವಾಹ ನಡೆಯಲಿದೆ ಎಂದು ವರದಿ ಆಗಿತ್ತು. ಆದರೆ, ಇದನ್ನು ಇವರು ಒಪ್ಪಿಕೊಂಡಿರಲಿಲ್ಲ. ಅನೇಕ ಕಡೆಗಳಲ್ಲಿ ಒಟ್ಟಾಗಿ ಕಾಣಿಸಿಕೊಂಡಿದ್ದೇ ಈ ವದಂತಿ ಹಬ್ಬಲು ಮುಖ್ಯ ಕಾರಣ ಆಗಿತ್ತು. ಈ ವಿಷಯವಾಗಿ ಮೃಣಾಲ್ ಕಡೆಯಿಂದ ಈಗ ಸ್ಪಷ್ಟನೆ ಸಿಕ್ಕಿದೆ. ಫನ್ ಆಗಿ ಇದಕ್ಕೆ ಅವರು ಉತ್ತರ ನೀಡಿದ್ದಾರೆ.

'ಗಲಾಟಾ ಇಂಡಿಯಾ'ಗೆ ಮೃಣಾಲ್ ಸಂದರ್ಶನ ನೀಡಿದ್ದಾರೆ. ಈ ವೇಳೆ ಹಲವು ವಿಷಯಗಳ ಬಗ್ಗೆ ಓಪನ್ ಆಗಿ ಮಾತನಾಡಿದರು. 'ಫೆಬ್ರವರಿ 14ರಂದು ನಿಮ್ಮ ಮದುವೆ ಎಂಬ ಸುದ್ದಿ ಹರಿದಾಡಿದೆಯಲ್ಲ' ಎಂದು ಕೇಳಲಾಯಿತು. 'ಫೆಬ್ರವರಿ 14 ಅಲ್ಲ, ಏಪ್ರಿಲ್ 14 ಅಲ್ಲ, ನನ್ನ ಮದುವೆ ನಡೆಯೋದು ಏಪ್ರಿಲ್ 1ರಂದು. ಏಕೆಂದರೆ ಅದು ಮೂರ್ಖರ ದಿನ' ಎಂದು ಅವರು ಉತ್ತರಿಸಿದ್ದಾರೆ. 'ಹೌದು, ಮದುವೆ ಬಗ್ಗೆ ಮಾತುಕತೆ ನಡೆಯುತ್ತಿದೆ. ಸರಿಯಾದ ದಿನ, ಸರಿಯಾದ ಸಮಯ ಮತ್ತು ಸರಿಯಾದ ವ್ಯಕ್ತಿ ನನ್ನ ಜೀವನದಲ್ಲಿ ಬಂದಾಗ, ನನ್ನ ಸಾಮಾಜಿಕ ಜಾಲತಾಣ ಖಾತೆಗಳಲ್ಲಿ ಅದನ್ನು ಮೊದಲು ಹೇಳುವವಳು ನಾನೇ' ಎಂದು ಅವರು ಹೇಳಿದ್ದಾರೆ. ಫೆಬ್ರವರಿ 20ರಂದು ಮೃಣಾಲ್ ಠಾಕೂರ್ ನಟನೆಯ 'ದೋ ದೀವಾನೆ ಶೆಹರ್ ಮೇ' ಚಿತ್ರ ರಿಲೀಸ್ ಆಗುತ್ತಿದೆ. ಈ ಸಿನಿಮಾಗೆ ಸಿದ್ಧಾಂತ ಚತುರ್ವೇದಿ ಹೀರೋ. ಸಿನಿಮಾ ರಿಲೀಸ್ ಇಟ್ಟುಕೊಂಡು ಯಾರೂ ವಿವಾಹ ಆಗೋ ಪ್ಲ್ಯಾನ್ ಮಾಡೋದಿಲ್ಲ.


ಮೃಣಾಲ್ ಹಾಗೂ ಧನುಷ್ ವಿವಾಹ ಆಗುತ್ತಿರುವ ರೀತಿಯಲ್ಲಿ 'ಎಐ' ಫೋಟೋಗಳನ್ನು ಹರಿಬಿಡಲಾಗಿತ್ತು. ಇದನ್ನು ಅನೇಕರು ನಿಜವಾದ ಫೋಟೋ ಎಂದು ನಂಬಿದ್ದರು. ಇವರ ಮದುವೆ ಸುದ್ದಿ ಹಬ್ಬಲು ಇದು ಮುಖ್ಯ ಕಾರಣ.





# ಐ ಲವ್ ಯೂ ಅಂದ ರಚ್ಚು

ಡಿಂಪಲ್ ಕ್ವೀನ್ ರಚಿತಾ ರಾಮ್ ಅವರು ಪ್ರೇಮಿಗಳ ದಿನದಂದು ಐ ಲವ್ ಯೂ ಅಂತ ಪ್ರಪೋಸ್ ಮಾಡಿದ್ದು, ಸೋಷಿಯಲ್ ಮೀಡಿಯಾದಲ್ಲಿ ಸಖತ್ ವೈರಲ್ ಆಗಿದೆ.



ಸ್ಯಾಂಡಲ್‌ವುಡ್ ಡಿಂಪಲ್ ಕ್ವೀನ್ ರಚಿತಾ ರಾಮ್ ಕನ್ನಡ ಮಾತ್ರವಲ್ಲದೇ ಈಗ ಬೇರೆ ಭಾಷೆಗಳಲ್ಲಿಯೂ ಪವರ್‌ಫುಲ್ ಪಾತ್ರಗಳ ಮೂಲಕ ಮಿಂಚುತ್ತಿದ್ದಾರೆ. ಆದ್ರೆ ಲ್ಯಾಂಡ್‌ಲಾರ್ಡ್, ಕಲ್ಟ್ ಸಿನಿಮಾ ಬಳಿಕ ಕೊಂಚ ರಿಲೀಫ್ ಪಡೆದಿರುವ ರಚ್ಚು ಸೋಷಿಯಲ್ ಮಿಡಿಯಾ ಅಂಗಳದಲ್ಲೂ ಸಖತ್ ಆಕ್ಟೀವ್ ಆಗಿದ್ದಾರೆ. ಆಗ್ಗಾಗೆ ಫೋಟೋ, ವಿಡಿಯೋಗಳನ್ನ ಶೇರ್ ಮಾಡುತ್ತಾ ಸುದ್ದಿಯಲ್ಲಿರುತ್ತಾರೆ.

ಪ್ರೇಮಿಗಳ ದಿನ ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಏನ್ ಗೊತ್ತಾ ಐ ಲವ್ ಯೂ ಅಷ್ಟೇ ಎಂದು ಹೇಳುವ ವಿಡಿಯೋವೊಂದನ್ನ ರಚಿತ ರಾಮ್ ಅವರು ಪೋಸ್ಟ್ ಮಾಡಿದ್ದು, ಸಾಕಷ್ಟು ಚರ್ಚೆಗೆ ಗ್ರಾಸವಾಗಿದೆ.

ಏಕೆಂದ್ರೆ ಇತ್ತೀಚಿನ ದಿನಗಳಲ್ಲಿ ರಚಿತಾ ರಾಮ್ ಅವರ ಮದುವೆ ಬಗ್ಗೆ ಸಾಕಷ್ಟು ಚರ್ಚೆಗಳು ನಡೆದಿತ್ತು.

ರಚ್ಚು ಕೂಡ ಮನೆಯಲ್ಲಿ ಹುಡುಗನನ್ನ ನೋಡ್ತಿದ್ದಾರೆ. ಆದಷ್ಟು ಬೇಗ ಗುಡ್‌ನ್ಯೂಸ್ ಕೊಡ್ತೀನಿ ಅಂತ ಹೇಳುತ್ತಲೇ ಇದ್ದರು. ಇದೀಗ ಶೇರ್ ಮಾಡಿರುವ ವಿಡಿಯೋ ಅಭಿಮಾನಿಗಳಲ್ಲಿ ಭಾರೀ ಕುತೂಹಲ ಹೆಚ್ಚಿಸಿದೆ. ರಚಿತಾ ರಾಮ್ ಲವ್‌ನಲ್ಲಿ ಬಿದ್ದಿದ್ದಾರಾ ಮದ್ವೆ ಫಿಕ್ಸ್ ಆಯ್ತಾ ಹಾಗಾದ್ರೆ, ಯಾರಿಗೆ ಐ ಲವ್ ಯೂ ಹೇಳಿದ್ದು ಅಂತೆಲ್ಲ ಫ್ಯಾನ್ಸ್ ಪ್ರಶ್ನೆಗಳ ಸುರಿಮಳೆಯನ್ನೇ ಸುರಿಸುತ್ತಿದ್ದಾರೆ.



# ಅಲ್ಲು ಕುಟುಂಬದಲ್ಲಿ ಹಳದಿ ಶಾಸ್ತ್ರ

ಅಲ್ಲು ಸಿರೀಶ್ ಅವರ ವಿವಾಹಪೂರ್ವ ಸಂಭ್ರಮಗಳು ಅದ್ದೂರಿಯಾಗಿ ಆರಂಭವಾಗಿವೆ. ಇತ್ತೀಚೆಗೆ ನಡೆದ ಅರಿಶಿನ ಶಾಸ್ತ್ರದ ವಿಡಿಯೋ ವೈರಲ್ ಆಗಿದೆ. ಇದರಲ್ಲಿ ಅಲ್ಲು ಮತ್ತು ಮೆಗಾ ಕುಟುಂಬ ಸದಸ್ಯರು, ಸ್ನೇಹಿತರು ಭಾಗವಹಿಸಿದ್ದರು. ಉಪಾಸನಾ ಕೊನಿಡೇಲಾ ಸಮಾರಂಭದ ವಿಶೇಷ ಆಕರ್ಷಣೆಯಾಗಿದ್ದರು. ಮಾರ್ಚ್ 6 ರಂದು ಮದುವೆ ನಡೆಯಲಿದ್ದು, ಚಲನಚಿತ್ರ ಮತ್ತು ರಾಜಕೀಯ ಗಣ್ಯರು ಭಾಗವಹಿಸುವ ನಿರೀಕ್ಷೆಯಿದೆ.

ಅಲ್ಲು ಕುಟುಂಬದಲ್ಲಿ ವಿವಾಹದ ಸಂಭ್ರಮ ಶುರುವಾಗಿದೆ. ಅಲ್ಲು ಅರವಿಂದ್ ಅವರ ಕಿರಿಯ ಪುತ್ರ ಅಲ್ಲು ಸಿರೀಶ್ ಅವರ ವಿವಾಹಪೂರ್ವ ಸಂಭ್ರಮಗಳು ಅದ್ದೂರಿಯಾಗಿ ಆರಂಭವಾಗಿವೆ. ಅಲ್ಲು ಸಿರೀಶ್ ಮತ್ತು ನಯನಿಕಾ ಈಗಾಗಲೇ ತಮ್ಮ ಸ್ನೇಹಿತರಿಗಾಗಿ ದುಬೈನಲ್ಲಿ ಅದ್ದೂರಿಯಾಗಿ ಪೂರ್ವ ವಿವಾಹಪೂರ್ವ ಪಾರ್ಟಿ ನೀಡಿದ್ದರು.

ಇದಕ್ಕೆ ಸಂಬಂಧಿಸಿದ ಫೋಟೋಗಳು ಅಂತರ್ಜಾಲದಲ್ಲಿ ವೈರಲ್ ಆಗಿದ್ದವು. ಅಲ್ಲು ಸಿರೀಶ್ ಮನೆಯಲ್ಲಿ ಅದ್ದೂರಿಯಾಗಿ ಅರಿಶಿನ ಶಾಸ್ತ್ರ ನಡೆದಿದೆ.ಈ ವಿಡಿಯೋ ವೈರಲ್ ಆಗಿದೆ. ಅಲ್ಲು ಹಾಗೂ ಮೆಗಾ ಕುಟುಂಬ ಸದಸ್ಯರು ಒಂದೇ ಕಡೆ ಅರಿಶಿನ ಶಾಸ್ತ್ರವನ್ನು ಮಾಡಿದರು.

ಮೆಗಾಸ್ಟಾರ್ ಚಿರಂಜೀವಿ ಅವರ ಪತ್ನಿ ಸುರೇಖಾ, ಅವರ ಮಗಳು ಸುಷ್ಮಿತಾ, ಸೊಸೆ ಉಪಾಸನಾ, ಪವನ್ ಕಲ್ಯಾಣ್ ಅವರ ಪತ್ನಿ ಅನ್ನಾ ಲೆಜಿನೋವಾ ಮತ್ತು ಇತರ ಕುಟುಂಬ ಸದಸ್ಯರು, ಸ್ನೇಹಿತರು ಮತ್ತು ಆಪ್ತರು ಸಮಾರಂಭದಲ್ಲಿ ಭಾಗವಹಿಸಿದ್ದರು. ಇದಕ್ಕೆ ಸಂಬಂಧಿಸಿದ ವಿಡಿಯೋವನ್ನು ಅಲ್ಲು ಸಿರೀಶ್ ಸ್ವತಃ ತಮ್ಮ ಸಾಮಾಜಿಕ ಮಾಧ್ಯಮ ಖಾತೆಯಲ್ಲಿ ಹಂಚಿಕೊಂಡಿದ್ದಾರೆ. ಇದರೊಂದಿಗೆ, ಈ ವಿಡಿಯೋ ಇಂಟರ್ನೆಟ್‌ನಲ್ಲಿ ವೈರಲ್ ಆಗಿದೆ. ಅನೇಕ ಚಲನಚಿತ್ರ ಸೆಲೆಬ್ರಿಟಿಗಳು, ಅಭಿಮಾನಿಗಳು ಮತ್ತು ನೆಟ್ಟಿಗರು ಅಲ್ಲು ಸಿರೀಶ್ ಅವರನ್ನು ಮೊದಲೇ ಅಭಿನಂದಿಸುತ್ತಿದ್ದಾರೆ ಮತ್ತು ಹಾರೈಸುತ್ತಿದ್ದಾರೆ.



# ವಾರಣಾಸಿ ಚಿತ್ರಕ್ಕಾಗಿ ವೇಗದಲ್ಲಿ ಕೆಲಸ

ಮಹೇಶ್ ಬಾಬು ಮತ್ತು ರಾಜಮೌಳಿ ಕಾಂಬಿನೇಷನ್‌ನ 'ವಾರಣಾಸಿ' ಚಿತ್ರ ಭಾರಿ ಕುತೂಹಲ ಮೂಡಿಸಿದೆ. ಶೇಕಡಾ 50ರಷ್ಟು ಚಿತ್ರೀಕರಣ ಮುಗಿದಿದ್ದು, 2026ರ ಜೂನ್ ವೇಳೆಗೆ ಪೂರ್ಣಗೊಳ್ಳಲಿದೆ. ಇದು ರಾಜಮೌಳಿಯ ವೃತ್ತಿಜೀವನದ ಅತ್ಯಂತ ಕಷ್ಟಕರವಾದ ದೃಶ್ಯಗಳನ್ನು ಹೊಂದಿದ್ದು, ಏಪ್ರಿಲ್ 7, 2027ಕ್ಕೆ ಬಿಡುಗಡೆ ದಿನಾಂಕ ನಿಗದಿಯಾಗಿದೆ.

ಮಹೇಶ್ ಬಾಬು ಅವರ 'ವಾರಣಾಸಿ' ಚಿತ್ರದ ಶೀರ್ಷಿಕೆಯನ್ನು ಇತ್ತೀಚೆಗೆ ಬಿಡುಗಡೆ ಮಾಡಲಾಯಿತು. ಇದರೊಂದಿಗೆ, ಈ ಚಿತ್ರದ ಬಗ್ಗೆ ಸಾಕಷ್ಟು ಹೈಪ್ ಸೃಷ್ಟಿಯಾಗಿದೆ. ಇದರ ಜೊತೆಗೆ, ಇದು ರಾಜಮೌಳಿ-ಮಹೇಶ್ ಕಾಂಬೊ ಆಗಿರುವುದರಿಂದ, ಸ್ವಾಭಾವಿಕವಾಗಿಯೇ ಈ ಕ್ರೇಜಿ ಪ್ರಾಜೆಕ್ಟ್ ಮೇಲೆ ಭಾರಿ ನಿರೀಕ್ಷೆಗಳಿವೆ.

ಆದರೆ, ರಾಜಮೌಳಿ ಚಿತ್ರಕ್ಕೆ ಕನಿಷ್ಠ 2-3 ವರ್ಷ ಬೇಕಾಗುತ್ತದೆ. ಚಿತ್ರದಲ್ಲಿ ಎಲ್ಲವೂ ಪರಿಪೂರ್ಣ ಆಗಿರಬೇಕೆಂದು ರಾಜಮೌಳಿ ಬಯಸುತ್ತಾ ಇದ್ದಾರೆ.


ಅದ್ಭುತ ದೃಶ್ಯಗಳನ್ನು ಕಟ್ಟಿಕೊಡೋ ನಿರ್ದೇಶಕ ರಾಜಮೌಳಿ ಈ ಬಾರಿಯೂ ಅದನ್ನು ಮುಂದುವರಿಸುತ್ತಿದ್ದಾರೆ. ರಾಜಮೌಳಿ ತಮ್ಮ ಹಿಂದಿನ ಚಿತ್ರಗಳಿಗಿಂತ ಭಿನ್ನವಾಗಿ ವಾರಣಾಸಿಯನ್ನು ಪ್ರಚಾರ ಮಾಡುತ್ತಿದ್ದಾರೆ. ಹಲವು ಸಮಯದವರೆಗೆ ಒಂದೇ ಒಂದು ಅಪ್ಡೇಟ್ ನೀಡದ ರಾಜಮೌಳಿ ಈಗ ಎಲ್ಲವನ್ನೂ ಹಿಂಜರಿಕೆಯಿಲ್ಲದೆ ಹೇಳುತ್ತಿದ್ದಾರೆ. ಮಹೇಶ್ ಮತ್ತು ಪ್ರಿಯಾಂಕಾ ಅವರು ಇನ್ನೊಂದು ದಿನ ಒಂದೇ ಸಂದರ್ಶನದಲ್ಲಿ ಹಲವು ವಿಷಯಗಳನ್ನು ಹೇಳಿದ್ದರು. ಇತ್ತೀಚೆಗೆ, ರಾಜಮೌಳಿ ಕೂಡ ವಾರಣಾಸಿಯ ಬಗ್ಗೆ ಹಾಟ್ ಅಪ್‌ಡೇಟ್‌ಗಳನ್ನು ನೀಡಿದರು. ಅವರ ಹಿಂದಿನ ಚಿತ್ರಗಳಿಗೆ ಹೋಲಿಸಿದರೆ, ನಿರ್ದೇಶಕರು ವಾರಣಾಸಿಯ ಚಿತ್ರೀಕರಣವನ್ನು ರಾಕೆಟ್ ವೇಗದಲ್ಲಿ ಪೂರ್ಣಗೊಳಿಸುತ್ತಿದ್ದಾರೆ. ಈಗಾಗಲೇ ಶೇಕಡಾ 50 ರಷ್ಟು ಚಿತ್ರೀಕರಣ ಪೂರ್ಣಗೊಂಡಿದೆ. ರಾಜಮೌಳಿ ಎಲ್ಲಾ ಪ್ರಮುಖ ಸನ್ನಿವೇಶಗಳನ್ನು ಪೂರ್ಣಗೊಳಿಸಿದ್ದಾರೆ. ರಾಜಮೌಳಿ ಅವರು 'ವಾರಣಾಸಿ' ಮಾಡುತ್ತಿದ್ದಾರೆ. ಇದು ಅವರ ವೃತ್ತಿಜೀವನದ ಅತ್ಯಂತ ಕಷ್ಟಕರವಾದ ದೃಶ್ಯವಾಗಿದೆ ಎಂದು ಹೇಳಿದ್ದಾರೆ.

# ಯಶ್‌ಗೆ ರಾಧಿಕಾ ವ್ಯಾಲೆಂಟೈನ್ಸ್ ಡೇ ವಿಶ್

ರಾಧಿಕಾ ಪಂಡಿತ್ ಅವರು ಯಶ್‌ಗೆ ವ್ಯಾಲೆಂಟೈನ್ಸ್ ದಿನದ ಶುಭಾಶಯ ಕೋರಿದ್ದಾರೆ. ತಮ್ಮ ಪ್ರೀತಿಯ ಪಯಣ, ಯಶ್ ಅವರ ತ್ಯಾಗ ಮತ್ತು ಬೆಂಬಲವನ್ನು ಹೃದಯಸ್ಪರ್ಶಿಯಾಗಿ ಸ್ಮರಿಸಿದ್ದಾರೆ. ಧಾರಾವಾಹಿಯಿಂದ ಸಿನಿಮಾದವರೆಗಿನ ಅವರ ಬಾಂಧವ್ಯ ಈಗಲೂ ಅಚಲವಾಗಿದೆ. ಯಶ್ 'ಟಾಕ್ಸಿಕ್' ಮತ್ತು 'ರಾಮಾಯಣ' ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದರೂ, ರಾಧಿಕಾ ಅವರ ವೃತ್ತಿಜೀವನಕ್ಕೆ ಅಚಲ ಬೆಂಬಲವಾಗಿ ನಿಂತಿದ್ದಾರೆ.

ಈಗ ವ್ಯಾಲೆಂಟೈನ್ಸ್ ಡೇ ಪ್ರಯುಕ್ತ ರಾಧಿಕಾ ಪಂಡಿತ್ ಅವರು ಯಶ್‌ಗೆ ವಿಶ್ ಮಾಡಿದ್ದಾರೆ. ಈ ಪೋಸ್ಟ್ ಗಮನ ಸೆಳೆಯೋ ರೀತಿಯಲ್ಲಿ ಇದೆ. ರಾಧಿಕಾ ಪಂಡಿತ್ ಹಾಗೂ ಯಶ್ ಅವರ ಪರಿಚಯ ಆಗಿದ್ದು ಧಾರಾವಾಹಿಯಲ್ಲಿ. ಅಲ್ಲಿ ಇಬ್ಬರೂ ಒಟ್ಟಿಗೆ ನಟಿಸಿದರು. ಆ ಬಳಿಕ ಇಬ್ಬರೂ ಒಟ್ಟಾಗಿ ಸಿನಿಮಾ ಮಾಡಿದರು. ತೆರೆಮೇಲೆ ಜೋಡಿ ಆಗಿ ಕಾಣಿಸಿಕೊಳ್ಳುತ್ತಿದ್ದ ಈ ಜೋಡಿ ಈಗ ತೆರೆಯ ಹಿಂದೆಯೂ ಕಪಲ್ ಆಗಿದ್ದಾರೆ. ಇವರ ಪ್ರೀತಿಯ ನೌಕೆ ಯಾವುದೇ ಅಡಚಣೆ ಇಲ್ಲದೆ ಸಾಗುತ್ತಿದೆ. ಯಶ್ ಅವರ ಕುರಿತು ರಾಧಿಕಾ ಪಂಡಿತ್ ಹಂಚಿಕೊಂಡಿರೋ ಪೋಸ್ಟ್ ಈಗ ಗಮನ ಸೆಳೆಯುತ್ತಿದೆ. 'ನನ್ನ ಅಭದ್ರತೆಯನ್ನು ತೆಗೆದು ಹಾಕಿದವನು ನೀನು. ನಿನ್ನ ಕಣ್ಣುಗಳಲ್ಲಿ ದಣಿವು, ಬೇರೆ ಯಾರೂ ಗಮನಿಸದ ತ್ಯಾಗ, ದೂರು ನೀಡದೆ ನೀನು ಹೊತ್ತುಕೊಂಡ ದೀರ್ಘ ಭಾರ ನನಗೆ ಕಾಣುತ್ತಿದೆ.

ಅದು ನಮಗಾಗಿ ಎಂದು ನನಗೆ ತಿಳಿದಿದೆ. ನನ್ನನ್ನು ದಿನವೂ ಆಯ್ಕೆ ಮಾಡಿದ್ದಕ್ಕೆ ನಿನಗೆ ಧನ್ಯವಾದ, ಹ್ಯಾಪಿ ವ್ಯಾಲೆಂಟೈನ್ಸ್ ಡೇ' ಎಂದು ರಾಧಿಕಾ ಪಂಡಿತ್ ವಿಶ್ ಮಾಡಿದ್ದಾರೆ. ಅವರು 'ಟಾಕ್ಸಿಕ್' ಸಿನಿಮಾ ಕೆಲಸಗಳಲ್ಲಿ ಬ್ಯುಸಿ ಇದ್ದಾರೆ. ಈ ಚಿತ್ರದ ಬಗ್ಗೆ ಅಭಿಮಾನಿಗಳಿಗೆ ಸಾಕಷ್ಟು ನಿರೀಕ್ಷೆ ಇದೆ.



# ವಿಮಾನ, ಹೋಟೆಲ್ ರೂಂ ಬೆಲೆ ದುಪ್ಪಟ್ಟು

ಫೆಬ್ರವರಿ 15ರ ಭಾರತ-ಪಾಕ್ ಟಿ20 ವಿಶ್ವಕಪ್ ಪಂದ್ಯಕ್ಕೆ ಇಡೀ ವಿಶ್ವವೇ ಕಾದು ಕುಳಿತಿದೆ. ಕೊಲಂಬೊದಲ್ಲಿ ನಡೆಯುವ ಈ ರೋಮಾಂಚಕ ಪಂದ್ಯದಿಂದ ವಿಮಾನ ಟಿಕೆಟ್, ಹೋಟೆಲ್ ರೂಂಗಳ ಬೆಲೆಗಳು ಶೇ. 45-65ರಷ್ಟು ಗಗನಕ್ಕೇರಿವೆ. ಇದರ ಜೊತೆಗೆ, ಜಾಹೀರಾತು ದರಗಳು ಶೇ. 20-25ರಷ್ಟು ಹೆಚ್ಚಳವಾಗಿದ್ದು, 10 ಸೆಕೆಂಡ್‌ಗೆ 30-40 ಲಕ್ಷ ರೂ. ತಲುಪಿವೆ. ಈ ಪಂದ್ಯ ಆರ್ಥಿಕವಾಗಿ ಭಾರಿ ಪರಿಣಾಮ ಬೀರಿದೆ. ಫೆಬ್ರವರಿ 15 ರಂದು ನಡೆಯುಲಿರುವ ಟಿ20 ವಿಶ್ವಕಪ್ ಪಂದ್ಯಕ್ಕೆ ಇಡೀ ವಿಶ್ವವೇ ಕಾದು ಕುಳಿತಿದೆ. ಈ ದಿನದಂದು ಭಾರತ ಮತ್ತು ಪಾಕಿಸ್ತಾನ ನಡುವೆ ರೋಮಾಂಚಕಾರಿ ಪಂದ್ಯ ನಡೆಯಲಿದೆ. ಶ್ರೀಲಂಕಾದ ಕೊಲಂಬೊದಲ್ಲಿರುವ ಆರ್. ಪ್ರೇಮದಾಸ ಕ್ರೀಡಾಂಗಣದಲ್ಲಿ ನಡೆಯಲಿರುವ ಈ ಪಂದ್ಯಕ್ಕಾಗಿ ಎರಡೂ ದೇಶಗಳ ಕ್ರಿಕೆಟ್ ಅಭಿಮಾನಿಗಳು ಇಲ್ಲಿಗೆ ಆಗಮಿಸಿದ್ದಾರೆ. ಇವರ ಜೊತೆಗೆ ಶ್ರೀಲಂಕಾದ ನಾಗರಿಕರು ಸಹ ಈ ಪಂದ್ಯವನ್ನು ವೀಕ್ಷಿಸಲು ಉತ್ಸುಕರಾಗಿದ್ದಾರೆ. ಹೀಗಾಗಿ ಕೊಲಂಬೊಗೆ ತೆರಳುತ್ತಿರುವ ವಿಮಾನಗಳ ಟಿಕೆಟ್ ಬೆಲೆ ದುಪ್ಪಟ್ಟಾಗಿದೆ. ಇದರ ಜೊತೆಗೆ ಕೊಲಂಬೊದಲ್ಲಿರುವ ಹೋಟೆಲ್‌ಗಳ ರೂಂಗಳ ಬೆಲೆಯೂ ಗಗನಕ್ಕೇರಿದೆ.

**ಕೊಲಂಬೊ ಜನ ಜಾತ್ರೆ**

ಹಾಗೆಯೇ ಜಾಹೀರಾತು ದರಗಳು ಸಹ ಭಾರಿ ಪ್ರಮಾಣದಲ್ಲಿ ಹೆಚ್ಚಾಗಿದೆ. ಜಾಹೀರಾತು ಸ್ಲಾಟ್‌ಗಳನ್ನು ಪಡೆಯಲು ಕಂಪನಿಗಳು ಭಾರಿ ಹಣವನ್ನು ಪಾವತಿಸುತ್ತಿವೆ. ವರದಿಯ ಪ್ರಕಾರ, ಈ ಹೈ-ವೋಲ್ಟೇಜ್ ಪಂದ್ಯಕ್ಕಾಗಿ 10 ಸೆಕೆಂಡುಗಳ ಟಿವಿ ಜಾಹೀರಾತು ಸ್ಲಾಟ್‌ಗೆ 30 ರಿಂದ 40 ಲಕ್ಷ ರೂ.ಗಳ ದರವನ್ನು ವಿಧಿಸಲಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ಜಾಹೀರಾತು ಸ್ಲಾಟ್‌ಗಳ ಬೆಲೆ ಶೇಕಡಾ 20 ರಿಂದ 25 ರಷ್ಟು ಹೆಚ್ಚಾಗಿದೆ. ಬ್ರಾಡ್‌ಕಾಸ್ಟರ್ ಜಿಯೋಸ್ಟಾರ್ ಇಡೀ ಪಂದ್ಯಾವಳಿಯಲ್ಲಿ ಜಾಹೀರಾತುಗಳಿಂದಲೇ ಸುಮಾರು 2000 ಕೋಟಿ ರೂ.ಗಳನ್ನು ಗಳಿಸುವ ಸಾಧ್ಯತೆಯಿದೆ ಎಂದು ತಜ್ಞರ ಅಭಿಪ್ರಾಯವಾಗಿದೆ.


**ಜಾಹೀರಾತು ಸ್ಲಾಟ್ ಪಡೆಯಲು ಹೋರಾಟ**

ಡಿಜಿಟಲ್ ಸ್ಟ್ರೀಮಿಂಗ್ ಪ್ಲಾಟ್‌ಫಾರ್ಮ್ ಜಿಯೋಹಾಟ್‌ಸ್ಟಾರ್‌ನಲ್ಲಿ ಜಾಹೀರಾತು ದರಗಳು ಏರಿಕೆಯಾಗುತ್ತಿವೆ. ಇಲ್ಲಿ 10 ಸೆಕೆಂಡುಗಳ ಜಾಹೀರಾತು ಸ್ಲಾಟ್ 15 ರಿಂದ 20 ಲಕ್ಷ ರೂ.ಗಳನ್ನು ತಲುಪಿದೆ. ಆಟೋಮೊಬೈಲ್, ಎಫ್‌ಎನ್‌ಸಿಜಿ, ಹಣಕಾಸು, ವಿಮೆ ಮತ್ತು ರಿಯಲ್ ಎಸ್ಟೇಟ್ ಕಂಪನಿಗಳು ಜಾಹೀರಾತು ಕ್ಷೇತ್ರದಲ್ಲಿ ಹೆಚ್ಚಿನ ಆಸಕ್ತಿ ತೋರಿಸುತ್ತಿವೆ ಎಂದು ತಜ್ಞರು ಹೇಳುತ್ತಿದ್ದಾರೆ.

ಈ ಟಿ20 ವಿಶ್ವಕಪ್‌ನಲ್ಲಿ ಜಾಹೀರಾತು ನೀಡುವ ಕಂಪನಿಗಳಲ್ಲಿ ಎಮಿರೇಟ್ಸ್, ಅಮುಲ್, ಓಪನ್ ಎಐ, ಹುಂಡೈ, ಮಹೀಂದ್ರಾ ಮತ್ತು ಬ್ರಿಟಾನಿಯಾ ಸೇರಿದಂತೆ ಹಲವು ಪ್ರಮುಖ ಬ್ರ್ಯಾಂಡ್‌ಗಳು ಸೇರಿವೆ.

ಭಾರತದಿಂದ ಕೊಲಂಬೊಗೆ ಸಾಕಷ್ಟು ಕ್ರಿಕೆಟ್ ಅಭಿಮಾನಿಗಳು ಪ್ರಯಾಣ ಬೆಳೆಸುತ್ತಿದ್ದಾರೆ. ಸಾಮಾನ್ಯ ದಿನಗಳಿಗೆ ಹೋಲಿಸಿದರೆ ರೌಂಡ್ ಟ್ರಿಪ್ ವಿಮಾನ ದರಗಳು ಶೇಕಡಾ 45 ರಿಂದ 50 ರಷ್ಟು ಹೆಚ್ಚಾಗಿದೆ. ಫೆಬ್ರವರಿ 15 ರ ವಾರಾಂತ್ಯದ ಕೊಲಂಬೊಗೆ ಬುಕಿಂಗ್‌ಗಳು ಮೂರು ದಿನಗಳಲ್ಲಿ ದ್ವಿಗುಣಗೊಂಡಿವೆ ಎಂದು ಮೇಕ್‌ಮೈಟ್ರಿಪ್ ಸ್ಪಷ್ಟಪಡಿಸಿದೆ. ಕ್ಲಿಯರ್ ಟ್ರಿಪ್ ಪ್ರಕಾರ, ಭಾರತ-ಪಾಕಿಸ್ತಾನ ಪಂದ್ಯದಿಂದಾಗಿ ಕೊಲಂಬೊಗೆ ಬುಕಿಂಗ್‌ಗಳು ಶೇಕಡಾ 65 ರಷ್ಟು ಹೆಚ್ಚಾಗಿದೆ.



# ನನ್ನ ಕೈಯಲ್ಲಿ ಎರಡು ಮೊಣಕೈಗಳಿವೆ

ಟಿ20 ವಿಶ್ವಕಪ್‌ನ ಹೈವೋಲ್ಟೇಜ್ ಪಂದ್ಯವು ಫೆಬ್ರವರಿ 15 ರಂದು ನಡೆಯಲಿದೆ. ಕೊಲಂಬೊದ ಆರ್. ಪ್ರೇಮದಾಸ ಸ್ಟೇಡಿಯಂನಲ್ಲಿ ಜರುಗಲಿರುವ ಈ ಪಂದ್ಯದಲ್ಲಿ ಭಾರತ ಮತ್ತು ಪಾಕಿಸ್ತಾನ್ ತಂಡಗಳು ಮುಖಾಮುಖಿಯಾಗಲಿದ್ದು, ಈ ಮ್ಯಾಚ್‌ನಲ್ಲಿ ಗೆಲ್ಲುವ ತಂಡ ಸೂಪರ್-8 ಹಂತಕ್ಕೇರಲಿದೆ. ಹೀಗಾಗಿ ಈ ಪಂದ್ಯದಲ್ಲಿ ಜಿದ್ದಾಜಿದ್ದಿನ ಪೈಪೋಟಿಯನ್ನು ನಿರೀಕ್ಷಿಸಬಹುದು. ಪಾಕಿಸ್ತಾನ್ ಸ್ಪಿನ್ನರ್ ಉಸ್ಮಾನ್ ತಾರಿಖ್ ಸಖತ್ ಸುದ್ದಿಯಲ್ಲಿದ್ದಾರೆ. ಈ ಬಾರಿ ಅವರು ಸುದ್ದಿಯಾಗಿರುವುದು ಮೊಣಕೈ ವಿಚಾರದಿಂದ. ಅಂದರೆ ನನ್ನ ಬಲಗೈನಲ್ಲಿ ಎರಡು ಮೊಣಕೈಗಳಿವೆ ಎಂಬ ವಿಚಾರವನ್ನು ಉಸ್ಮಾನ್ ತಾರಿಖ್ ಬಹಿರಂಗಪಡಿಸಿದ್ದಾರೆ. ಇದೇ ಕಾರಣದಿಂದಾಗಿ ನನ್ನ ಬೌಲಿಂಗ್ ಶೈಲಿ ವಿಭಿನ್ನವಾಗಿ ಎಂದಿದ್ದಾರೆ.

''ಡಬಲ್ ಎಲ್ಬೋ'' ಅಥವಾ ಎರಡು ಮೊಣಕೈಗಳ ವಿಶಿಷ್ಟ ಜೈವಿಕ ರಚನೆಯಿಂದಾಗಿ ಬೌಲಿಂಗ್ ಮಾಡುವಾಗ ನನ್ನ ಕೈ ಬಗ್ಗಿದಂತೆ ಕಾಣುತ್ತದೆ. ಇದೇ ಕಾರಣದಿಂದಾಗಿ ನನ್ನ ಬೌಲಿಂಗ್ ಶೈಲಿ ನಿಮಗೆ ವಿಭಿನ್ನವಾಗಿ ಕಾಣಿಸುತ್ತಿದೆ ಎಂದು ಉಸ್ಮಾನ್ ತಾರಿಖ್ ಹೇಳಿದ್ದಾರೆ. ಒಂದೇ ಕೈನಲ್ಲಿ ಎರಡು ಮೊಣಕೈ ಇರುವುದನ್ನು ವೈದ್ಯಕೀಯವಾಗಿ ಹೈಪರ್-ಮೊಬಿಲಿಟಿ ಅಥವಾ ಡಬಲ್ ಜಾಯಿಂಟ್ ಎನ್ನಲಾಗುತ್ತದೆ. ಇದರಿಂದಾಗಿ ತಮ್ಮ ಕೈಯನ್ನು ಸಂಪೂರ್ಣವಾಗಿ ನೇರಗೊಳಿಸಲು ಸಾಧ್ಯವಿಲ್ಲ ಎಂದು ಉಸ್ಮಾನ್ ಹೇಳಿದ್ದಾರೆ. ಇತ್ತ ಈ ವಿಚಿತ್ರ ಆಕ್ಷನ್‌ನಿಂದಾಗಿ ಇವರು ಬಾಲ್ ಎಸೆಯುತ್ತಾರೆ ಎಂಬ ಆರೋಪ ಕೇಳಿಬಂದಿತ್ತು. ಆದರೆ ಲಾಹೋರ್‌ನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಲ್ಲಿ ನಡೆಸಿದ ಬಯೋಮೆಕಾನಿಕಲ್ ಪರೀಕ್ಷೆಯಲ್ಲಿ ಅವರಿಗೆ ಕ್ಲೀನ್ ಚೀಟ್ ನೀಡಲಾಗಿದೆ.

ಹೀಗಾಗಿಯೇ ಅವರು ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಮುಂದುವರೆದಿದ್ದಾರೆ. ಮತ್ತೊಂದೆಡೆ ಉಸ್ಮಾನ್ ತಾರಿಖ್ ಅವರ ಬೌಲಿಂಗ್ ಶೈಲಿಯನ್ನು ಶ್ರೀಲಂಕಾದ ದಂತಕಥೆ ಮುತ್ತಯ್ಯ ಮುರಳೀಧರನ್ ಅವರೊಂದಿಗೆ ಹೋಲಿಸಲಾಗುತ್ತದೆ. ಇಲ್ಲಿ ಇಬ್ಬರ ತೋಳು ಹುಟ್ಟಿನಿಂದಲೇ ಸ್ವಲ್ಪ ಬಗ್ಗಿದಂತಿದೆ. ಇದು ಕಾನೂನುಬದ್ಧ 15-ಡಿಗ್ರಿ ಮಿತಿಯೊಳಗಿದೆ ಎಂಬುದು ಕೂಡ ಸಾಬೀತಾಗಿದೆ. ಇದಾಗ್ಯೂ ಉಸ್ಮಾನ್ ತಾರಿಖ್ ಚೆಂಡೆಸೆಯುವಾಗ ಕ್ರೀಸ್‌ನಲ್ಲಿ ಒಂದು ಕ್ಷಣ ನಿಂತು ಬಾಲ್ ಎಸೆಯುವ ಅವರ ಶೈಲಿ ಬ್ಯಾಟರ್‌ಗಳ ದಿಕ್ಕು ತಪ್ಪಿಸುತ್ತದೆ. ಈ ಶೈಲಿಯೇ ಈಗ ದೊಡ್ಡ ಚರ್ಚೆಯಾಗಿ ಮಾರ್ಪಟ್ಟಿದೆ.

## ದಾಂಡಿಗರ ಆರ್ಭಟ: ವಿಶ್ವ ದಾಖಲೆಯ ಮೊತ್ತ ಪೇರಿಸಿದ ಐರ್ಲೆಂಡ್

ಒಮಾನ್ ವಿರುದ್ಧದ ಟಿ20 ವಿಶ್ವಕಪ್ ಪಂದ್ಯದಲ್ಲಿ ಐರ್ಲೆಂಡ್ ಬ್ಯಾಟರ್‌ಗಳು ಅಕ್ಷರಶಃ ಅಬ್ಬರಿಸಿದ್ದಾರೆ. ಈ ಅಬ್ಬರದೊಂದಿಗೆ ಟಿ20 ವಿಶ್ವಕಪ್‌ನಲ್ಲಿ ಹೊಸ ದಾಖಲೆಯುವಲ್ಲಿ ಐರಿಷ್ ಪಡೆ ಯಶಸ್ವಿಯಾಗಿದೆ. ಅದು ಕೂಡ ಬರೋಬ್ಬರಿ 235 ರನ್ ಪೇರಿಸುವ ಮೂಲಕ ಎಂಬುದು ವಿಶೇಷ.




**ವಿಶ್ವದ 2ನೇ ತಂಡ ಎಂಬ ಹೆಗ್ಗಳಿಕೆ**

ಟಿ20 ವಿಶ್ವಕಪ್‌ನ 22ನೇ ಪಂದ್ಯದಲ್ಲಿ ಐರ್ಲೆಂಡ್ ತಂಡವು ಬರೋಬ್ಬರಿ 235 ರನ್ ಕಲೆಹಾಕಿದೆ. ಈ ಬೃಹತ್ ಮೊತ್ತದೊಂದಿಗೆ ಐರಿಷ್ ಪಡೆ ವಿಶೇಷ ವಿಶ್ವ ದಾಖಲೆಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಅಂದರೆ ಚೊಚ್ಚಲ ಟಿ20 ವಿಶ್ವಕಪ್ ಬಳಿಕ ಯಾವುದೇ ತಂಡ 230+ ಸ್ಕೋರ್‌ಗಳಿಸಿರಲಿಲ್ಲ. ಇದೀಗ ಒಮಾನ್ ವಿರುದ್ಧ ಐರ್ಲೆಂಡ್ ದಾಂಡಿಗರು ಆರ್ಭಟಿಸುವ ಮೂಲಕ ಹೊಸ ವಿಶ್ವ ದಾಖಲೆ ನಿರ್ಮಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಕೊಲಂಬೊದ ಎಸ್‌ಎಸ್‌ಸಿ ಸ್ಟೇಡಿಯಂನಲ್ಲಿ ನಡೆದ ಈ ಪಂದ್ಯದಲ್ಲಿ ಟಾಸ್ ಗೆದ್ದ ಒಮಾನ್ ಬೌಲಿಂಗ್ ಆಯ್ದುಕೊಂಡಿದ್ದರು. ಅದರಂತೆ ಮೊದಲು ಬ್ಯಾಟ್ ಮಾಡಿದ ಐರ್ಲೆಂಡ್ ತಂಡವು ಉತ್ತಮ ಆರಂಭವೇನು ಪಡೆದಿರಲಿಲ್ಲ. ಆರಂಭಿಕರಾದ ಟಿಮ್ ಟೆಕ್ಟರ್ (5), ರೋಸ್ ಅಡೈರ್ (14) ಬೇಗನೆ ವಿಕೆಟ್ ಒಪ್ಪಿಸಿದ್ದರು. ಇನ್ನು ಮೂರನೇ ಕ್ರಮಾಂಕದಲ್ಲಿ ಕಣಕ್ಕಿಳಿದ ಹ್ಯಾರಿ ಟೆಕ್ಟರ್ ಕೂಡ 14 ರನ್‌ಗಳಿಸಿ ಔಟಾಗಿದ್ದರು. ಆದರೆ ನಾಲ್ಕನೇ ಕ್ರಮಾಂಕದಲ್ಲಿ ಬ್ಯಾಟ್ ಬೀಸಿದ ನಾಯಕ ಲೋರ್ಕನ್ ಟಕರ್ ಸಿಡಿಲಬ್ಬರದ ಬ್ಯಾಟಿಂಗ್ ಪ್ರದರ್ಶಿಸಿದರು. ಕ್ರೀಸ್‌ಗೆ ಆಗಮಿಸುತ್ತಿದ್ದಂತೆ ಅಬ್ಬರ ಶುರು ಮಾಡಿದ ಟಕರ್ ಒಮಾನ್ ಬೌಲರ್‌ಗಳನ್ನು ಮನಸೋ ಇಚ್ಛೆ ದಂಡಿಸಿದರು.

ಪರಿಣಾಮ ಟಕರ್ ಬ್ಯಾಟ್‌ನಿಂದ 51 ಎಸೆತಗಳಲ್ಲಿ 4 ಭರ್ಜರಿ ಸಿಕ್ಸ್ ಹಾಗೂ 10 ಫೋರ್‌ಗಳೊಂದಿಗೆ 94 ರನ್ ಮೂಡಿಬಂತು.

ಇನ್ನು ಆರನೇ ಕ್ರಮಾಂಕದಲ್ಲಿ ಬ್ಯಾಟ್ ಬೀಸಿದ ಗ್ಯಾರೆತ್ ಡೆಲಾನಿ 30 ಎಸೆತಗಳಲ್ಲಿ 4 ಸಿಕ್ಸ್ ಹಾಗೂ 3 ಫೋರ್‌ಗಳೊಂದಿಗೆ 56 ರನ್ ಚಚ್ಚಿದರು. ಹಾಗೆಯೇ ಜಾರ್ಜ್ ಡಾಕ್ರೆಲ್ 9 ಎಸೆತಗಳಲ್ಲಿ 5 ಸಿಕ್ಸರ್‌ನೊಂದಿಗೆ 35 ರನ್ ಸಿಡಿಸಿದರು. ಈ ಸಿಡಿಲಬರಬ್ಬದ ಬ್ಯಾಟಿಂಗ್‌ನೊಂದಿಗೆ ಐರ್ಲೆಂಡ್ ತಂಡವು 20 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 235 ರನ್ ಕಲೆಹಾಕಿತು.

235 ರನ್‌ಗಳೊಂದಿಗೆ ಟಿ20 ವಿಶ್ವಕಪ್ ಇತಿಹಾಸದಲ್ಲಿ ಗರಿಷ್ಠ ಸ್ಕೋರ್ ಗಳಿಸಿದ ಅಸೋಸಿಯೇಟ್ ನೇಷನ್ ತಂಡ ಎಂಬ ವಿಶ್ವ ದಾಖಲೆ ಐರ್ಲೆಂಡ್ ಪಾಲಾಯಿತು. ಅಷ್ಟೇ ಅಲ್ಲದೆ ಟಿ20 ವಿಶ್ವಕಪ್ ಇತಿಹಾಸದಲ್ಲಿ ಗರಿಷ್ಠ ಸ್ಕೋರ್ ಕಲೆಹಾಕಿದ ವಿಶ್ವದ 2ನೇ ತಂಡ ಎಂಬ ಹೆಗ್ಗಳಿಕೆಯನ್ನು ಕೂಡ ಐರ್ಲೆಂಡ್ ತನ್ನದಾಗಿಸಿಕೊಂಡಿದೆ. ಈ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿರುವುದು ಶ್ರೀಲಂಕಾ. ಲಂಕಾ ಪಡೆ 2007 ರ ಟಿ20 ವಿಶ್ವಕಪ್‌ನಲ್ಲಿ 260 ರನ್ ಪೇರಿಸಿ ಈ ದಾಖಲೆ ನಿರ್ಮಿಸಿದ್ದಾರೆ.

ಇದೀಗ ಐರ್ಲೆಂಡ್ ತಂಡವು 235 ರನ್ ಕಲೆಹಾಕುವ ಮೂಲಕ ಈ ಪಟ್ಟಿಯಲ್ಲಿ ದ್ವಿತೀಯ ಸ್ಥಾನದಲ್ಲಿ ಕಾಣಿಸಿಕೊಂಡಿದ್ದಾರೆ. ಅದರಲ್ಲೂ ಟಿ20 ವಿಶ್ವಕಪ್ ಇತಿಹಾಸದಲ್ಲೇ 230+ ರನ್ ಕಲೆಹಾಕಿದ ವಿಶ್ವದ 2ನೇ ತಂಡವೆಂಬ ಹೆಗ್ಗಳಿಕೆಯನ್ನು ಐರ್ಲೆಂಡ್ ತಮ್ಮದಾಗಿಸಿಕೊಂಡಿದ್ದಾರೆ.

# ಮತ್ತೆ ಶಾಲೆಯತ್ತ ಮುಖ ಮಾಡಿದ ವೈಭವ್

ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ 1.10 ಕೋಟಿ ರೂ. ಸಂಭಾವನೆ ಪಡೆಯುತ್ತಿರುವ ವೈಭವ್ ಸೂರ್ಯವಂಶಿ ಮತ್ತೆ ಶಾಲೆಯತ್ತ ಮುಖ ಮಾಡಿದ್ದಾರೆ. ಈ ಬಾರಿ ಅವರು ಶಾಲೆಗೆ ಹೋಗುತ್ತಿರುವುದು 10ನೇ ತರಗತಿ ಪರೀಕ್ಷೆ ಬರೆಯಲು ಎಂಬುದು ವಿಶೇಷ. ಈ ಪರೀಕ್ಷೆಯ ಬಳಿಕ ಅವರು ಐಪಿಎಲ್‌ಗಾಗಿ ಸಜ್ಜಾಗಲಿದ್ದಾರೆ. ಟೀಮ್ ಇಂಡಿಯಾದ ಯಂಗ್ ಸೆನ್ಸೇಷನ್ ವೈಭವ್ ಸೂರ್ಯವಂಶಿ ಮತ್ತೆ ಶಾಲೆಯತ್ತ ಮುಖ ಮಾಡಿದ್ದಾರೆ. ಅದು ಸಹ 14 ವಯಸ್ಸಿನೊಳಗೆ 3 ಭರ್ಜರಿ ಟಿ20 ಶತಕ, 4 ಏಕದಿನ ಶತಕ, ಒಂದು ಟೆಸ್ಟ್ ಸೆಂಚುರಿ ಸಿಡಿಸಿದ ಬಳಿಕ ಎಂಬುದು ವಿಶೇಷ. ಆದರೆ ಈ ಬಾರಿ ವೈಭವ್ ಶಾಲೆಗೆ ಹೋಗುತ್ತಿರುವುದು ಪರೀಕ್ಷೆ ಬರೆಯಲು. 2026ರ ಐಸಿಸಿ ಅಂಡರ್-19 ವಿಶ್ವಕಪ್ ಗೆದ್ದು ವಿಶ್ರಾಂತಿಯಲ್ಲಿದ್ದ ವೈಭವ್ ಸೂರ್ಯವಂಶಿ ಈಗ ತಮ್ಮ ಶೈಕ್ಷಣಿಕ ಪರೀಕ್ಷೆಗೆ ಸಜ್ಜಾಗಿದ್ದಾರೆ. ಫೆಬ್ರವರಿ 17, 2026 ರಿಂದ ಆರಂಭವಾಗಲಿರುವ 10ನೇ ತರಗತಿ ಬೋರ್ಡ್ ಪರೀಕ್ಷೆಗಳನ್ನು ಬರೆಯಲು ವೈಭವ್ ಹಾಲ್ ಟಿಕೆಟ್ ಪಡೆದುಕೊಂಡಿದ್ದಾರೆ. ಬಿಹಾರದ ಸಮಸ್ತಿಪುರದ ಪೋಡಾರ್ ಇಂಟರ್ನ್ಯಾಷನಲ್ ಸ್ಕೂಲ್ ವಿದ್ಯಾರ್ಥಿಯಾಗಿರುವ ವೈಭವ್ ಸೂರ್ಯವಂಶಿ ಫೆಬ್ರವರಿ 17 ರಿಂದ ಪರೀಕ್ಷೆಗೆ ಹಾಜರಾಗಲಿದ್ದಾರೆ.

ವಿಶ್ವಕಪ್ ಹೀರೊ ಆಗಿದ್ದರೂ ಸಹ, ಶಾಲಾ ನಿಯಮದಂತೆ ಅವರಿಗೆ ಯಾವುದೇ ವಿಶೇಷ ಸೌಲಭ್ಯ ನೀಡದೆ ಸಾಮಾನ್ಯ ವಿದ್ಯಾರ್ಥಿಯಂತೆಯೇ ಪರೀಕ್ಷೆ ನಡೆಸಲಾಗುವುದು ಎಂದು ಶಾಲಾ ಪ್ರಾಂಶುಪಾಲರು ತಿಳಿಸಿದ್ದಾರೆ. ವೈಭವ್ ಸೂರ್ಯವಂಶಿ ಒಟ್ಟು 5 ಪರೀಕ್ಷೆ ಬರೆಯಲಿದ್ದಾರೆ ಎಂದು ವರದಿಯಾಗಿದೆ. 10ನೇ ತರಗತಿ ಪರೀಕ್ಷೆ ಬಳಿಕ ವೈಭವ್ ಸೂರ್ಯವಂಶಿ ಇಂಡಿಯನ್ ಪ್ರೀಮಿಯರ್ ಲೀಗ್‌ಗೆ ಸಜ್ಜಾಗಲಿದ್ದಾರೆ. ಮಾರ್ಚ್ 26 ರಿಂದ ಶುರುವಾಗಲಿರುವ ಐಪಿಎಲ್ ಸೀಸನ್-19 ರಲ್ಲಿ ವೈಭವ್ ರಾಜಸ್ಥಾನ್ ರಾಯಲ್ಸ್ ಪರ ಕಣಕ್ಕಿಳಿಯಲಿದ್ದಾರೆ.




Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966